ಮಹಾತ್ಮರ ಮನೋರಂಗ

ಅನುವಾದಕರು:
ಶ್ರೀ. ರಂ. ರಾ. ದಿವಾಕರ

ಜೀವನದ ವಿವಿಧ ಸಮಸ್ಯೆಗಳ ಬಗ್ಗೆ ಗಾಂಧೀಜಿಯ ವಿಚಾರಗಳನ್ನು ಅವರ ಭಾಷಣ ಲೇಖನಗಳಿಂದಲೇ ಆಯ್ದು, ಸಂಗ್ರಹಿಸಿದ ಪುಸ್ತಕ.

೩೦೪ ಪುಟ, ಬೆಲೆ ೪-೮-೦
ಸಾಹಿತ್ಯ ಭಾಂಡಾರ, ಹುಬ್ಬಳ್ಳಿ

ಬೆಲೆ: ಎರಡು ಆಣೆ

ಕರ್ಮವೀರ

KARMAVEER WEEKLY, HUBLI

ಅಖಿಲ ಕರ್ನಾಟಕದಲ್ಲಿ ಅತ್ಯಂತ ಜನಪ್ರಿಯ ವಾರಪತ್ರಿಕೆ

ವಚನಶಾಸ್ತ್ರ ರಹಸ್ಯ
ಲೇ: ಶ್ರೀ. ರಂ. ರಾ. ದಿವಾಕರ
[illegible]
ಸಾಹಿತ್ಯ ಭಾಂಡಾರ, ಹುಬ್ಬಳ್ಳಿ

ಸಂಪಾದಕರು:
ಹ. ರಾ. ಪುರೋಹಿತ, ಎಂ.ಎ.

Editor:
H. R. PUROHIT, M.A.


—[ಸಂಪುಟ ೧೯]—

ಹುಬ್ಬಳ್ಳಿ ಸೋಮವಾರ ತಾರೀಖು ೨೯—೧೨—೧೯೪೭

—[ಸಂಚಿಕೆ ೩೭]—

ಹೊರನಾಡಿಗ ಕಂಡ ಮಹಾತ್ಮರ ಪವಿತ್ರ ಜೀವನ

ಮುಪ್ಪಿನಲ್ಲಿಯೂ ಸತತೋದ್ಯಮ— ಶಾಂತಿಗಾಗಿ ಅಹೋರಾತ್ರ ದುಡಿತ— ಆಹಾರ ವ್ಯವಹಾರ ನಿಯಮ— ಪ್ರಾರ್ಥನೋತ್ತರ ಭಾಷಣ— ಗಾಂಧಿಯವರು ಕಂಡ ಸತ್ಯ-



೭೯ ವರ್ಷ ವಯಸ್ಸಿನ ಮಹಾತ್ಮಾ ಗಾಂಧಿಯವರಿಂದು ವಿಭಜನೆಯಿಂದ ಕಂಗೆಟ್ಟ ಸ್ವತಂತ್ರ ಭಾರತದ ಕೋಟ್ಯವಧಿ ಜನತೆಯ ದುಃಖವನ್ನು ನಿವಾರಿಸುವ ಸದ್ಗುರುಗಳೆನಿಸಿದ್ದಾರೆ. ಅವರ ನಿತ್ಯ ಜೀವನವನ್ನು ಕಣ್ಣಾರೆ ಕಂಡು ಮೆಚ್ಚಿಕೊಂಡ, ನ್ಯೂಯಾರ್ಕಿನಿಂದ ಹೊರಡುವ "ವರ್ಲ್ಡ್ ರಿಪೋರ್ಟ್" ಎಂಬ ಪತ್ರಿಕೆಯ ಸುದ್ದಿಗಾರರಾದ ಶ್ರೀ ಫ್ರಾಂಕ್ ರಾಂಡ್ಸ್‌ರವರು ಮಹಾತ್ಮರ ಬಗ್ಗೆ ಕೆಳಗಿನಂತೆ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

ಬ್ರಿಟಿಶರಿಂದ ಭಾರತಕ್ಕೆ ದೊರೆತ ಹೊಸ ಸ್ವಾತಂತ್ರ್ಯಕ್ಕೆ ಮಿಕ್ಕೆಲ್ಲ ಏಕೈಕ ಕಾರಣಕ್ಕಿಂತ ಮೋಹನದಾಸ ಕರಮಚಂದ ಗಾಂಧಿಯವರ ಪ್ರಭಾವವೇ ಹೆಚ್ಚಿನದು. ಭಾರತೋಪಖಂಡಕ್ಕೆ ಸ್ವಾತಂತ್ರ್ಯವನ್ನು ಗೆದ್ದುಕೊಡಲು ಗಾಂಧಿಯವರು ೩೦ ವರ್ಷಗಳ ಕಾಲ ದುಡಿದರು, ಹಸಿದರು, ನಡೆದರು, ನುಡಿದರು. ಈಗ ಅವರ ಗೆಲುವಿನ ಅರ್ಧಭಾಗ ಅವರ ಕೈಯ್ಯಲ್ಲಿದೆ. ಆದರೆ ಬ್ರಿಟಿಶರಿಂದ ಪಡೆದ ಬಿಡುಗಡೆಯೊಡನೆ ಆಂತರಿಕ ವಿಭಜನೆಯೂ ಬಂದುಬಿಟ್ಟಿದೆ; ಅದರಿಂದ ಭಾರತ ಇಬ್ಭಾಗವಾಗಿ ಹಿಂದು ಹಿಂದುಸ್ತಾನ ಮುಸ್ಲಿಂ ಪಾಕಿಸ್ತಾನಗಳೆಂಬ ಎರಡು ಅಧಿರಾಜ್ಯಗಳು ಉದಯಿಸಿದವು. ಸ್ವತಂತ್ರವಾದ ಹಿಂದುಸ್ತಾನವು ಎಂದಿಗಿಂತ ಇಂದು ಹೆಚ್ಚು ಒಡೆದು ಚೂರಾಗಿದೆ. ಸಾಂಗವಾದ ಯಾದವಿ ಯುದ್ಧವು ಅಲ್ಲಿ ಸಂಭಾವ್ಯವಿದೆ.

ಅದುದರಿಂದ ತಮ್ಮ ವಯಸ್ಸಿನ ೭೯ ನೆಯ ಹಂತದಲ್ಲಿರುವ ಗಾಂಧಿಯವರು ಈಗಲೂ ದುಡಿಯುತ್ತಿದ್ದಾರೆ. ಉಪವಾಸ ಬೀಳುತ್ತಿದ್ದಾರೆ, ನಡೆಯುತ್ತಿದ್ದಾರೆ, ನುಡಿಯುತ್ತಿದ್ದಾರೆ. ಏಕೆ? ೧೫ ಲಕ್ಷ ೭೫ ಸಾವಿರ ಚ. ಮೈಲು ವಿಸ್ತಾರದ ತಮ್ಮ ಮಾತೃಭೂಮಿಯನ್ನು ಒಂದುಮಾಡಿ ಶಾಂತಿ ಸ್ವಾತಂತ್ರ್ಯಗಳುಣಿಸನ್ನೀಯಲು!

ಗಾಂಧಿಯವರ ಪುಣ್ಯಾಶ್ರಮ

ಹೊಸದಿಲ್ಲಿಯಲ್ಲಿ ಒಂದು ಹಿಂದು ದೇವಾಲಯದ ಚಿಕ್ಕ ಇಟ್ಟಿಗೆ ಮತ್ತು ಮಣ್ಣಿನ ಅಟ್ಟದ ಮೇಲೆ ಗಾಂಧಿಯವರ ಸದ್ಯದ ಮುಖ್ಯ ಕಚೇರಿಯಿದೆ. ಭಾರತದ ಸ್ವಾತಂತ್ರ್ಯಕ್ಕಾಗಿ ಅಲ್ಲಿ ಸುದೀರ್ಘವೂ ಸಹನಾಪೂರ್ಣವೂ ಆದ ಪ್ರಯತ್ನ ಸಾಗಿದೆ.

ಹೊಸದಿಲ್ಲಿಯಿಂದ ಅರ್ಧ ಮೈಲು ದೂರದಲ್ಲಿ ಭಂಗಿ ವಸತಿಯ ಅಂಚಿನಲ್ಲಿರುವ ಈ ಚಿಕ್ಕ ಭೂಪ್ರದೇಶವು ಲಕ್ಷೋಪಲಕ್ಷ ಜನರಿಗೆ ಇಡೀ ಹಿಂದುಸ್ತಾನದಲ್ಲಿ ಬಹು ಮುಖ್ಯವಾದ ಸ್ಥಳವೆನಿಸಿದೆ. ಗಾಂಧಿಯವರು ರಾಜಧಾನಿಗೆ ಬಂದರೆ ಇದೇ ಅವರು ಉಳಿದುಕೊಂಬ ಸ್ಥಳ- ಇದು ಅಸ್ಪೃಶ್ಯರ ಮಣ್ಣಿನ ಮನೆಗಳಲ್ಲೊಂದು. ಅಸ್ಪೃಶ್ಯರೆಂದರೆ ದರಿದ್ರರು, ದಿಲ್ಲಿಯ ಬೀದಿ, ವಸತಿಮಾರ್ಗಗಳ ಕಸಬಳಿಯುವವರು. ವರ್ಣಭೇದಕ್ಕೆ ತಿರಸ್ಕಾರವನ್ನು ಸೂಚಿಸಲೆಂದೇ ಗಾಂಧಿಯವರು ಬುದ್ಧಿಪೂರ್ವಕವಾಗಿ ಈ ಸ್ಥಳವನ್ನು ಆರಿಸಿಕೊಂಡಿದ್ದಾರೆ. ವರ್ಣಾಗಮವು ಹೊಲೆಯರು ಅಶುಚಿವಂತರು ಮತ್ತು ವರ್ಣಬಾಹಿರರು ಎಂದು ಹೇಳುತ್ತದೆ.

ಹೀಗೆ ದೇವಾಲಯದ ಗೋಪುರದ ನೆರಳಿನಲ್ಲಿ ಗಾಂಧಿಯವರ ಗೃಹವಿದೆ. ಅದು ಒಂದೇ ಒಂದು ಕೋಣೆ, ಮಣ್ಣು ಮತ್ತು ಗಾರೆಯಿಂದ ಕಟ್ಟಿದ್ದು. ಆಕಾಶದೆಡೆ ಹತ್ತಿಲುದಾಗಿದೆ. ಕಣ್ಣು ಕುರುಡಾಗಿಸುವ ಬಿಸಿಲನ್ನಾಗಲಿ, ೧೨೦ ಡಿಗ್ರಿಯ ಮರುಸ್ಥಲದ ಉಷ್ಣಾಂಶವನ್ನಾಗಲಿ ಒಳಬಿಡಲು ಆ ಕೋಣೆಗೆ ಕಿಟಿಕಿಗಳಿಲ್ಲ. ತಗ್ಗಾದ ಮುಂಬಾಗಿಲ ಮುಂದೆ ಒಂದು ಒರಟಾದ ಹುಲ್ಲುತಟ್ಟಿಯಿದೆ. ಅರ್ಧಗಂಟೆಗೊಮ್ಮೆ ಬರಿಗಾಲಿಂದ ಒಬ್ಬ ಹುಡುಗ ಬಂದು ಹಳದಿಯ ಚಾಪೆಗಳ ಮೇಲೆ ತಣ್ಣೀರು ಚಿಮುಕಿಸುತ್ತಾನೆ.

ಪ್ರಶಾಂತತೆ

ಅಲ್ಲಿ ರಾತ್ರಿ ೧೦॥ ಯಲ್ಲಿ ಕೂಡ ಒಳಗೆ ಮಲಗಲಾರದಷ್ಟು ಸೆಕೆ. ನಾವೆಲ್ಲರೂ ನಮ್ಮ ನಮ್ಮ ಮರದ ಮಂಚಗಳನ್ನು ತೆಗೆದೊಯ್ದು ಅಟ್ಟದ ಮೇಲೆ ಮಲಗಿಕೊಳ್ಳಬೇಕಾಯ್ತು. ನನ್ನ ಮಂಚದ ಕಾಲಿಗೆ ೨ ಅಡಿಗಳನ್ನು ಕಟ್ಟಿದ್ದರು. ಗಾಂಧಿಯವರ ಹುರಿಹಗ್ಗದ ಮಂಚ ನನ್ನಿಂದ ಕೆಲ ಅಡಿಗಳ ದೂರದಲ್ಲಿತ್ತು. ಮತ್ತು ಮಲಗುವ ಮುನ್ನ ಅವರು ಪದ್ಮಾಸನ ಹಾಕಿ ಕಣ್ದೆರೆದು ಏಕಾಕಿಯಾಗಿ, ಗಂಭೀರವಾಗಿ ಮೇಲೆ ನೋಡುತ್ತಿರುತ್ತಾರೆ. ಎಲ್ಲೆಡೆ ನಿಶ್ಶಬ್ದ. ಒಂದೇ ಒಂದು ಶಬ್ದವೆಂದರೆ, ಸೇವಕನೊಬ್ಬನು ದೇವಾಲಯದ ಹೊರಗೆ ಕೇಪನೆಯ ಶಂಖವೊಂದನ್ನು ಹಿಡಿದು ಊದುತ್ತಾನೆ. ಮತ್ತೊಬ್ಬನು ಮೆಲ್ಲನೆ ತಾಮ್ರದ ಜೇಗಟೆ ಬಡಿಯುತ್ತ ಸಾಯಂಪ್ರಾರ್ಥನೆಗೆ ಭಕ್ತರನ್ನು ಕರೆಯುತ್ತಾನೆ. ದೇವಾಲಯದಿಂದ ಹೊಳೆವ ದೀಪವೊಂದೇಸರಿ. ಅದೆಂದರೆ, ಒಂದು ಹಿತ್ತಾಳೆಯ ತಟ್ಟೆಯಲ್ಲಿ ಬೆಳಗುವ ಕರ್ಪೂರದ ನೀರಾಜನ. ಅದನ್ನು ನುರದಿಂದ ಮಾಡಿದ ಹಿಂದು ದೇವತೆಗಳಾದ ರಾಮ ಮತ್ತು ಶಿವಮೂರ್ತಿಗಳೆದುರು ೩ ಸಲ ಬಲದಿಂದ ಎಡಕ್ಕೂ ೩ ಸಲ ಎಡದಿಂದ ಬಲಕ್ಕೂ ಎತ್ತಲಾಗುತ್ತದೆ.

ಉಷಃಕಾಲಕ್ಕೆ ಮೊದಲು ಏಳುವುದು

ಅದೊಂದು ದೀರ್ಘವೂ ಅಸುಖಕರವೂ ಆದ ದಿನವಾಗಿತ್ತು. ನಾವು ೩॥ ಗೆ ಎದ್ದೆವು. ವರ್ಷದ ಪ್ರತಿದಿನವೂ ಗಾಂಧಿಯವರು ಅದೇ ಹೊತ್ತಿಗೆ ಎಚ್ಚರವಡೆಯುತ್ತಾರೆ. ಇಟ್ಟಿಗೆಯ ಅಟ್ಟದ ಮೇಲಿನ ಎಕ್ಕದದ ಸನ್ನಿಹಿದ ನನಗೆ ಎಚ್ಚರವಾಯಿತು. ರಾತ್ರಿಯೆಲ್ಲ ಅಲ್ಲಿ ಗುಸು ಗುಸು ಸಪ್ಪಳ ನಡೆದೇ ಇತ್ತು. ಅನೇಕ ಸಂದೇಶವಾಹಕರು ಬಂದು ಬಂದು ಗಾಂಧಿಯವರ ಮಂಚದ ಸನಿಹದಲ್ಲಿ ತಲೆಬಾಗಿ ಅವರ ಮಾತಿಗಾಗಿ ಕಾದಿದ್ದರು.

ಅನಂತರ ಗಾಂಧಿಯವರ ದೊಡ್ಡಕೈ ಗಡಿಯಾರವನ್ನು ನಾನು ಕೇಳಿದೆ. ಗಾಂಧಿಯವರ ಪ್ರಯಾಣದ ಹಾಸಿಗೆ ಮೇಲೆ ಅವರು ಒಂದು ವಿಶ್ವವಿದ್ಯಾಪವನ್ನು ತಂದಿಟ್ಟರು. ಅದೇ ಕಾಲದಲ್ಲಿ ರಾತ್ರಿಯೆಲ್ಲ ಆ ದೇಗುಲದ ಕೆರೆದ ವೇದಿಕೆಯಲ್ಲಿ ತಿರುಗುತ್ತಿದ್ದ ವಿದ್ಯುದ್ದ್ವ್ಯಜನವನ್ನು ಅವರು ನಿಲ್ಲಿಸಿದರು.

ಕಟ್ಟಕಡೆಗೆ ನಾನು ಕಣ್ದೆರೆದೆ. ಒರಟಾದ ಹುರಿಹಗ್ಗದ ಮಂಚದಮೇಲೆ ಮೊಣಕೈಯೂರಿದೆ. ಉಷಃಕಾಲದ ಮುಂಚಿನ ಕಾರ್ಗತ್ತಲಲ್ಲಿ ಗಾಂಧಿಯವರು ಪ್ರಾರ್ಥನೆ ಮಾಡುತ್ತಿರುವುದನ್ನು ನೋಡಿದೆ. ಅವರ ಮಂಚದ ಸುತ್ತಲೂ ಅವರ ಮೊಮ್ಮಗಳು ಮೊದಲಾದ ಅವರ ಸಮೀಪ ಬಂಧುಗಳಾದ ಹತ್ತು ಹುಡುಗಿಯರು ಪದ್ಮಾಸನ ಹಾಕಿಕುಳಿತಿದ್ದರು. ಅವರನ್ನು ಕಂಡರೆ ಬಿಳಿಯ ಸೀರೆಯನ್ನುಟ್ಟು ಕುಳಿತ ಪ್ರಾಚೀಯರಂತೆ ಕಾಣಿಸಿದರು. ಒಂದು ದೀರ್ಘವಾದ ಮೆಲ್ದನಿಯ ಗೀತಕ್ಕೆ ಅವರು ತಾಳ ಹಾಕಿದರು. ಗಾಂಧಿಯವರು ಮೆಲ್ಲಮೆಲ್ಲನೆ ತಮ್ಮ ಬರಿ ಮೈಯನ್ನು ತೂಗಾಡಿಸುತ್ತ ಅವರತ್ತ ನೋಡಿದರು. ಅನಂತರ ಒಂದು ಸುದೀರ್ಘ ಮೌನಾಂಕ ಪ್ರಾರಂಭವಾಯಿತು. ಮಧ್ಯದಲ್ಲಿ ಕಾಗೆ ಹಾರುತ್ತಿದ್ದದ್ದು ಮತ್ತು ಒಂದು ವಿಮಾನ ಹಾರಿದುದು ಈ ಎರಡೇ ಸದ್ದುಮಾಡಿದ ವಸ್ತುಗಳು.

ಭಾರತಕ್ಕೆ ಮಾರ್ಗದರ್ಶನ

ಕೊನೆಗೆ, ಹಣ್ಣಿನ ರಸವನ್ನು ಸ್ವಲ್ಪ ಸೇವಿಸಿ ಗಾಂಧಿಯವರು ತಮ್ಮ ಸದ್ಯದ ಕೆಲಸವನ್ನಾರಂಭಿಸಿದರು. ಆಗ ಬೆಳಗಿನ ಜಾವ ೪ ಗಂಟೆ. ೧ ಗಂಟೆಯ ಕಾಲ ಗಾಂಧಿಯವರು ತಮ್ಮ ಹಾಸಿಗೆಯ ಮೇಲೆ ಕುಳಿತು ಪತ್ರವ್ಯವಹಾರದಲ್ಲಿ ಲೀನರಾಗಿ ಹತ್ತಿರದ ದೀಪದ ಬೆಳಕಿನಲ್ಲಿ ಬರೆಯುತ್ತಲೂ ಓದುತ್ತಲೂ ಇದ್ದರು. ಒಮ್ಮೊಮ್ಮೆ ಸಣ್ಣ ದನಿಯಲ್ಲಿ ತಮ್ಮ ಕಾರ್ಯದರ್ಶಿಗಳಿಗೆ ಕಾಗದವನ್ನು ಉಕ್ತಲೇಖನ ಬರೆಯಹೇಳುತ್ತ ಇಲ್ಲವೆ ಅವರಿಗೆ ಕರ್ತವ್ಯ ನಿರ್ದೇಶ ಮಾಡುತ್ತ ಅವರು ಸಾಗುತ್ತಿದ್ದರು.

ಆ ಬಳಿಕ ಸೂರ್ಯನು ದೇಗುಲದ ಗೋಪುರವನ್ನು ಬೆಳಗಿಸಬಂದಾಗ ಗಾಂಧಿಯವರು ತಮ್ಮ ಪ್ರಾತಃಕಾಲದ ತಿರುಗಾಟಕ್ಕೆ ಹೊರಟರು. ಆ ತಿರುಗಾಟ ಒಂದು ಹುಲ್ಲುಗಾವಲಲ್ಲಿ ಸಾಗಿತು. ಆ ಸ್ಥಳ ಭಂಗಿವಸತಿಯಿಂದ ಸ್ವಲ್ಪ ದೂರದಲ್ಲಿತ್ತು. ತಿರುಗಾಟ ಅವರ ದಿನಚರಿಯಲ್ಲಿ ಒಂದು ಬಹು ಮುಖ್ಯ ಕಾರ್ಯ. ಆ ಕಾಲದಲ್ಲಿ ಅವರು ತಿರುಗಾಡುತ್ತ ಭಾರತದ ಮುಖಂಡರೊಡನೆ ಮಾತಾಡುತ್ತಿರುತ್ತಾರೆ.

ನಡುಕಾಗುತ್ತಲೆ ಅನೇಕ ಸ್ತ್ರೀಪುರುಷರು ದೇಶೀಯ ಪರದೇಶೀಯ, ಐಹಿಕ, ಆಮುಷ್ಮಿಕ ಸ್ವರೂಪದ ಸಮಸ್ಯೆಗಳನ್ನು ಬಿಡಿಸಿಕೊಡು[illegible] ಹೋಗಲು ಗಾಂಧಿಯವರ ಬಳಿಗೆ ಬರತೊಡಗುತ್ತಾರೆ, ಅತ್ಯಲ್ಪ ವೇಳೆಯಲ್ಲಿ ಅವರು ಸಮುತ್ತರ ಪಡೆದು ಮರಳುವರು. ಅನಂತರ [illegible] ಕ್ಕೆ ಗಾಂಧಿಯವರು ಎಣ್ಣೆ ಒತ್ತಿಸಿಕೊಳ್ಳುವರು. ಆರೋಗ್ಯ ರಕ್ಷಣೆಯ ಬಗ್ಗೆ ಅವರು ಅತ್ಯಾಸಕ್ತರು. ಆ ಬಳಿಕ ಸ್ನಾನ, ಅಹಿಸವಾಲಿನ [illegible] ಹಾರ. ೮ ಗಂಟೆಗೆ ಮರು [illegible] ಸಂಜೆ ೭ ರ ವರೆಗೆ. ನಡುವೆ [illegible] ಮತ್ತು ೧೦ ನಿಮಿಷ ವಿಶ್ರಾಂತಿ. ಮನೆಯೊಳಗೆ [illegible] ಒಂದು ಕಾಲುಮಣೆ ಇದೆ. ಅದರ ಮೇಲೆ ಸುಂದರವಾದ ಒಂದು ಬಿಳಿಯ ದಿಂಬಿದೆ. ಅಕ್ಕದಲ್ಲಿ ಕುಳಿತು ಗಾಂಧಿಯವರು ಜಗತ್ತಿನ ಸ್ಪರ್ಧಿಗಳಿಗೆ ಭೆಟ್ಟಿಕೊಡುತ್ತಾರೆ.

ಸಂಜೆಯ ಕಾರ್ಯಕ್ರಮ

ಸಂಜೆ ೭ ಕ್ಕೆ ಪ್ರಾರ್ಥನೋತ್ತರ ಭಾಷಣ. ಆಗ ನಾನಾ ಜಾತಿಯ ಸಾವಿರಾರು ಜನರು ನೆರೆಯುತ್ತಾರೆ. ತನ್ನ ಮೊಮ್ಮಕ್ಕಳ ಹೆಗಲ ಆಧಾರದ ಮೇಲೆ ಗಾಂಧಿಯವರು ಸರಿಯಾದ ವೇಳೆಗೆ ಪ್ರಾರ್ಥನಾ ಸಭೆಗೆ ತೆರಳುವರು. ಹೆಚ್ಚು ಕಡಿಮೆ ೧ ಗಂಟೆ ಮಾತಾಡುವರು. ಅವರು ಮಾತಾಡದ ವಿಷಯವೇ ಇಲ್ಲ. ಆದರೆ ಅವುಗಳಲ್ಲಿ [illegible] ಪದೇ ಪದೇ ಹೇಳುವುದು ಅಹಿಂಸೆಯ ವಿಷಯ.

ಪ್ರಾರ್ಥನಾ ನಂತರ

ಮರು ತಿರುಗಾಟ. ತಿರುಗಾಟದಲ್ಲಿ ಮುಖ್ಯ ಮುಖಂಡರೊಡನೆ ಮಾತುಕತೆ. ಒಮ್ಮೆ ನನ್ನ ಕಡೆ ನೋಡಿ ಹೇಳಿದರು- "ಜಗತ್ತು ಮದ್ಯ, ಮಾಂಸ, ಸ್ತ್ರೀ, ಧೂಮಪಾನ, ಅಣುಶಕ್ತಿ ಸಾಧನ- ಇವನ್ನು ಬಿಟ್ಟು ಹೊರತು ಶಾಂತಿಯನ್ನು [illegible] ಇವುಗಳಲ್ಲಿ ಶಾಂತಿ ಇಲ್ಲ." ಸ್ವಲ್ಪ ತಡೆದು- "ಅಮೇರಿಕನ್ನರಾದ ನೀವು [illegible] ತ್ತಿನಲ್ಲಿ ಅಳಿಯುತ್ತಿರುವಿರಿ? [illegible] ಸುಖ ನಿಮಗೆ ಬೇಕಾದಷ್ಟು [illegible]" ಎಂದರು.

ಏನೇ ಆದರೂ, ಹಿಂದುಸ್ತಾನವನ್ನು [illegible] ಗಾಂಧಿಯವರು [illegible] ಇಲ್ಲಿಯವರೆಗೆ ಅವರು ಹಿಂದೀಯರನ್ನು [illegible] ದ್ದರು. ಈಗೀಗ ಅವರ ಪ್ರಭಾವ ಕಾಣ್ತಿತ್ತದೆ. ಅವರ ಉಪದೇಶ [illegible] ಹಿಂದೆ ನೋಡುತ್ತಿದೆ.

ಎಷ್ಟೇ ರಕ್ತಪಾತವಾಗಲಿ, ಗಾಂಧಿಯವರು [illegible] ಹಿಂದುಸ್ತಾನ [illegible] ದೃಷ್ಟಿ [illegible]

ಮುಂಬಯಿ ಪ್ರಾಂತದ ಆಹಾರ ಸಮಸ್ಯೆ

ಅದರ ಪುನರ್ರಚನಾ ಯೋಜನೆ

ವಿಶೇಷ ಸಮಿತಿಯ ವರದಿ

ಆಹಾರದ ಕೊರತೆ ಮುಂಬಯಿ ಪ್ರಾಂತದಲ್ಲಿ ದಿನದಿನವೂ ಹೆಚ್ಚುತ್ತ ನಡೆದಿದೆ. ಹೊರಗಿನವರನ್ನು ಆಹಾರಕ್ಕಾಗಿ ಅವಲಂಬಿಸುವದೂ ನಡೆದೇ ಇದೆ. ಇದನ್ನು ತಪ್ಪಿಸಿ ಆಹಾರದ ಬೆಳವಣಿಗೆಯನ್ನು ಹೆಚ್ಚಿಸಬೇಕೆಂದು [illegible] ನವೆಂಬರ [illegible] ಪ್ರಮುಖ ಕಾರ್ಯಕರ್ತರ, ಇಂಜಿನಿಯರರ, ಅರ್ಥಶಾಸ್ತ್ರಜ್ಞರ, ಕೃಷಿ ನಿಷ್ಣಾತರ [illegible] ಸಭೆಯೊಂದನ್ನು ಪುಣೆಯ ಡೆಕ್ಕನ್ ಅಗ್ರಿಕಲ್ಚರಲ್ ಅಸೋಸಿಯೇಶನ್ನಿನವರು ಕರೆದಿದ್ದರು. ವಿಚಾರವಿನಿಮಯ ಮಾಡಿ ಯೋಗ್ಯ ಸೂಚನೆಗಳೊಂದಿಗೆ ಸರಕಾರಕ್ಕೆ ಈ ಬಗ್ಗೆ ಒಂದು ಯೋಜನೆಯನ್ನು ಒಪ್ಪಿಸಬೇಕೆಂಬುದೇ ಈ ಸಭೆಯ ಉದ್ದೇಶ. ಈ ಬಗೆಯ ಆಮಂತ್ರಣಕ್ಕೆ ಒಳ್ಳೆ ಮನ್ನಣೆಯೂ ದೊರಕಿತು; ಅನೇಕ ಆಮಂತ್ರಿತ ತಜ್ಞರು ವಿಚಾರದಲ್ಲಿ ಭಾಗವಹಿಸಲು ಬಂದಿದ್ದರು. ಮತ್ತು ಉಪಯುಕ್ತ ಸೂಚನೆಗಳನ್ನು ಕೊಟ್ಟರು. ಕೊನೆಗೆ ನಿರ್ದಿಷ್ಟ ಯೋಜನೆ [illegible] ತಜ್ಞರಿಂದ ಕೂಡಿದ ಒಂದು [illegible] ಸಮಿತಿಯನ್ನು ನೇಮಿಸಲಾಯಿತು. ಸಮಿತಿಗೆ ಪ್ರೊಫೆಸರ ಎಸ್. ಎಲ್. ಅಜರೇಕರರು ಅಧ್ಯಕ್ಷರಾಗಿಯೂ, ಪ್ರಿನ್ಸಿಪಾಲ ಡಿ. ಆರ್. ಗಾಡಗೀಳರು ಚಾಲಕರಾಗಿಯೂ ನಿಯೋಜಿತರಾಗಿದ್ದಾರೆ. [illegible] ಎನ್. ವ್ಹಿ. ಕಾನಿಟ್ಕರರೂ ಶ್ರೀ. ಕೆ. ವ್ಹಿ. [illegible] ಅವರೂ ಜಂಟಿ ಕಾರ್ಯದರ್ಶಿಗಳಾಗಿದ್ದರು.

ಸಮಿತಿಯ ವರದಿ

ಆಹಾರ ಪೂರೈಕೆಯ ವಿಷಯದಲ್ಲಿ ಮುಂಬಯಿ [illegible] ಕೊರತೆಯದಾಗಿದೆ. ಯುದ್ಧಪೂರ್ವದಲ್ಲಿ ಈ ಪ್ರಾಂತಕ್ಕೆ ಬರ್ಮಾದಿಂದ ದೊಡ್ಡ ಪ್ರಮಾಣದಲ್ಲಿ ಅಕ್ಕಿ ಬರುತ್ತಿತ್ತು. ಸಜ್ಜೆ ಮತ್ತು ಜೋಳಗಳು ಉತ್ತರ ಹಿಂದುಸ್ತಾನದಿಂದ ಗೋದಿ [illegible] ಮಧ್ಯಪ್ರಾಂತದಿಂದ ಬರುತ್ತಿತ್ತು. [illegible] ಆಹಾರದ ಕೊರತೆ ಇನ್ನೂ ತೀಕ್ಷ್ಣವಾಗಿ [illegible] ಲಕ್ಷ ಟನ್ ಆಹಾರ ಕೊರತೆ [illegible] ಲೆಕ್ಕಾಚಾರ ತೋರಿಸುತ್ತದೆ. ಯುದ್ಧ [illegible] ಎರಡು ವರ್ಷಗಳಾಗಿದ್ದರೂ ಆಹಾರ ಪರಿಸ್ಥಿತಿಯೇನೂ ಸುಧಾರಿಸಲಿಲ್ಲವಷ್ಟೆ ಅಲ್ಲ ಪೂರೈಕೆ [illegible] ವಿಷಯಗಳಲ್ಲಿ ಅದು ಕೆಡುತ್ತಲೇ [illegible]. ದೇಶ ವಿಭಾಗದಿಂದಂತೂ ಅದು ಇನ್ನು [illegible]. ಸರ್ವಸಾಮಾನ್ಯ ಉಪಾಯಗಳು ಸಮಸ್ಯೆಯನ್ನು ಬಗೆಹರಿಸಲು ಸಾಧ್ಯವಾಗದೆ [illegible] ಇದಕ್ಕಾಗಿ ಒಂದು ವಿಶಿಷ್ಟ ಯೋಜನೆಯನ್ನು ರೂಪಿಸುವದು ಅಗತ್ಯವಾಗಿದೆ.

[illegible]ಕಾರ ಕೈಕೊಂಡ ಉಪಾಯಗಳು

ಆಹಾರ ಉತ್ಪಾದನೆಯನ್ನು ಹೆಚ್ಚಿಸಲು ಸರಕಾರವು ಕೈಕೊಂಡ ಉಪಾಯಗಳನ್ನು ಕೂಲಂಕಷವಾಗಿ ಸಮಿತಿಯು ಪರಿಶೀಲಿಸಿತು. ಅವು ಹೀಗಿವೆ- [illegible] ಆಹಾರ ಬೆಳೆಯ ಹೆಚ್ಚಳದ ಕಾಯಿದೆ [illegible] ಸುಧಾರಿಸಿದ ಬೀಜಗಳನ್ನು ಹಂಚುವದು. ೩. [illegible] ತಯಾರಿಸುವಿಕೆ ಮತ್ತು ಹಂಚುವಿಕೆ. [illegible] ಗಳ ಮೂಲಕ ಹೊಲಗಳನ್ನು [illegible]ವದು. ೫. ಬಾವಿ ಕಟ್ಟಿಸಲು ಮತ್ತು [illegible] ಮಾಡಲು ಪ್ರೋತ್ಸಾಹ. ೬. ಸಣ್ಣ ನೀರಾವರಿ ಯೋಜನೆ. ೭. ಪಂಪುಗಳಿಂದ [illegible] ಯಂತ್ರ ಕೊಡಿಸುವದು. ೮. ದೊಡ್ಡ ನೀರಾವರಿ ಯೋಜನೆ ಕೈಕೊಳ್ಳುವದು. ಮುಂಬಯಿ ಪ್ರಾಂತದ [illegible] ಅಂಕಿ[illegible]ಗಳಿಂದ ೧೦೦ಕ್ಕೆ ೪॥ ಪ್ರಮಾಣದಲ್ಲಿ [illegible] ಹೊಲಗಳು ನೀರಾವರಿಯ ಪ್ರಯೋಜನ [illegible] ಎಂದು ತಿಳಿಯುತ್ತದೆ. ಇನ್ನು [illegible] ಪ್ರಮಾಣದ ಭೂಮಿಗೆ ನೀರು ದೊರೆಯುವದಿಲ್ಲ. ಸಕಾಲಕ್ಕೆ ಸಾಕಷ್ಟು ಮಳೆ [illegible] ಇಲ್ಲದಿದ್ದರೆ ಇಲ್ಲ. ಕಾರಣ ಬೆಳೆಯು [illegible] ವರ್ಷದಿಂದ ವರ್ಷಕ್ಕೆ ತಗ್ಗುತ್ತ ನಡೆದಿದೆ. [illegible] ಅನಿಶ್ಚಿತ ಪೂರೈಕೆಯೆ ಇದಕ್ಕೆ ಕಾರಣ [illegible] ಮೇಲ್ಕಾಣಿಸಿದ [illegible] ಉಪಾಯಗಳು ಅಷ್ಟು ಫಲಕಾರಿಯಾಗು[illegible]. ಇವೇ ಉಪಾಯಗಳನ್ನು ಅವಲಂಬಿಸಿ [illegible] ಆಹಾರ ಉತ್ಪಾದನೆಯ [illegible] ಸಾಧ್ಯವಿಲ್ಲ. ನೀರಿನ [illegible] ಮೂಲಭೂತ ಉಪಾಯವಾಗಿದೆ [illegible] ಬೇಕಾದಾಗ ಸಾಕಷ್ಟು ನೀರು [illegible] ನೋಡಿಕೊಳ್ಳುವದು [illegible]. ಸಂತತವಾಗಿ ನೀರು ದೊರ[illegible] ಒಂದೇ ಹೊಲದ ತುಂಡಿನಲ್ಲಿ ಒಂದು [illegible] ಬೆಳೆ ತೆಗೆಯಬಹುದಾಗಿದೆ. ಇದರಿಂದ ಆಹಾರೋತ್ಪಾದನೆ ಇಮ್ಮಡಿಸುವದಲ್ಲದೆ ಸಂದಿಗ್ಧ ಪರಿಸ್ಥಿತಿಯೂ ಇಲ್ಲದಾಗುವದು. ಅದ್ದರಿಂದ ಕೊನೆತನಕ ಬಾಳುವ ಯೋಜನೆ ಮಾಡುವದಾದರೆ ಮೊಟ್ಟಮೊದಲು ನಾವು ನೀರಾವರಿಯ ಕಾರ್ಯಕ್ರಮಕ್ಕೆ ಮಹತ್ವ ಕೊಟ್ಟು ಆ ಕೆಲಸದಲ್ಲಿ ತೊಡಗಬೇಕು.

ಅಧಿಕ ಆಹಾರೋತ್ಪಾದನದ ವಿಷಯದಲ್ಲಿ ಸರಕಾರದವರು ೫ರಿಂದ ಆನೆಯ ಕಲಮುಗಳನ್ನು ನೀರುದೊರೆವ ಎಲ್ಲ ವಿಧಾನಗಳನ್ನು ತಮ್ಮ ಕಾರ್ಯಕ್ರಮದಲ್ಲಿ ಬಳಸಿದ್ದನ್ನು ನಾವು ಬಲ್ಲೆವು. ಈ ಎಲ್ಲ ವಿಧಾನಗಳೂ ವರುಷವರುಷಕ್ಕೆ ಅಷ್ಟೇ ಪ್ರಯೋಜನಕಾರಿಯಾಗಲಾರವು. ಇವುಗಳ ಗುಣದೋಷಗಳನ್ನು ತೂಗಿ ನೋಡುವಾ.

೧. ಬಾವಿಗಳಿಂದ ನೀರು

ಬರುವ ೫ ವರ್ಷಗಳಲ್ಲಿ ಸರ್ಕಾರದವರು ೭೦,೦೦೦ ಬಾವಿಗಳನ್ನು ಅಗಿಸಬೇಕೆಂದು ಮಾಡಿದ್ದಾರೆ. ಇವುಗಳಲ್ಲಿ ೫೦,೦೦೦ದಷ್ಟು ಬಾವಿಗಳನ್ನು ಡೆಕ್ಕನ ಮತ್ತು ಕರ್ನಾಟಕದ ಅತ್ಯಂತ ಕಠಿಣ ಮತ್ತು ಶಿಲಾಮಯ ಪ್ರದೇಶಗಳಲ್ಲಿ ಅಗಿಸಬೇಕಾಗುವದು. ಇದು ಬಹು ದುಸ್ತರ ಕಾರ್ಯವೇ. ಅಲ್ಲದೆ ಇದೊಂದು ಬಗೆಯ ಜೂಜುಗಾರಿಕೆಯೇ. ಡಾ. ಹೆರಾಲ್ಡ, ಎಚ್. ಮ್ಯಾನ್‌ರೆಂಬ ಒಕ್ಕಲತನ ಶಾಖೆಯ ಹಿಂದಿನ ಡಾಯರೆಕ್ಟರರು ಈ ಪ್ರದೇಶಗಳಲ್ಲಿ ಅಗಿದ ಬಾವಿಗಳಲ್ಲಿ ನೂರಕ್ಕೆ ೪೦ ರಷ್ಟು ನಿಷ್ಫಲವೆಂದು ಅನುಭವದಿಂದ ಅಂದಿದ್ದಾರೆ. ಮಳೆ ಕಡಿಮೆ ಬಿದ್ದ ವರ್ಷ ಈ ಪ್ರದೇಶದ ಬಾವಿಗಳಲ್ಲಿ ನೀರಿನ ಸೆಲೆ ಸೊರಗಿ ಹೋಗುವದು; ಎಷ್ಟೋ ಸಲ ಬತ್ತಿಯೂ ಹೋಗುವದುಂಟು. ಈ ಭಾಗದಲ್ಲಿ ಭೂಗತ ಜಲ ಪ್ರವಾಹವನ್ನು ಕಂಡುಹಿಡಿಯುವುದು ಶಾಸ್ತ್ರಕ್ಕೆ ನಿಲುಕಿಲ್ಲ. ಆದರೂ ಈ ಭಾಗದ ಒಕ್ಕಲಿಗರು ಬಾವಿಯನ್ನು ಅಗಿದು ನೋಡುವ ಹವ್ಯಾಸಬಿಟ್ಟಿಲ್ಲ. ದೊಡ್ಡ ಪ್ರಮಾಣದ ನೀರಾವರೀ ಯೋಜನೆಯು ವೈಯಕ್ತಿಕ ಪ್ರಯತ್ನಕ್ಕೆ ನಿಲುಕದಾದ್ದರಿಂದ ಒಕ್ಕಲಿಗರು ದೈವದ ಮೇಲೆ ಭಾರ ಹಾಕಿ ಉಪಾಯಗಾಣದೆ ಬಾವಿಗಳನ್ನು ಅಗಿಸಿ ನೋಡುತ್ತಾರೆ. ಸರ್ಕಾರದವರು ನೀರಾವರಿಯನ್ನು ಕೈಕೊಂಡರೆ ಒಕ್ಕಲಿಗರ ವ್ಯರ್ಥ ಪ್ರಯತ್ನವೂ ಧನವ್ಯಯವೂ ನಿಲ್ಲುವದು. ಹೀಗೆ ಅಗಿದುಕೊಂಡ ಬಾವಿಗಳಲ್ಲಿ ನೀರು ಬಿದ್ದರೂ ೧೦೦ಕ್ಕೆ ೧೫-೨೦ ಬಾವಿಗಳು ಕೆಲಕಾಲದ ನಂತರ ಒಂದಿಲ್ಲೊಂದು ಕಾರಣದಿಂದ ನಿರುಪಯುಕ್ತವಾಗುತ್ತವೆ. ಒಳ್ಳೆ ಕಟ್ಟಡದ ಒಂದು ಬಾವಿಗೆ ಈ ದಿನಗಳಲ್ಲಿ ೩೦೦೦ ರೂ. ಬೇಕು. ಸರಕಾರವು ಬಾವಿಯೊಂದಕ್ಕೆ ೫೦೦ ರೂ. ಸಹಾಯ ಧನ ಕೊಡಲು ಮುಂದೆ ಬಂದಿದ್ದರೂ ನೀರು ಬೀಳುವ ವರೆಗೆ ಕೊಡುವದಿಲ್ಲ, ಕೊಟ್ಟರೂ ಕಂತುಗಳ ಮೂಲಕ. ಇದರಿಂದ ಒಕ್ಕಲಿಗನು ತಗಾಯಿ ಸಾಲಕ್ಕೋ ಸಾವುಕಾರನ ಬೊಕ್ಕಸಕ್ಕೋ ಕೈ ಒಡ್ಡಬೇಕಾಗುತ್ತದೆ. ಹೀಗೆ ತಂದ ಸಾಲವನ್ನು ತೀರಿಸಲಾಗದೆ ಬಾವಿಗಾಗಿ ಮಾಡಿದ ವೆಚ್ಚ ಲಾಭದಾಯಕವಾಗದೆ ಒಕ್ಕಲಿಗರು ತುಂಬ ಹಾನಿಗೀಡಾಗಿ ಸಾಗುವಳಿಗೂ ಬಾವಿಗೂ ಹೆಟ್ಟು ತಗಲಿದ ಉದಾಹರಣೆ ಬೇಕಾದಷ್ಟಿವೆ. ಇಷ್ಟೂ ಅಲ್ಲದೆ ಬಾವಿಯಿಂದ ಎತ್ತಿತೆಗೆದ ನೀರಿಗೆ ಕಾಲುವೆಗಳ ನೀರಾವರಿಗಿಂತ ಇಮ್ಮಡಿ ಮುಮ್ಮಡಿ ವೆಚ್ಚ ತಗಲುವದು. ಸರಕಾರ ಅಗಿಸಬೇಕಾದ ೫೦ ಸಾವಿರದಲ್ಲಿ ೩೦,೦೦೦ ಬಾವಿಗಳು ಅತ್ಯಂತ ಯಶಸ್ವಿಯಾಗುವವೆಂದೇ ಇಟ್ಟುಕೊಳ್ಳುವಾ. ಬಾವಿಯೊಂದಕ್ಕೆ ೩ ಸಾವಿರದಂತೆ ೩೦ ಸಾವಿರ ಬಾವಿಗಳಿಗೆ ೯ ಕೋಟಿ ರೂ. ವೆಚ್ಚ ತಗಲುವದು. ಇದರಲ್ಲಿ ೧॥ ಕೋಟಿ ರೂ. ಗಳನ್ನು ಸರಕಾರವು ಸಹಾಯ ಧನವೆಂದು ಕೊಟ್ಟರೂ ೭॥ ಕೋಟಿ ರೂ ಗಳನ್ನು ಒಕ್ಕಲಿಗರೇ ತೆತ್ತಬೇಕಾಗುತ್ತದೆ. ಅಯಶಸ್ವಿಯಾದ ಉಳಿದ ೨೦ ಸಾವಿರ ಬಾವಿಗಳ ಬಗ್ಗೆ ಮಾಡಿದ ವೆಚ್ಚವೆಲ್ಲ ಹಾನಿಯೇ. ಇದು ೬ ಕೋಟಿ ರೂ. ಗಳಷ್ಟಾಗುವದೆಂದು ತೀರ ಕಡಿಮೆಯ ಲೆಕ್ಕಾಚಾರ ಹಿಡಿದರೂ ಸ್ಪಷ್ಟವಾಗುತ್ತದೆ. ಬಡ ಒಕ್ಕಲಿಗನಿಗೆ ಇದೊಂದು ನಿರಂತರದ ತಲೆಭಾರವೇ.

ಅದ್ದರಿಂದ ಸರಕಾರವು ಒಂದೊಂದು ಬಾವಿಗೆ ಕೊಡಬೇಕೆನ್ನುವ ೫೦೦ ರೂ. ಗಳ ಸಹಾಯ ಧನ ವ್ಯರ್ಥವೆಂದು ಸಮಿತಿಯವರು ಅಭಿಪ್ರಾಯಪಡುತ್ತಾರೆ. ಇದರ ಬದಲು ಅನುಕೂಲ ಸ್ಥಳಗಳಲ್ಲಿ ನೆಲದಿಂದ ನೀರು ಹೀರಿತೆಗೆದು ಹೀಗೆ ತೆಗೆದ ನೀರನ್ನು ಸಂಗ್ರಹಿಸಲು (Percolation tanks) ಅಲ್ಲಲ್ಲಿ ಕೆರೆಗಳನ್ನು ರಚಿಸಿ ಹೊಲಕ್ಕೆ ನೀರುಣಿಸುವ ಯೋಜನೆ ಮಾಡಿದರೆ ಚನ್ನಾಗಿದ್ದೀತು. ಈ ಬಗೆಯ ಪ್ರಯತ್ನವು ಪರ್ಯಾಯವಾಗಿ ಬಾವಿಗಳ ರಚನೆಗೆ ಉತ್ತೇಜನ ಕೊಟ್ಟಂತಾಗುವದು. ಇದರಿಂದ ತಪ್ಪಲು ಪ್ರದೇಶದಲ್ಲಿದ್ದ ಭೂಗರ್ಭದ ಜಲಸ್ರೋತಗಳು ಬಲಗೊಂಡು ಬಾವಿಗೆ ನೀರನ್ನೂ ಒದಗಿಸುವ ಸಂಭವವಿದೆ.

ನಿರುಪಯುಕ್ತವಾದ ಬಾವಿಗಳನ್ನು ಸರಿಗೊಳಿಸಲು ಉತ್ತೇಜನಕೊಡುವ ಮೊದಲು ಅವು ಹಾಗೆ ಆಗಲು ಕಾರಣಗಳೇನೆಂದು ತಿಳಿಯುವದು ಮತ್ತು ಅವು ಸರಿಗೊಳಿಸಲ್ಪಡಬಹುದೆಂಬುದನ್ನೂ ಮನವರಿಕೆಮಾಡಿಕೊಳ್ಳುವದು ಅವಶ್ಯ.

೨. ಸಣ್ಣ ಸಣ್ಣ ನೀರಾವರಿ ಕೆಲಸಗಳು

ಕೆರೆ ಕಾಲುವೆಗಳ ರಚನೆ ಸಣ್ಣ ನೀರಾವರಿಯಲ್ಲಿ ಬರುವದು. ಮಳೆ ಸಾಕಷ್ಟು ದೊರಕದಾಗ ಮುಂಗಾರಿಗೆ ಕೆರೆ ಕಾಲುವೆಗಳು ಪೂರಕವಾಗಬಹುದು. ಹಿಂಗಾರಿಯ ಬೆಳೆಗೆ ನೀರು ಹರಿಬಿಡಲೂ ಇವು ಉಪಯುಕ್ತವಾಗುವವು. ಎಷ್ಟೋ ಕೆರೆ ಕಾಲುವೆಗಳು ಬಳಕೆಯಿಲ್ಲದೆ ಮುಗ್ಗಿ ಹೋಗಿದ್ದುಂಟು. ಉಪಯುಕ್ತವೆಂದು ಕಂಡುಬರುವ ಇಂತಹ ಕೆರೆಕಾಲುವೆಗಳ ಜೀರ್ಣೋದ್ಧಾರ ಮಾಡಿಸಬೇಕು. ಸರಕಾರದ ಯೋಜನೆಯಲ್ಲಿ ಈ ಬಗ್ಗೆ ನಿರ್ದೇಶವಿದ್ದರೂ ಕಾರ್ಯಾರಂಭವು ಅತಿ ವೇಗವಾಗಿ ವಿಕಸಮುಯಾವಚ್ಛೇದದಿಂದ ಸಾಗಿದರೆ ಮಾತ್ರ ಪ್ರಯೋಜನಕಾರಿಯಾಗುವದು. ಸಂತತ ಜಲಪ್ರವಾಹವಿರುವ ಪ್ರದೇಶದಲ್ಲಿ ಕಾಲುವೆಗಳ ರಚನೆಯ ಕಾರ್ಯ ಮೊಟ್ಟಮೊದಲು ಪ್ರಾರಂಭವಾಗುವದು ಯುಕ್ತವಾಗಿದೆ.

೩. ನದಿಯ ಮಡುವಿನಿಂದ ನೀರೆತ್ತುವದು

ನೀರು ಮಡುವಾಗಿ ನಿಂತಂತಹ ನದಿಗಳಿಂದ ನೀರೆತ್ತಿ ಹೊಲಗಳಿಗೆ ಹರಿಬಿಡುವದು ಸಧ್ಯಃಫಲಕಾರಿಯಾಗಿರುವದು. ಕಾರಣ ಈ ಬಗ್ಗೆ ಸರಕಾರವು ತಳೆದ ಧೋರಣವನ್ನು ಈ ಸಮಿತಿಯಾದರೂ ಅಂಗೀಕರಿಸುತ್ತದೆ. ಸರಕಾರದ ವೆಚ್ಚದಿಂದ ನೀರೆತ್ತುವ ಯಂತ್ರಗಳನ್ನು ಹಾಕಬೇಕೆಂದು ಸಮಿತಿ ಸೂಚಿಸುತ್ತದೆ. ಇದರ ಆಡಳಿತವನ್ನು ಸರಕಾರವೇವಹಿಸಿ ರೈತನಿಂದ ಸುಲಭ ಪ್ರತಿಫಲ ಹೊಂದಬೇಕು. ಆ ಮೇಲೆ ಬೇಕಾದರೆ ಇವುಗಳ ಆಡಳಿತವನ್ನು ಸಹಕಾರೀ ಸಂಘಗಳಿಗೆ ಒಪ್ಪಿಸಿ ಬಿಡಬಹುದು. ನೀರಿರುವ ಮಡುವುಗಳ ಬಗ್ಗೆ ಬೇಗನೆ ವಿಚಾರಣೆಯಾಗಿ ಅವಿಲಂಬವಾಗಿ ಕಾರ್ಯಪ್ರವೃತ್ತರಾಗಬೇಕು.

೪. ದೊಡ್ಡ ನೀರಾವರಿ ಯೋಜನೆಗಳು

ಮುಂಬಯಿ ಪ್ರಾಂತದ ಬಹು ಭಾಗಕ್ಕೆ ನೀರಾವರಿಯ ಪ್ರಯೋಜನೆ ದೊರೆವಂತಿದೆ. ಸಹ್ಯಾದ್ರಿ ಪರ್ವತದ ಕರಾವಳಿಯಲ್ಲಿ ಮಳೆಯು ತಪ್ಪದೆ ಬೀಳುತ್ತಿರುವದರಿಂದ ಆ ನೀರನ್ನು ನೀರಾವರಿಗೆ ಉಪಯೋಗಿಸಿಕೊಳ್ಳಬಹುದಾಗಿದೆ. ಅಲ್ಲಿಂದ ಹೊರಟ ನದಿ ಹಳ್ಳಗಳ ನೀರು ಈಗ ವ್ಯರ್ಥವಾಗುತ್ತಿದೆ. ೧೮೮೦ ನೇ ಇಸ್ವಿಯಲ್ಲಿ ಬರಗಾಲ ಸಮಿತಿಯೊಂದು ಈ ವಿಷಯದಲ್ಲಿ ಉಲ್ಲೇಖಮಾಡಿದ್ದುಂಟು. ಮುಂದೆ ೧೯೦೨ ಇಸ್ವಿಯಲ್ಲಿಯೂ ಹಿಂದುಸ್ತಾನ ಸರಕಾರವು ಹಿಂದುಸ್ತಾನ ನೀರಾವರಿ ಸಮಿತಿಯವರ ಸಲಹೆ ಮೇರೆಗೆ, ಮುಂಬಯಿ ಸರಕಾರಕ್ಕೆ ಈ ವಿಷಯದಲ್ಲಿ ಸಂಶೋಧನೆ ನಡೆಸಿ ತಕ್ಕ ಉಪಾಯ ಕೈಕೊಳ್ಳಲು ಸೂಚಿಸಿತು. ಇವರು ಸೂಚಿಸಿನ ಪ್ರದೇಶವು ತಾಪಿ ನದಿಯಿಂದ ತುಂಗಭದ್ರಾ ನದಿಯ ಮುಂಬಯಿ ಪ್ರಾಂತದ ನಡುವಣ ಭೂಮಿಗೆಲ್ಲ ಅನ್ವಯಿಸಿತ್ತು. ಈ ಪ್ರದೇಶವು ೪೭೦ ಮೈಲು ಉದ್ದ ೧೨೦ ಮೈಲು ಅಗಲವಾಗಿದೆ. ಇಲ್ಲಿ ೯ ದೊಡ್ಡ ನದಿಗಳೂ ಅನೇಕಾನೇಕ ಉಪನದಿಗಳೂ ಇವೆ.

ಮಿ. ಬೇಲೆ ಎಂಬ ಇಂಜನಿಯರರು ಈ ವಿಷಯವನ್ನು ಪರಿಶೀಲಿಸಿ ಒಟ್ಟು ೩೦ ದೊಡ್ಡ ದೊಡ್ಡ ನೀರಾವರಿ ಯೋಜನೆಗಳನ್ನು ಕೈಕೊಂಡು ನೀರು ನಿಲುಕದ ೨೦ ಲಕ್ಷ ಎಕರೆ ಭೂಮಿಗೆ ನೀರುಣಿಸಲು ಸೂಚಿಸಿದ್ದರು. ಇವುಗಳಲ್ಲಿ ಕೆಲವು ಮಾತ್ರ ಕಾರ್ಯ ರೂಪಕ್ಕಿಳಿದವು. ಈಗ ದೊಡ್ಡ ನೀರಾವರಿಗಾಗಿ ಸರಕಾರ ಪ್ರಥಮ ಸ್ಥಾನ ಕೊಡಬೇಕೆಂದು ನಾವು ಒತ್ತಿ ಹೇಳುತ್ತೇವೆ. ಆಹಾರೋತ್ಪಾದನೆಯು ಸ್ವಾವಲಂಬಿಯಾಗುವವರೆಗೆ ಒಂದೆರೆಗಳಿಗೆಯೂ ಸುಮ್ಮನೆ ಕೂಡದೆ ನೀರಾವರಿಯ ಯೋಜನೆಯನ್ನು ಸಂಪೂರ್ಣ ಕಾರ್ಯ ರೂಪಕ್ಕಿಳಿಸಬೇಕು. ದೊಡ್ಡ ನೀರಾವರಿ ಯೋಜನೆಗಳಿಂದ ಅನೇಕ ಅಪ್ರತ್ಯಕ್ಷ ಲಾಭಗಳೂ ಆಗುವವು. ಜನತೆಗೆ ಕುಡಿವ ನೀರನ್ನು ಪೂರೈಸಬಹುದು, ವಿದ್ಯುದ್ದೀಪಗಳನ್ನು ಒದಗಿಸಬಹುದು, ಸರಿಹೊಂದ ಆಹಾರ ವಿತರಣೆ ಯಾಗುವಂತೆ ನೋಡಿಕೊಳ್ಳಬಹುದು.

ಮಿ. ಬೇಲೆಯವರು ನಿರ್ದೇಶಿಸಿದ ಸ್ಥಳಗಳಲ್ಲದೇ ಇನ್ನೂ ಹೆಚ್ಚು ಸ್ಥಳಗಳಲ್ಲಿ ಅಣೆಕಟ್ಟು ಕಟ್ಟಬಹುದೆಂದು ತಜ್ಞರ ಮತವಿದೆ.

ಸಣ್ಣ ನೀರಾವರಿ ಯೋಜನೆಯಿಂದ ೬ ಲಕ್ಷ ಟನ್ ಆಹಾರ ಕೊರತೆಯಲ್ಲಿ ೨ ಲಕ್ಷ ಟನ್ ಮಾತ್ರ ಕೊರತೆಯನ್ನು ತುಂಬಿಕೊಳ್ಳಬಹುದು. ಉಳಿದ ೪ ಲಕ್ಷ ಟನ್ ಕೊರತೆ ತುಂಬಲು ದೊಡ್ಡ ಯೋಜನೆ ಬೇಕೇ ಬೇಕು. ಒಂದು ಟನ್ನು ಹೆಚ್ಚಿನ ಧಾನ್ಯ ಬೆಳೆದುಕೊಳ್ಳಲು ನಾಲ್ಕು ಎಕರೆ ಭೂಮಿಯನ್ನು ಹೆಚ್ಚಿಗೆ ಸಾಗು ಮಾಡಬೇಕಾಗುವದು. ೪ ಲಕ್ಷ ಟನ್ ಹೆಚ್ಚಿನ ಧಾನ್ಯಕ್ಕಾಗಿ ಒಟ್ಟು ೨೦ ಲಕ್ಷ ಎಕರೆ ಭೂಮಿಯು ನೀರು ಪಡೆದು ಸಾಗಾಗಬೇಕು. ಇಷ್ಟು ಮಾಡಿದರೆ ೪॥ ಪ್ರಮಾಣದಲ್ಲಿದ್ದ ನೀರಾವರಿಯು ೧೧॥ ರಷ್ಟಕ್ಕೆ ಬಂದು ನಿಲ್ಲುವದು. ಆದರೆ ಸರಕಾರ ನೂರಕ್ಕೆ ೧೫ ರಷ್ಟಾದರೂ ಭೂಮಿಗೆ ನೀರುಣಿಸ ಬಯಸುತ್ತದೆ. ಮೈಸೂರ ಮದ್ರಾಸಗಳಲ್ಲಿ ಈ ಪ್ರಮಾಣ ೧೫ ಕ್ಕಿಂತ ಇನ್ನೂ ಹೆಚ್ಚಾಗಿದೆ.

ಸರ. ಎಮ್. ವಿಶ್ವೇಶ್ವರಯ್ಯನವರು ೧೯೩೮ರಲ್ಲಿ ತೋರಿಸಿ ಕೊಟ್ಟ ರೀತಿಯಲ್ಲಿ ವೈಯಕ್ತಿಕವಾಗಿ ಯಾವಾದರೂ ಕಂಪನಿಗಳು ನಿರಾವರಿಯ ಸಾಹಸ ಕೈಕೊಳ್ಳುತ್ತಿದ್ದರೆ ಸರಕಾರವು ಅವಕ್ಕೆ ಎಲ್ಲ ಅನುಕೂಲಗಳನ್ನೂ ಮಾಡಿಕೊಡಬೇಕಾಗಿ ಈ ಸಮಿತಿ ಸೂಚಿಸುತ್ತದೆ. ವೈಯಕ್ತಿಕ ಕಂಪನಿಗಳನ್ನು ಪ್ರೋತ್ಸಾಹಿಸದಿದ್ದರೆ ಇಷ್ಟು ವಿಶಾಲ ಭೂಭಾಗಕ್ಕೆ ನೀರುಣಿಸುವದು ಅಷ್ಟು ತ್ವರಿತವಾಗಿ ಕೈಗೂಡಲಾರದು. ಹೀಗೆ ನಾವು ಸೂಚಿಸುವಾಗ ಇದರಲ್ಲಿ ಯಾವದೇ ಬಗೆಯ ಸ್ವಾರ್ಥದ ಸುಂಕ ಅಂಟಿಕೊಂಡಿರುವದಿಲ್ಲವೆಂದು ಸ್ಪಷ್ಟಗೊಳಿಸ ಬಯಸುತ್ತೇವೆ. ಕಾರ್ಯ ಕ್ಷಿಪ್ರದಲ್ಲಿ ಕೈಗೂಡಲೆಂಬ ಉದ್ದೇಶ ಮಾತ್ರ ಇದರಲ್ಲಿದೆ. ಕಾರ್ಯ ಪೂರೈಸಿದ ಮೇಲೆ ಸರಕಾರ ಬೇಕಾದರೆ ವೈಯಕ್ತಿಕ ಕಂಪನಿಗಳ ನೀರಾವರಿಗಳನ್ನು ಕೊಂಡುಕೊಂಡು ಬಿಡಬಹುದು.

ನೀರಾವರಿಗಾಗಿ ಸರಕಾರವು ಪ್ರತ್ಯೇಕ ಸಾಲ ಎತ್ತುವ ಏರ್ಪಾಡು ಮಾಡಿದರೂ ನಮ್ಮದು ಅದಕ್ಕೆ ತುಂಬ ಬೆಂಬಲವಿವೆ.

ಈಗಿನ ದಿನಮಾನಗಳಲ್ಲಿ ಇದಕ್ಕೆಲ್ಲ ವಿಪರೀತ ವೆಚ್ಚ ತಗಲುವದೆಂದು ನಮಗೆ ಗೊತ್ತಿದೆ. ಆದರೆ ಆಹಾರವನ್ನು ಹೊರಗಿನಿಂದ ಕೊಳ್ಳುವದಕ್ಕಾಗಿ ಈಗ ಅದಕ್ಕೂ ಹೆಚ್ಚಿಗೆ ವೆಚ್ಚವಾಗುತ್ತದೆ. ಇದನ್ನು ತಪ್ಪಿಸಿ ನಿರಂತರ ಅನ್ನ ಪ್ರಾಪ್ತಿಗಾಗಿ ತುಸು ಹೆಚ್ಚಿನ ವೆಚ್ಚ ತಗಲಿದರೇನಾಯ್ತು?

ಸಮಾರೋಪ

ಪ್ರಾಂತದಲ್ಲಿ ಅಧಿಕ ಆಹಾರೋತ್ಪಾದನೆಗೆ ದೊಡ್ಡ ಪ್ರಮಾಣದ ನೀರಾವರಿಯೇ ತಕ್ಕದ್ದೆಂದು ಸಮಿತಿಗೆ ದೃಢವಾಗಿದೆ. ಕಾರಣ ತಾತ್ಕಾಲಿಕ ಅನ್ನೋತ್ಪಾದನ ಯೋಜನೆಯೇ ಆಗಲಿ ದೂರ ದೃಷ್ಟಿಯ ಆರ್ಥಿಕ ಪುನರ್ರಚನೆಯ ಯೋಜನೆಯೇ ಆಗಲಿ ಸಾಧಿಸಬೇಕಾದರೆ ನೀರಾವರಿಗೆ ಅಗ್ರಸ್ಥಾನ ವಿರುವದರಿಂದ ನಾವು ಹಾಕಿಕೊಟ್ಟ ಮಾರ್ಗದಲ್ಲಿ ಸರಕಾರವು ಹೆಜ್ಜೆ ಹಾಕುವದು ಅವಶ್ಯವೆಂದು ಸಮಿತಿಯು ನಿವೇದಿಸುತ್ತದೆ.

ಬೆಳಗಾವಿ ಲಿಂಗರಾಜ ಕಾಲೇಜಿನಲ್ಲಿ ಡೆಮಾನ್‌ಸ್ಟ್ರೇಟರರಾಗಿದ್ದ ಶ್ರೀ ಆರ್. ವಿ. ಪಾಟೀಲರು ೨೦ನೇ ತಾರೀಖು ವಿಷಕಾರಕ ರಸಾಯನ ನುಂಗಿ ಆತ್ಮಹತ್ಯೆ ಮಾಡಿಕೊಂಡರೆಂದು ತಿಳಿಯುತ್ತದೆ. ತಮ್ಮ ಮರಣಕ್ಕೆ ತಾವೆ ಕಾರಣರೆಂದು ಅವರು ಬರೆದು ಇಟ್ಟಿರುವರಂತೆ.

ಅಂತರ್ರಾಷ್ಟ್ರೀಯ

ಜರ್ಮನ್ ತರುಣಿಯರ ಭೆಟ್ಟಿ

ಇಂಗ್ಲೀಷರಿಗೂ ಜರ್ಮನರಿಗೂ ಐತಿಹಾಸಿಕ ಕಾಲದಿಂದ ರಕ್ತ ಸಂಬಂಧವಿದೆ. ಕಳೆದ ಮಹಾಯುದ್ಧದ ಕಾಲದಲ್ಲಿ ಎಷ್ಟೋ ಜನ ಇಂಗ್ಲೀಷ್ ಮತ್ತು ಜರ್ಮನ್ ತರುಣ ತರುಣಿಯರಿಗೆ ವಿಶೇಷ ತೊಂದರೆ ಸಂಭವಿಸಿತು. ಕೆಲವರು ಪ್ರೀತಿಸಿದವರನ್ನು, ಕೆಲವರು ಮದುವೆಯಾದರೂ ಗಂಡನ ನಾಡಿನ ನಾಗರಿಕ ಹಕ್ಕುಗಳನ್ನು ಅಷ್ಟರೊಳಗೆ ಪಡೆಯದಿದ್ದವರು. ಇಂಥವರಿಗೆ ಬೇರೆ ಜೀವ ಸಿಕ್ಕಿದಲ್ಲ. ಹೆಂಗಸರನ್ನು ಶತ್ರು ರಾಷ್ಟ್ರಗಳು ಗುಪ್ತಚಾರಿಣಿಯರನ್ನಾಗಿ ಬಳಸಿಕೊಳ್ಳುವುದು ರೂಢಿಯಲ್ಲಿದ್ದುದರಿಂದ ಹೆಂಗಸರು ಎಲ್ಲಿ ಹೋದರೂ ಅವರಿಗೆ ಶತ್ರುರಾಷ್ಟ್ರವು ಪ್ರವೇಶ ಕೊಡದು. ಇಂತಹ ನಿಷ್ಠುರ ಸಂದರ್ಭದಲ್ಲಿ ಪ್ರಾಮಾಣಿಕ ಪ್ರಣಯಿಗಳ ಗೋಳನ್ನು ಹೇಳಿ ಮುಗಿಸಲಾಗದು.

ಆಗಲೇ ಇಂಗ್ಲೀಷ್ ನಾಗರಿಕ ಹಕ್ಕುಗಳನ್ನು ಪಡೆದಿದ್ದ ಜರ್ಮನ್ ತರುಣಿಯರನ್ನು ಇಂಗ್ಲೀಷ್ ಸರಕಾರವು ಏನೂ ಮಾಡಲಾರದಾಯಿತು. ಆದರೂ ಕೆಲವೊಮ್ಮೆ ಸಂಶಯದ ಆಧಾರದ ಮೇಲೆ ಸ್ಥಾನಬದ್ಧತೆಯಲ್ಲಿಡಲಾಗುತ್ತಿತ್ತು. ಅಲ್ಲದೆ ಜರ್ಮನಿಗೆ ಹೋಗಿದ್ದವರು ಇಂಗ್ಲೆಂಡಿನಲ್ಲಿಯ ತಮ್ಮ ಪತಿಗೃಹಕ್ಕೆ ಬರಲಾರದಂತಹ ಸನ್ನಿವೇಶ ಪ್ರಾಪ್ತವಾಗಿತ್ತು. ಈಗ ಯುದ್ಧ ಮುಗಿದಿದೆ; ಜರ್ಮನಿ ಸೋತು ದರಿದ್ರ ಸ್ಥಿತಿಗಿಳಿದಿದೆ. ಆದರೂ ಅಲ್ಲಿಯ ವಧುಗಳು ಇಂಗ್ಲೆಂಡಿನಲ್ಲಿಯ ತಮ್ಮ ವರರ ಪುನರ್ಮಿಲನಕ್ಕಾಗಿ ಆತುರದಿಂದ ಸಾಗಿ ಬರುತ್ತಿರುವರು. ಆಫೀಸರರ ಮುಖಾಂತರ ಅಪ್ಪಣೆ ಕಾಗದವನ್ನು ಪಡೆದು ಅವರು ಇಂಗ್ಲೆಂಡಿಗೆ ಮರಳಬೇಕು. ಟಿಲ್ಬರಿ ಬಂದರಿನಲ್ಲಿ ಪ್ರತಿನಿತ್ಯ ಇಂಗ್ಲೀಷ್ ಸಂಸಾರಗಳು ತಮ್ಮ ಹುಡುಗೆರೊಂದಿಗೆ ಸೊಸೆಯಂದಿರ ಆಗಮನವನ್ನು ನಿರೀಕ್ಷಿಸುತ್ತ ನಿಂತಿರುವುದು ಇಂದು ಸಾಮಾನ್ಯ ದೃಶ್ಯವಾಗಿಬಿಟ್ಟಿದೆ. ಜರ್ಮನ್ ಹುಡುಗಿಯರೂ ತಾಯಂದಿರೂ ಆತುರದಿಂದಲೂ ಉದ್ವೇಗದಿಂದಲೂ, ಭಯ ಶಂಕೆಗಳಿಂದಲೂ ಹಡಗಿನಿಂದ ಇಳಿಯುವುದು ದಿನವೂ ಕಂಡು ಬರುತ್ತದೆ. ನಾವು ಸೋತ ದೇಶದವರೆಂದು ಇಂಗ್ಲೆಂಡಿನವರು ಮೂದಲಿಸಿಯಾರೆಂಬ ಶಂಕೆಯಿಂದ ಒಂದು ವಿಧದ ದುರ್ಬಲವಾದ ಜಂಭ ಮತ್ತು ನಿರಾಶಾ ಶಂಕೆಗಳು ಅವರ ಮುಖ ಮುದ್ರೆಯಲ್ಲಿ ಕಂಡು ಬರುತ್ತವೆ. ಅವರಲ್ಲಿ ಬಹಳ ಜನ ತರುಣಿಯರೇ ಇದ್ದಾರೆ. ಎಲ್ಲರೂ ಕರುಣಾಜನಕವಾದ ವಸ್ತ್ರಾಲಂಕಾರ ಧರಿಸಿರುತ್ತಾರೆ. ಹಡಗಿನಿಂದ ಇಳಿದೊಡನೆ ಅಲ್ಲಿ ಗುಂಪು ಗುಂಪಾಗಿ ಸೊಸೆಯಂದಿರ ಬರವನ್ನು ಹಾರೈಸುತ್ತ ನಿಂತಿರುವ ಅನೇಕ ಅತ್ತೆ ಮಾವಂದಿರನ್ನೂ ಗಂಡಂದಿರನ್ನೂ ಚಕಿತ ನಯನಳಾಗಿ ದಿಟ್ಟಿಸಿ ಪ್ರತಿಯೊಬ್ಬಳೂ ತನ್ನ ವರಾರೆಂಬುದನ್ನು ಗಡಿಬಿಡಿಯಿಂದ ಶೋಧ ಮಾಡುವ ಕುತೂಹಲ ದೃಷ್ಟಿಯನ್ನು ಅತ್ತಿತ್ತ ಬೀರುವಳು. ಒಮ್ಮೊಮ್ಮೆ ಒಬ್ಬಳು ನಿರಾಶಳಾಗುವಳು. ಆವಳವರು ಅಲ್ಲಿರುವುದಿಲ್ಲ; ಇಲ್ಲವೆ ಯುದ್ಧದಲ್ಲಿ ವೀರ ಸ್ವರ್ಗವನ್ನು ಸೇರಿರುವರು. ಹಲವರು ಪ್ರಸನ್ನರಾಗುವರು. ತಮ್ಮವರನ್ನು ಕಂಡು ಅವರ ಸ್ವಾಗತಕ್ಕೆ ಅತಿಥಿಗಳಾಗಿ ನಲಿಯುವರು!

ಯುದ್ಧವೆಂಬುದು ಮಾನವನ ರಾಗದ್ವೇಷಗಳ ಅಸಮಂಜಸ ಹರಿದಾಟದ ಪರಿಣಾಮ. ಇದರಿಂದ ಜರ್ಮನ್-ಇಂಗ್ಲೀಷ್ ಸಂಸಾರಗಳಷ್ಟೇ ಅಲ್ಲ- ಉಳಿದ ಪರಸ್ಪರ ಶತ್ರು ರಾಷ್ಟ್ರಗಳಲ್ಲೂ ಹಾಗೇ ಪತಿ ಪತ್ನಿಯರು ಚಿರವಿರಹ, ಸ್ಥಿರ ವಿಯೋಗಗಳಿಂದ ಅಮಾನುಷವೂ ದುರ್ದೈವವೂ ಆದ ದುಃಖಕ್ಕೆ ಗುರಿಯಾಗಬೇಕಾಗುತ್ತದೆ. ಈ ಅನುಭವನನ್ನು ಸಂ. ರಾ. ಸಂಘದಲ್ಲಿ ಕುಳಿತು ಜಗತ್ತಿನ ಭವಿತವ್ಯವನ್ನು ನಿರ್ಣಯಿಸುವ ರಾಜ್ಯ ಪ್ರತಿನಿಧಿಗಳಿಗೆ ಅವರವರ ಹೆಂಡತಿಯರು ಬೋಧಿಸಬಾರದೆ? ಇದೊಂದು ಮಹಿಳೆಯರು ಸಾಧಿಸತಕ್ಕ ಮಹತ್ಕಾರ್ಯವಲ್ಲವೆ?

ಡಾಲರ್ ಯುದ್ಧ

ಹಾಲಿವುಡ್ ಕೈಗಾರಿಕೆಗೂ ಬ್ರಿಟನ್ನಿಗೂ ನಡೆಯುತ್ತಿದ್ದ ಡಾಲರ್ ಯುದ್ಧದಲ್ಲಿ ಬ್ರಿಟನ್ನೇ ಸೋಲುವಂತಾಯಿತು. ನಾಲ್ಕು ತಿಂಗಳ ಹಿಂದೆ ನೂರಕ್ಕೆ ೭೫ರಷ್ಟು ತೆರಿಗೆಯನ್ನು ಪರದೇಶದಿಂದ ಇಂಗ್ಲೆಂಡಿಗೆ ಹೋಗುವ ಚಲಚ್ಚಿತ್ರಗಳ ಮೇಲೆ ಹೇರಲಾಗಿತ್ತು. ಅದರಿಂದ ಪ್ರತಿ ವರ್ಷವೂ ಇಂಗ್ಲೆಂಡಿನ ಹಾಲಿವುಡ್ಡಿಗೆ ಹೋಗುವ ಡಾಲರಿನ ಪ್ರಮಾಣವನ್ನು ಇಳಿಸುವದೇ ಅದರ ಉದ್ದೇಶ.

ಮೇಲಿನ ತೆರಿಗೆಯು ಹೊಸದಾಗಿ ಬರುವ ಸಿನೆಮಾಗಳ ಮೇಲಲ್ಲದೆ ಹಳೆಯವುಗಳ ಮೇಲೆ ಹೇರಿದಲ್ಲಿ ಇದಕ್ಕೆ ಪ್ರತೀಕಾರವಾಗಿ ಹಾಲಿವುಡ್ಡಿನವರು ಬ್ರಿಟನ್ನಿಗೆ ಚಿತ್ರಗಳನ್ನು ಕಳುಹುವುದನ್ನೇ ಬಹಿಷ್ಕರಿಸುತ್ತಿದ್ದರು. ಈಗಲೇ ೬ ತಿಂಗಳಿಗೆ ಬೇಕಾದಷ್ಟು ಚಿತ್ರಗಳು ಲಂಡನ್ನಿನಲ್ಲಿ ಬಂದು ಬಿದ್ದಿವೆ. ಇವುಗಳಿಂದ ಬ್ರಿಟನ್ನಿನ ಹೊರಡೊಡುತ್ತಿವೆ. ಅಮೇರಿಕದವರು ಹಳೆಯ ಚಿತ್ರಗಳನ್ನೇ ಪುನಃ ಬ್ರಿಟನ್ನಿಗೆ ಕಳುಹುತ್ತಿದ್ದಾರೆ. ಅವುಗಳ ಮೇಲೆ ತೆರಿಗೆ ಬೀಳುತ್ತಿಲ್ಲ.

ಈ ತೆರಿಗೆಯು ವಿಶೇಷವಾಗಿ ಸರ್ ಸ್ಟಾಫರ್ಡ್ ಕ್ರಿಪ್ಸರು ಅಮೇರಿಕದ ಚಿತ್ರ ಪ್ರತಿನಿಧಿಗಳೊಡನೆ ಮಾತುಕತೆ ನಡೆಸಿದಾಗ ಅದು ಅಷ್ಟೇನೂ ಸಮರ್ಪಕವಾಗಲಿಲ್ಲವೆಂದು ಇಂಗ್ಲೆಂಡಿನ ಚಿತ್ರ ಕೇಂದ್ರವಾದ ವಾರ್ಡ್‌ಸ್ಟ್ರೀಟಿನಲ್ಲಿ ಹೇಳಲಾಗುತ್ತಿದೆ. ವರ್ಷಕ್ಕೆ ೧ ಕೋಟಿ ೭೦ ಲಕ್ಷ ಪೌಂಡುಗಳ ಬೆಲೆಯ ಡಾಲರ್ ಅಮೇರಿಕಕ್ಕೆ ಹೋಗದಂತೆ ತಡೆಯುವುದೇ ಈ ತೆರಿಗೆಯ ಗುರಿಯಾಗಿದ್ದರೂ ಇಲ್ಲಿಯ ವರೆಗೆ ಯಾರೂ ಒಂದು ಬಿಲ್ಲೆ ತೆರಿಗೆಯನ್ನೂ ಕೊಟ್ಟಿಲ್ಲ. ಹೀಗೆ ಕ್ರಿಪ್ಸರು ಅಮೇರಿಕನ್ನರಲು ಹಿಂದೆ ಬಿದ್ದ ಬೆದರಿಕೆಯೆಂದರೆ ಬ್ರಿಟಿಷ ಸಿನೆಮಾ ಮಂದಿರದ ಒಡೆಯರು ತೆರಿಗೆಯನ್ನು ಕೊಡದಿದ್ದಲ್ಲಿ ತೆರಿಗೆಯನ್ನು ಎಲ್ಲ ಪರದೇಶೀಯ ಚಿತ್ರಗಳ ಮೇಲೂ ಹೇರಲಾಗುವುದೆಂಬುದೇ. ಆದರೆ ಹಾಕಿದ ಬೆದರಿಕೆಯನ್ನು ಜಾರಿಗೆ ತರಲಿಲ್ಲ. ಇದಕ್ಕೆ ಕಾರಣವೆಂದರೆ, ಹೀಗೆಲ್ಲ ಮಾಡಿದರೆ ಈ ವ್ಯಸನಿಯಮದ ತೀವ್ರತೆ ಜನರಿಗೆ ಬೇಸರ ಹುಟ್ಟಿಸಬಹುದೆಂದೋ ಇಲ್ಲವೆ ವಾಷಿಂಗ್‌ಟನ್ನಿನಲ್ಲಿ ಇದರಿಂದ ಅಸಂತೋಷ ಉಂಟಾಗಬಹುದೆಂದೋ ಕ್ರಿಪ್ಸರು ತಿಳಿದುಕೊಂಡಿರಬಹುದಾಗಿ ತೋರುತ್ತದೆ.

ಹೊಸ ಸಿನೆಮಾಗಳು ಬರುವುದು ಕಡಿಮೆಯಾದರೂ ಹಳೆಯವು ಬ್ರಿಟನ್ನಿಗೆ ಹಾಲಿವುಡ್ಡಿನಿಂದ ಬರುತ್ತಲೇ ಇವೆ. ಹೊಸವು ಉತ್ಕೃಷ್ಟವಿಲ್ಲ. ಇದರಿಂದ ಹಾಲಿವುಡ್ಡಿಗೆ ಬ್ರಿಟನ್ನಿನ ಹಣ ಹೋಗುವುದರಲ್ಲಿ ಎಳ್ಳಷ್ಟೂ ಕಡಿಮೆಯಾಗಲಿಲ್ಲ. ಬ್ರಿಟಿಶ ಕೋಶಾಧಿಕಾರಿಗಳಿಗೂ ಹಾಲಿವುಡ್ಡಿನವರಿಗೂ ನಡುವೆ ಒಂದು ಒಪ್ಪಂದವಾಗಬಹುದೆಂಬ ಊಹೆ ಇದೆ. ಅದರದರ ಸೂಚನೆ ಇನ್ನೂ ಎಲ್ಲೂ ಕಂಡು ಬಂದಿಲ್ಲ.

ಕುಲಭೇದನೀತಿಗೆ ಕುಠಾರ

ಅಮೇರಿಕದ ಸಂಯುಕ್ತ ಸಂಸ್ಥಾನದ ಪ್ರೌಢ ವಿದ್ಯಾಭ್ಯಾಸ ಸಮಿತಿಯು ಕುಲಭೇದನೀತಿಯನ್ನು ಪತ್ತಿಕ್ಕಲು ತಕ್ಕ ಕಾಯದೆಗಳನ್ನು ಪಾಸು ಮಾಡಬೇಕೆಂದು ಸರಕಾರವನ್ನು ಒತ್ತಾಯ ಪಡಿಸಬೇಕೆಂದು ನಿರ್ಣಯಿಸಿತು. ಕಾಯದೆ ಪುಸ್ತಕದಿಂದ ಕುಲವರ್ಗೀಕರಣದ ಭಾಗಗಳನ್ನು ಕಿತ್ತೊಗೆಯಬೇಕೆಂದೂ ಅದು ಅಭಿಪ್ರಾಯ ಪಟ್ಟಿತು.

ಕಂಡು ಇಲ್ಲವೆ ಕಾಣದೆ ಯೆಹೂದಿಗಳನ್ನೂ ನಿಗ್ರೋಗಳನ್ನೂ ಒಳಸೇರಿಸದ ಕಾಲೇಜುಗಳನ್ನು ಹದಕ್ಕೆ ತರಲು ಕೇಂದ್ರ ಸಹಾಯವನ್ನು ಸಿಗದಂತೆ ಮಾಡಬೇಕೆಂದು ಸಮಿತಿ ಹೇಳಿತು.

ಮೇಲೆ ಹೇಳಿದಂತೆ ಸಮಾನ ಆದರೆ ಬೇರೆಯಾಗಿ ೧೭ ಸಂಸ್ಥಾನಗಳೂ ಕೊಲಂಬಿಯ ಜಿಲ್ಲೆಯೂ ವಿದ್ಯಾದಾನ ಮಾಡಬೇಕೆಂದಿದ್ದರೂ ಅದನ್ನೂ ಅವು ಸರಿಯಾಗಿ ಮಾಡುತ್ತಿಲ್ಲವೆಂದು ವರದಿಯಲ್ಲಿ ಹೇಳಿದೆ. ಬಿಳಿಯರಿಗಿಂತ ನಿಗ್ರೋಗಳಿಗೆ ವಿದ್ಯಾಸೌಕರ್ಯ ಬಹಳ ಕಡಿಮೆ ಇದೆ ಎಂದು ಅಲ್ಲಿ ಉಕ್ತವಾಗಿದೆ. ಎಷ್ಟೋ ಕಾಲೇಜುಗಳು ಯೆಹೂದಿ ವಿದ್ಯಾರ್ಥಿಗಳಿಗೆ ಪ್ರವೇಶ ಕೊಡದುದನ್ನೂ ಟೀಕಿಸಿದೆ.

ನಿಗ್ರೋಗಳನ್ನು ಕಾಲಕಸವೆಂದೇ ಅಮೇರಿಕನ್ನರು ಮೊದಲಿನಿಂದಲೂ ಕಾಣುತ್ತಿದ್ದರು. ಅವರ ಜೊತೆಗಿಂದು ಯೆಹೂದಿಗಳನ್ನು ಸೇರಿಸಲಾಗಿದೆ. ಈ ದುರ್ಬುದ್ಧಿ ಇಂದು ವೃದ್ಧಿಯಾಗುತ್ತ ಹೋಗಿದೆ ಎಂದು ಸುದ್ದಿ. ಇಂತಹ ಕಾಲದಲ್ಲಿ ಜನಕಲ್ಯಾಣ ಬುದ್ಧಿಯಿಂದ ಕುಲಭೇದನೀತಿಯನ್ನು ಖಂಡಿಸುವ ಒಂದು ಸಮಿತಿಯು ಅಮೇರಿಕದಲ್ಲಿ ಹುಟ್ಟಿದೆಯೆಂದರೆ ನಿಜವಾಗಿಯೂ ಆಶ್ಚರ್ಯಕಾರಕವಿದೆ. ಆದರೆ ಎಷ್ಟರ ಮಟ್ಟಿಗೆ ಈ ಸಮಿತಿಯ ಸಲಹೆಗಳನ್ನು ಸರಕಾರ ಮಾನ್ಯಮಾಡುವುದೋ ಹೇಳಲಸದಳ. ಹೇಗೇ ಆಗಲಿ, ವಿದ್ಯಾಸಂಸ್ಥೆಗಳಲ್ಲಿ ಈ ಕಲಂಕವಿದೆಯೆಂದು ಮನವರಿತು ಮೇಲಿನಂತೆ ವರದಿಕೊಟ್ಟ ಸಮಿತಿ ಸ್ವಲ್ಪ ಮಟ್ಟಿಗೆ ನಾಗರಿಕವೆಂದೇ ಹೇಳಬೇಕು. ಆ ಬಗ್ಗೆ ಅದು ಅಭಿನಂದನೀಯ.

ಚೀನೀ ಕಮ್ಯುನಿಸ್ಟರ ಮುನ್ನಡೆ

ಮಂಚೂರಿಯದ ಮುಖ್ಯ ನಗರವಾದ ಮುಕ್ಡೆನಿನಲ್ಲಿ ಮಾರ್ಶಲ್ ಲಾ ಜಾರಿ ಮಾಡಲಾಗಿದೆಯೆಂದೂ ಅಲ್ಲಿಗೆ ೨೦ ಮೈಲು ದೂರದಲ್ಲಿ ೩ ಕಮ್ಯುನಿಸ್ಟ ದಳಗಳ [illegible] ಕೇಳಿತೆಂದೂ ಸ್ವತಂತ್ರ ಚೀನೀಯ ಸುದ್ದಿಗಾರರಿಂದ ತಿಳಿದು ಬಂದಿದೆ.

ಮೊದಲು ತಡೆಯಲ್ಪಟ್ಟ ಕಮ್ಯುನಿಸ್ಟ ದಳಗಳು ಅಭೂತ ಪೂರ್ವವಾದ ಸಂಖ್ಯೆಯ ಬಲದೊಂದಿಗೆ ಮುನ್ನುಗ್ಗಿ ಬರುತ್ತಿವೆ. ಸರಕಾರೀ ಮಿಲಿಟರಿಯವರು ನಗರದಲ್ಲಿ ೮೦ ಅಡಕಗಳನ್ನು [illegible] ಮನೆಯಲ್ಲಿ [illegible] ಗೆ [illegible] ಜನರಿಗೆ ಬೆದರಿಕೆ ಹಾಕಿದ್ದಾರೆ. ವಿದ್ಯುಚ್ಛಕ್ತಿಯನ್ನು ಕೇವಲ ಸರಕಾರೀ ಮತ್ತು ಅವರ [illegible] ಸಂಸ್ಥೆಗಳಲ್ಲಲ್ಲದೆ ಮತ್ತೆಲ್ಲೂ ಉಪಯೋಗಿಸಬಾರದೆಂದು ಆಜ್ಞೆ ಹೊರಟಿದೆ.

ಮುಕ್ಡೆನಿಗೆ ೨೦ ಮೈಲು ದೂರದಲ್ಲಿ ಲಿಯಾವೋ ನದಿಯ ಪಶ್ಚಿಮ ದಂಡೆಯ ಮೇಲಿರುವ [illegible] ಎಂಬ ಸರಕಾರಕ್ಕೆ ಸೇರಿದ ಪರ್ವತ ದುರ್ಗವನ್ನು ಸಿಯುಪಿಯಾರ್ಡದಲ್ಲಿ ಕೈವಶ ಮಾಡಿಕೊಂಡು ಕಮ್ಯುನಿಸ್ಟರು ಮುನ್ನಡೆಯುತ್ತಿದ್ದಾರೆ.

ಮುಕ್ಡೆನಿಗೆ ೧೫೦ ಮೈಲು ದೂರದಲ್ಲಿರುವ ರಾಜಧಾನಿಯ ಸುತ್ತ ಮುತ್ತ ಮುಕ್ಡೆನ್—ಪಾಲ್ಡೀನ ರೇಲ್ವೆಯಲ್ಲಿ ಅತ್ಯುಗ್ರ ಚಕಮಕಿ ನಡೆಯಿತು. ಶಿಂಗ್ ಲುಂಗ್ ಪ್ರೈ ಮತ್ತು ಪುಂಗ್ ಚಿಸಾಟ್ಟಿಗಳು ಸರಕಾರೀ ದಳಗಳ ಕೈ ತಪ್ಪಿ ಹೋಗಿದ್ದರೂ ಪುನಃ ಈಗಿಂದೀಗ ವಶವಾಗಿಸಿಕೊಳ್ಳುವ ಸಂಭವವಿದೆಯೆಂದು ಹೇಳಲಾಗುತ್ತಿದೆ.

ಪ್ರತಿದಿನವೂ ೧ ಸಾವಿರ ಟನ್ ಕಲ್ಲಿದ್ದಲನ್ನು ಕೊಡುವ ಯೀಂಟೈ ಎಂಬ ಗಣಿಯನ್ನು ಕಮ್ಯುನಿಸ್ಟರು ಮುತ್ತಿ ರಾತ್ರಿಯೊಂದರಲ್ಲಿ ಧ್ವಂಸ ಮಾಡಿದರೆಂದು ಒಂದು ಚೀನೀ ಪತ್ರಿಕೆ ಪ್ರಕಟಿಸಿದೆ.

ಮುಕ್ಡೆನಿಗೆ ೮೦ ಮೈಲು ದೂರದಲ್ಲಿ ಚೀನೀ ಮತ್ತು ಮಂಗೋಲಿಯನ್ ಕಮ್ಯುನಿಸ್ಟ ದಲವೊಂದು ೨೦ ಸಾವಿರ ಸೈನಿಕರೊಡನೆ ಸರಕಾರೀ ಸೈನ್ಯದೊಂದಿಗೆ ಹೋರಾಡುತ್ತಿದೆ. ಪೀಕಿಂಗ್ ಹ್ಯಾಂಕೋ ರೇಲ್ವೆಯಲ್ಲಿ ಮಿಲಿಟರಿ ದೃಷ್ಟಿಯಿಂದ ಮುಖ್ಯವಾದ ಸ್ಥಳಗಳು ನಾಲ್ಕು ಕಮ್ಯುನಿಸ್ಟರ ಕೈಬಿಟ್ಟವು. ಆದರೆ ಅವರ ಯುದ್ಧೋತ್ಸಾಹ ವೇನೂ ಕಡಿಮೆಯಾದಂತಿಲ್ಲ.

ಅಮೇರಿಕದ ತಂತ್ರ

ಅಧ್ಯಕ್ಷ ಟ್ರೂಮನ್ನರ ವೈಯಕ್ತಿಕ ರಾಯಭಾರಿಯಾದ ಲೆಫ್ಟಿನೆಂಟ್ ಜನರಲ್ ಆಲ್ಬರ್ಟ ಸಿ. ವೆಡೆಮಿಯರರ ಅಪ್ರಕಟಿತ ವರದಿಯೊಂದು ಆಗಲೇ ಅಮಲಿನಲ್ಲಿ ಬರತೊಡಗಿದೆಯೆಂದು ಸುದ್ದಿ. ಆ ವರದಿಯಲ್ಲಿ ಚೀನವನ್ನು ಸಂಪೂರ್ಣವಾಗಿ ಅಮೇರಿಕಕ್ಕೆ ಅಧೀನಪಡಿಸಿ ಚೀನದ ಸ್ವತಂತ್ರವಾದ ಭಾಗಗಳು ಮತ್ತು ರಶಿಯ ಇವುಗಳ ವಿರುದ್ಧ ದಕ್ಷಿಣ ಚೀನದಲ್ಲಿ ಮಿಲಿಟರಿ ಠಾಣೆಗಳನು ಸ್ಥಾಪಿಸುವುದನ್ನು ವಿವರಿಸಲಾಗಿದೆ. ಇದನ್ನು ಸಿಂಗಪುರದ ಪ್ರಮುಖ ಚೀನೀ ಪತ್ರಿಕೆಯೊಂದರ ಸುದ್ದಿಗಾರ ಹೊರಗೆಡಹಿದ್ದಾನೆ.

ಮೇಲಿನ ಉದ್ದೇಶವನ್ನು ಸಾಧಿಸಲೆಂದೇ ವೆಡೆಮಿಯರು ಇತ್ತೀಚೆಗೆ ಶಾಂಘ್ಯಾ, ನಾನ್‌ಕಿಂಗ್, ತ್ಸಿಂಗ್‌ಟಾವ್, ಮುಕ್ಡೆನ್ ಮತ್ತು ಪೀಪಿಂಗ್‌ಗಳಿಗೆ ಭೆಟ್ಟಿಯಿತ್ತರೆಂದು ಹೇಳಲಾಗಿದೆ; ರಾಜಕೀಯವಾಗಿ ಚಿಯಾಂಗರ ಪ್ರಭುತ್ವವನ್ನು ದೃಢಪಡಿಸಿ ಕೆಲವು ಆಡಳಿತದ ಸುಧಾರಣೆಗಳನು ಮಾಡುವ ಯೋಜನೆ ಅವರ ಹೇಳಿಕೆಯಲ್ಲಿದೆ. ಸರಕಾರೀ ದಲಗಳು ಹಿಂಸಾಪ್ರಯೋಗದಿಂದ ಕಮ್ಯುನಿಸ್ಟರನ್ನು ಬಗ್ಗುಬಡಿದರೆ ಅವಕ್ಕೆ ತನ್ನ ಅಭ್ಯಂತರ ಇಲ್ಲವೆಂದು ಅಮೇರಿಕನ್ನರ ಮತ.

ಚೀನವನ್ನು ೩ ವಿಭಾಗಗಳು ಇಲ್ಲವೆ ವಲಯಗಳನ್ನಾಗಿ ವಿಭಜಿಸುವುದು. ಅದರಿಂದ ದಕ್ಷಿಣದಲ್ಲಿ ಬಲವಾದ ಅಮೇರಿಕನ ಆರ್ಥಿಕ ಮತ್ತು ಮಿಲಿಟರಿ ಠಾಣೆಯನ್ನು ಕಟ್ಟಿ ಕಮ್ಯುನಿಸ್ಟರನ್ನು ಉತ್ತರ ಉತ್ತರಕ್ಕೆ ದಬ್ಬುವುದೇ ಮೇಲಿನ ಯೋಜನೆಯ ಗುರಿ. ಈ ಮಹಾ [illegible] ಯದ ಕಚ್ಚಾ ಮಾಲುಗಳ ಮತ್ತೆಗಳನ್ನು [illegible] ಯುವುದು ಅಮೇರಿಕದ ಉತ್ಕಟವಾದ ಆಸೆ.

ಈ ಯೋಜನೆಯನ್ನು ಅಮಲಿನಲ್ಲಿ ತರುತ್ತಿರುವದರಿಂದಲೇ ಚಿಯಾಂಗರು ಧೈರ್ಯವಾಗಿ ಕಮ್ಯುನಿಸ್ಟರ ವಿರುದ್ಧ ಸರಕಾರವು ಇನ್ನು ೨ ವರ್ಷ ಹೋರಾಡಬಲ್ಲದೆಂದು ಹೇಳುವಾಗಿ ತಿಳಿದು ಬರುತ್ತದೆ.

ಪೆಟ್ಟರ ಭೇದ ನೀತಿ

ಐಕ್ಯ ಜಾವಾ ಮತ್ತು ಅದರ [illegible] ೨೦ ಲಕ್ಷ ಪ್ರಜೆಗಳ ಆಳಿಕೆಯ ಅಧಿಕಾರವನ್ನು ಅಲ್ಲಿಯ ಸಾಮ್ರಾಜ್ಯಶಾಹೀ ಸರಕಾರಕ್ಕೆ [illegible] ವಾಗಿ [illegible] ಪ್ರದೇಶದ [illegible]

[illegible]

ವಿವಿಧ ಪ್ರಪಂಚ

ಹೆಂಗಸರ ಆರ್ಥಿಕ ಮತ್ತು ಸಾಮಾಜಿಕ ಸ್ವಾತಂತ್ರ್ಯದ ಕೂಗು ಎಲ್ಲೆಲ್ಲೂ ಹರಡಿದೆ. ಹೆಂಗಸರೆಂದರೆ Sentimentalists ಭಾವೋದ್ರೇಕಪರವಶರು ಎಂಬುದಕ್ಕೆ ಇದರಿಂದ ನಿದರ್ಶನ ದೊರೆತಿದೆ. ಭಾರತದ ಜಮೀನುದಾರಿ ಪದ್ಧತಿಯಲ್ಲಿ ಆಸ್ತಿ ವಿಭಜನೆ ಹೇಗೆ ಭಾರತದ ಭೂಮಿಯನ್ನು ತುಣುಕು ಗದ್ದೆಗಳನ್ನಾಗಿ ಮಾಡಿ ಹಾಳುಗೆಡಹಿದೆ ಎಂಬುದನ್ನರಿತು ಅನೇಕರಿಂದು ಇಂಗ್ಲೆಂಡಿನಂತೆ ಹಿರಿಯ ಮಗನಿಗೆ ಮಾತ್ರ ಆಸ್ತಿಯ ಹಕ್ಕು ಇರತಕ್ಕದ್ದೆಂದು ಕಾಯದೆಯಾಗಬೇಕೆಂದು ಇಲ್ಲವೆ ಇಂದಿನ ಕ್ರಾಂತಿಯುಗದ ಆಶಯದಂತೆ ಸಾಗುವಳಿದಾರನಿಗೆ ಮಾತ್ರ ಸೇರಬೇಕೆಂದು ಹೇಳುತ್ತಿರುವಾಗ ಹುಡುಗ ಹುಡುಗಿಯರೆಲ್ಲರೂ ಅಪ್ಪನ ಆಸ್ತಿಯನ್ನು ಹಂಚಿಕೊಂಡು ಮತ್ತಷ್ಟು ಚಿಕ್ಕಲತನದ ಗೊಂದಲಕ್ಕೆ ಅವಕಾಶ ಕೊಡಬೇಕೆಂಬ ಬುದ್ಧಿ ನ್ಯಾಯವೆನ್ನಬಹುದೇ? ಅಲ್ಲದೆ, ಹಾಗೆನ್ನುವಾಗ ಹುಡುಗಿ ಗಂಡನ ಮನೆಗೆ ಹೋಗಿರಬೇಕೋ ಅಥವಾ ಸ್ವಾತಂತ್ರ್ಯದ ಜಂಭದಲ್ಲಿ ಬೇರೆ ಮನೆಯಲ್ಲಿರಬೇಕೋ ಇತ್ಯಾದಿ ಪ್ರಶ್ನೆಗಳನ್ನು ಮರೆತು ಇಂದು Feminists ಸ್ತ್ರೀಯರ ಉದ್ಧಾರ ಮಾಡುವೆವೆಂಬವರು ಬುಡತಳವಿಲ್ಲದೆ ಹರಟುತ್ತಿರುವಾಗ, ಓದಿದ ಸ್ತ್ರೀಯರಿಂದು ಅಂತಹ ವಿಸಂಗತ ಪ್ರಶ್ನೆಗಳನ್ನೆತ್ತದೆ ಸದ್ಯದ ಪರಿಸ್ಥಿತಿಯನ್ನನುಲಕ್ಷಿಸಿ ಸೂಕ್ತ ಕಾರ್ಯವನ್ನು ಕೈಕೊಳ್ಳಲು ತೀರ್ಮಾನಿಸಿದ್ದು ಅಭಿನಂದನೀಯವಾಗಿದೆ.

ಶ್ರೀಮತಿ ಮಾಣಿಕಲಾಲ ಪ್ರೇಮಚಂದರ ಅಧ್ಯಕ್ಷತೆಯಲ್ಲಿ ಕಟಕ್ಕಿನಲ್ಲಿ ಕೂಡಿದ ಮಹಿಳಾ ಪರಿಷತ್ತನ್ನು ಉದ್ಘಾಟಿಸುತ್ತ ಒರಿಸ್ಸದ ಗವರ್ನರರಾದ ಕಟ್ಜುರವರು ಸ್ತ್ರೀಯರು ತಮ್ಮ ಹಕ್ಕು ಬಾಧ್ಯತೆಗಳನ್ನು ಕ್ರಮೇಣ ನ್ಯಾಯವಾದ ರೀತಿಯಿಂದ ಸಾಧಿಸಿಕೊಳ್ಳಬೇಕೆಂದು ಸೂಚಿಸಿದರು. ಆ ಸೂಚನೆಯೇ ಅನವಶ್ಯಕವಿತ್ತೆಂಬಷ್ಟು ನ್ಯಾಯದೃಷ್ಟಿಯಿಂದ ವಿಚಾರಶೀಲರಾದ ಆ ಹೆಂಗಳೆಯರು ಸದ್ಯದ ಕುಟುಂಬ ಮತ್ತು ಜೀವನದ ಸುಖಶಾಂತಿಗಳಿಗೆ ಎಡರೊಡ್ಡುವ ವಾದದತ್ತ ಗಮನಕೊಡದೆ ಇಂದಿನ ಜಾತೀಯ ಘರ್ಷಣಗಳನ್ನು ಹೀಗಳೆದ, ಎಲ್ಲಕ್ಕಿಂತಲೂ ವಿಚಿತ್ರವೂ ಶ್ಲಾಘ್ಯವೂ ಎನಿಸುವಂತೆ ಅನಾಥ ಬಾಲಬಾಲಿಕೆಯರನ್ನು ಅನಾಥಾಲಯಕ್ಕೆ ಕಳುಹದೆ ಮಕ್ಕಳಿಲ್ಲದ ಶ್ರೀಮಂತರು ದತ್ತತೆಗೆದುಕೊಳ್ಳಬೇಕೆಂದೂ ಹೆಂಗಸರು (ಸೈನಿಕರಾಗುವುದು ಅವೈಜ್ಞಾನಿಕವಾದರೂ) ಆತ್ಮರಕ್ಷಣೆಗೆ ಸದಾಸಿದ್ಧರಾಗಿಬೇಕೆಂದೂ ಭಾರತದ ಸಾಮಾನ್ಯ ಸ್ತ್ರೀಪುರುಷರ ನಿರಕ್ಷರತೆಯನ್ನು ಹೋಗಲಾಡಿಸಲು ಸರ್ವವಿಧದ ಪ್ರಯತ್ನ ನಡೆಸಬೇಕೆಂದೂ ಪರಿಷತ್ತು ತೀರ್ಮಾನಿಸಿತು. ಇದಲ್ಲದೆ ಕೇಂದ್ರದ ಆರೋಗ್ಯಮಂತ್ರಿಗಳಾದ ರಾಜಕುಮಾರಿ ಅಮೃತಕುಮಾರಿಯವರಲ್ಲಿಗೆ ಒಂದು ಪ್ರಾತಿನಿಧಿಕ ಮಂಡಲವನ್ನು ಕಳುಹಿ ಸಾಮಾಜಿಕ ಆರೋಗ್ಯ ಸುಧಾರಣೆಯನ್ನು ಇನ್ನೂ ವ್ಯವಸ್ಥಿತವಾಗಿ ಮಾಡಲು ನೆರವಾಗಬೇಕೆಂದು ಕೇಳಿಕೊಳ್ಳಬೇಕೆಂದೂ ಸರ್ವಾನುಮತದಿಂದ ಠರಾಯಿತು. "ಈಸ್ಟರ್ನ ಇಕಾನೊಮಿಸ್ಟ್" ಪತ್ರಿಕೆಯು ಸ್ತ್ರೀಯರ ನ್ಯಾಯಪರತೆ ಮತ್ತು ಕರ್ತವ್ಯಬುದ್ಧಿಗೆ ಇದೊಂದು ಉತ್ತಮ ಮಾದರಿಯೆಂದು ಅಭಿಪ್ರಾಯಪಟ್ಟಿದೆ. ರಾಷ್ಟ್ರೀಯ ಮಹಿಳಾಮಂಡಲದ ಈ ಸತ್ಕಾರ್ಯಕ್ರಮದ ಮಾರ್ಗದರ್ಶನಕ್ಕೆ ಕನ್ನಡಿ ಹಿಡಿವ ಅಗತ್ಯವುಂಟೇ? ಸ್ತ್ರೀಪುರುಷರಿಗೆ ತಕ್ಕ ವಿದ್ಯಾಭ್ಯಾಸ ದೊರೆತರೆ ಸರ್ವಸಮಸ್ಯೆಗಳೂ ಪರಿಹಾರವಾಗುವವು. ಅತ್ತ ಭಾರತಮಹಿಳೆಯರು ಪ್ರಯತ್ನಿಸಿ ಸರ್ವಹಿತವನ್ನು ಸಾಧಿಸುವರೊ?

ಪ್ರತಿಭಾವಂತರ ಲಕ್ಷಣ

ಪ್ರತಿಭಾವಂತರ ವರ್ಗವನ್ನು ಅಭ್ಯಸಿಸಿದ ಶ್ರೀ ವಾಲ್ಟರ್ ಜಿ. ಬವೆರಮನ್ನರ ಪ್ರಕಾರ ಸಾಮಾನ್ಯ ಪ್ರತಿಭಾವಂತನು ೫ಅಡಿ ೧೦ಅಂಗುಲ ಎತ್ತರವಾಗಿಯೂ ಸುಮಾರು ೧೭೫ ರತ್ತಲು ತೂಕವುಳ್ಳವನಾಗಿಯೂ ಇರುತ್ತಾನೆ.

ಪ್ರತಿಭಾವಂತರಲ್ಲಿ ಅ, ಬ, ಕ, ಡ ಎಂದು ನಾಲ್ಕು ವಿಭಾಗಗಳನ್ನು ಮಾಡಲಾಗಿದೆ. ಕವಿ, ಗ್ರಂಥಕರ್ತ ಮತ್ತು ಅಂತಹ ಮಾನಸಿಕ ಪ್ರವೃತ್ತಿಯವರು ಮೊದಲವರ್ಗಕ್ಕೂ ಬರ್ಬಾಂಕ್, ಈಲಿಯಟ್, ಎಮರ್‌ಸನ್ ಲಿಂಕನ್ನರಂಥ ಮೇಧಾವಿಗಳನ್ನು ೨ನೇ ವರ್ಗಕ್ಕೂ ಉತ್ಸಾಹಿಗಳಾದ ದಂಡನಾಯಕ, ಶಿಲ್ಪಜ್ಞ ಮುಂತಾದ ಪ್ರಭಾವಶಾಲಿಗಳನ್ನು ೩ನೆಯ ವರ್ಗಕ್ಕೂ ಕಾಯದೆ ಪಂಡಿತರು ಮತ್ತು ಶಾಸ್ತ್ರಜ್ಞರನ್ನು ೪ ನೆಯ ವರ್ಗಕ್ಕೂ ಸೇರಿಸಲಾಗಿದೆ. ಬಿಡಿಸಿಹೇಳುವುದಾದರೆ, 'ಅ' ವರ್ಗೀಯರು ಭಾವಯೋಗಿಗಳು, 'ಬ' ವರ್ಗೀಯರು ಬುದ್ಧಿಯೋಗಿಗಳು; 'ಕ' ವರ್ಗದವರು ಕರ್ಮಯೋಗಿಗಳು ಮತ್ತು 'ಡ' ವರ್ಗದವರು ವ್ಯವಹಾರಯೋಗಿಗಳೆಂದು ಬಣ್ಣಿಸಬಹುದು.

ಭಾವಯೋಗಿಗಳು ಆತ್ಮಸಾಕ್ಷಿಗೆ ಸರಿಯಾಗಿ ನಡೆದುಕೊಳ್ಳುತ್ತಾರೆ. ಸಾಮಾನ್ಯವಾಗಿ ಅವರ ಆತ್ಮವು ಪರಿಸ್ಥಿತಿಯ ವಿರುದ್ಧ ದಂಗೆಯೇಳುವುದು. ಜಗತ್ತಿಗೆ ಅದರ ಪರಿಣಾಮವನ್ನು ಸಾಹಿತ್ಯಾದಿ ಕಲಾರೂಪದಲ್ಲಿ ಅವರು ನೀಡುವರು. ಇವರಿಗೆ Escapists ಜಗದ ಜಂಜಡದಿಂದ ತಪ್ಪಿಸಿಕೊಂಡು ತಿರುಗುವವರೆಂದರೂ ಎನ್ನಬಹುದು.

೨ ನೆಯ ವರ್ಗದ ಮೇಧಾವಿಗಳು ತಮ್ಮ ಅಭ್ಯಾಸದಲ್ಲಿ ಲೀನರಾಗಿರುವ Absent-minded Professors ಬಾಹ್ಯಜ್ಞಾನವಿಲ್ಲದ ಶೋಧಾಸಕ್ತ ವಿದ್ವಾಂಸರಂತಿರುತ್ತಾರೆ. ೩ ನೆಯ ವರ್ಗದ ತಜ್ಞರು ಕಷ್ಟಸಹಿಷ್ಣುಗಳೂ ಪ್ರತಿಜ್ಞಾಗಾಂಗೇಯರೂ ಆಗಿದ್ದರೆ ನಾಲ್ಕನೆಯ ವ್ಯವಹಾರಜ್ಞರು ಪ್ರಭುಶಕ್ತಿ ಸಂಪನ್ನರೂ ಭಜಕವೃಂದ ಪರಿವೃತರೂ ಆಗಿದ್ದಾರೆ.

ಸಾಮಾನ್ಯ ರೂಪದಲ್ಲಿ ಗಂಡಸರಲ್ಲಿರುವಷ್ಟು ವೈವಿಧ್ಯ, ಹೆಂಗಸರಲ್ಲಿಲ್ಲ. ಆದರಿಂದ ಪ್ರತಿಭಾವಂತ ಗಂಡಸರು ಪರಸ್ಪರರಿಂದ ಭಿನ್ನರಾಗಿರುವಷ್ಟು ಪ್ರತಿಭಾವಂತ ಹೆಂಗಸರು ಭಿನ್ನರಾಗಿರುವುದಿಲ್ಲ.

ಸಾಮಾನ್ಯರಿಗಿಂತ ವಾಮನಾಕಾರದ ಪ್ರತಿಭಾವಂತರು ೨ ಪಟ್ಟು ಹೆಚ್ಚು ಬುದ್ಧಿವಂತರಿರುತ್ತಾರೆ. ಎತ್ತರದ ಪ್ರತಿಭಾಶಾಲಿಗಳು ೨॥ ಪಟ್ಟು ಹೆಚ್ಚು ಮೇಧಾವಿಗಳಾಗಿರುತ್ತಾರೆಂದು ಬವೆರ್ಮನ್ನರು ಸಾವಿರಮಂದಿ ಪ್ರತಿಭಾಶಾಲಿಗಳನ್ನಭ್ಯಸಿಸಿ ಕಂಡುಹಿಡಿದಿದ್ದಾರೆ.

ರಾಜಕಾರಣಿಗಳು ಉಳಿದವರಂತಿರದೆ, ಒಂದೇ ಅತಿತೂಕದವರಿರುತ್ತಾರೆ ಇಲ್ಲವೆ ಅತಿಲಘುಶರೀರಿಗಳಾಗಿರುತ್ತಾರೆ. ಕಲೆಗಾರ,ಗ್ರಂಥಕರ್ತ ಮುಂತಾದವರು ಕಾಯದೆಪಂಡಿತರು ಮತ್ತು ದಂಡಿನವರಿಗೆ ವಿರುದ್ಧರೀತಿಯಲ್ಲಿರುತ್ತಾರೆ. ಮೊದಲನೆಯವರು ತೆಳ್ಳಗೂ ಸಾಧಾರಣ ತೂಕದವರೂ ಆಗಿದ್ದಾರೆ. ಎರಡನೆಯವರು ಭೀಮಸೇನ ಘಟೋತ್ಕಚರಂತಿರುತ್ತಾರೆ.

ತೆಳ್ಳಗಿರುವ ಪ್ರತಿಭಾವಂತರ ಆಯುಃಪ್ರಮಾಣ ಸರಾಸರಿ ೬೮.೬ ಇದ್ದರೆ ಮಧ್ಯಮತೂಕದವರದು ೬೦ ಮತ್ತು ಅತಿ ತೂಕದವರದು ೬೦/೬.

ಅಮೇರಿಕನ್ನರಪ್ರಕಾರ ಎಲ್ಲ ದೋಷಗಳಿಗೂ ದುಡಿತವೇ ಮದ್ದು; ಬ್ರಿಟಿಶರ ಪ್ರಕಾರ ಬೌದ್ಧಿಕ ಉಪವೃತ್ತಿಯೇ ಸಂಜೀವನಿ. ಆದರಿಂದ ಮೊದಲನೆಯವರು ಉತ್ಸಾಹದಿಂದ ೪೬, ೫೦, ವರ್ಷಗಳವರೆಗೆ ಚೆನ್ನಾಗಿ ದುಡಿದು ಅನಂತರ ಬಿದ್ದುಬಿಡುತ್ತಾರಾದರೆ, ೨ ನೆಯವರು ತದ್ವಿರುದ್ಧ.

ಮೇಧಾವಿಗಳಲ್ಲಿ ೪೮ ಜನರು ಚಿಕ್ಕವಯಸ್ಸಿನಲ್ಲಿಯೇ ಅತಿಬುದ್ಧಿ ಪ್ರದರ್ಶನಮಾಡಿದವರೆಂದು ಇತಿಹಾಸ ಸಾಕ್ಷಿಕೊಡುತ್ತದೆ. ಅವರಲ್ಲಿ ನಾಲ್ಕೇ ಜನ ಹೆಂಗಸರು.

ಕಾಲೇಜು ವಿದ್ಯಾರ್ಥಿಗಳಲ್ಲಿ ಬಹಳಜನರು ಹಣಕಾಸು, ಬ್ಯಾಂಕು, ವ್ಯಾಪಾರ, ಕಾರಖಾನೆ ನೌಕಾಬಲ, ಕಲೆ, ಸುಧಾರಣೆ ಈ ಕ್ಷೇತ್ರಗಳಲ್ಲಿ ಹೆಸರು ತೆಗೆದುಕೊಂಡಿಲ್ಲ. ವ್ಯಾಪಾರೋದ್ಯೋಗಗಳಲ್ಲಿ ಮೆರೆದ ಉದ್ಧಟರ ಕಾಲೇಜು "The University Of Hard Knocks" ಕಟು ಅನುಭವ ಕೊಡುವ ವ್ಯವಹಾರ ಪ್ರಪಂಚವೆಂಬ ವಿಶ್ವವಿದ್ಯಾಲಯ" ಎಂಬುದೇ.

ಪಟ್ಟಿಯಲ್ಲಿರುವ ಸಾವಿರ ಪ್ರತಿಭಾವಂತರಲ್ಲಿ ೬೮ ಜನರು ಮದುವೆ ಆಗಿಯೇ ಇಲ್ಲ. ಬ್ರಿಟನ ಪ್ರತಿಭಾವಂತರನ್ನಭ್ಯಸಿಸಿದ ಹ್ಯಾವಲಾಕ್ ಎಲಿಸರ ಪ್ರಕಾರ ನೂರಕ್ಕೆ ೨೫.೯ ಜನರುಮಾತ್ರ ಮದುವೆ ಮಾಡಿಕೊಂಡಿಲ್ಲ. ಈ ಪ್ರಮಾಣವೇ ಮೊದಲಿನದಕ್ಕಿಂತ ಹೆಚ್ಚಿನದಾಯಿತು.

ಸಾವಿರ ಪ್ರತಿಭಾವಂತರಲ್ಲಿ ಗಂಡಸರು ತಮ್ಮ ೨೮.೩ ನೆಯ ವಯಸ್ಸಿನಲ್ಲೂ ಹೆಂಗಸರು ತಮ್ಮ ೩೦.೪ ನೆಯ ವಯಸ್ಸಿನಲ್ಲೂ ಮದುವೆಯಾದರೆಂದು ತಿಳಿಯುತ್ತದೆ. ಹೆಚ್ಚು ಪ್ರತಿಭಾವಂತರು ತಡವಾಗಿ ಮದುವೆಯಾಗುತ್ತಾರೆ. ಅದಕ್ಕೆ ಅವರ ಮೇಧಾವಿಸಹಜ ಕಾರ್ಯದಲ್ಲಿಯ ತಲ್ಲೀನತೆಯೇ ಕಾರಣ. ಗೃಹ, ಸಂಸಾರ ಹೂಡುವುದು ಸ್ವಾಭಾವಿಕವಾಗಿ ತಡವಾಗುತ್ತದೆ. ೬೪೪ ಜನರು ಒಬ್ಬ ಹೆಂಡತಿಯನ್ನಾಳಿದವರು, ೨೩೩ ಜನರು ಎರಡನೆಯ ಮದುವೆಮಾಡಿಕೊಂಡವರು ಮತ್ತು ೩೫ ಜನರಿಗೆ ೩ ಜನ ಹೆಂಡತಿಯರೂ ೩ ಜನರಿಗೆ ನಾಲ್ಕುಜನ ಅರ್ಧಾಂಗಿನಿಯರೂ ಇದ್ದರು.

ನಮ್ಮ ಪ್ರಮುಖಪುರುಷರಲ್ಲಿ ೧೦ಕ್ಕೆ ೯ ರಷ್ಟು ಜನರು ಮಂತ್ರಿಗಳ ವಕೀಲರ ಮತ್ತು ಕಾಯದೆ ಪಂಡಿತರ ಮಕ್ಕಳು. ೬ ನೆಯ ಒಂದರಷ್ಟು ತಂದೆಯರು ಧನಿಕ ವ್ಯಾಪಾರಿಗಳಾಗಿಯೂ ಮತ್ತಷ್ಟೇ ಜನರೂ ರೈತರಾಗಿಯೂ ಇದ್ದರು. ಮತ್ತು ಪ್ರತಿಭಾವಂತರಲ್ಲಿ ನೂರಕ್ಕೆ ೯೪ ಸ್ತ್ರೀಪುರುಷರು ಕುಲಕಸಬಿನವರು. ಅವರ ತಂದೆಯರ ಪ್ರಮಾಣ ನೂರಕ್ಕೆ ೫೫. ತಂದೆಯರಲ್ಲಿ ಆಡಳಿತಗಾರರು, ರಾಜತಂತ್ರಜ್ಞರು, ಕಲಾವಿದರು ಮತ್ತು ಗ್ರಂಥಕರ್ತರು ಬಹಳ ಸ್ವಲ್ಪವಾಗಿದ್ದರು.

ಅಮೇರಿಕದಲ್ಲಿ ಸಾಮಾನ್ಯ ಪ್ರತಿಭಾವಂತನೊಬ್ಬನಿಗೆ ಸರಾಸರಿ ೧॥ ಉದ್ಯೋಗವಿದ್ದರೆ ಇಂಗ್ಲಂಡಿನ ಪ್ರತಿಭಾವಂತನಿಗೆ ೩ ಇರುತ್ತದೆ. ಸಾಮಾನ್ಯ ಪ್ರತಿಭಾವಂತನಿಗಿಂತ ಸರ್ವಕೋವಿದನಿಗೆ ೨ ೧/೩ ವರ್ಷ ಹೆಚ್ಚು ಆಯುಷ್ಯವೆಂದು ಕಂಡು ಬಂದಿದೆ.

ಮುಂಗುರುಳ ಸೊಬಗು !

ಮಹಾ ಕವಿಗಳು (ಸುಂದರಿಯರ) ಅಳಕದ (curls) ವರ್ಣನೆ ಮಾಡದೆ ಬಿಟ್ಟಿಲ್ಲ. 'ಅಲಕಂ ಮಂದಾರ ಶೂನ್ಯಂ' (ಪಂಪ) 'ಹಸ್ತೇ ಲೀಲಾಕಮಲಮಲಕೇ ಬಾಲಕುಂದಾನುವಿದ್ಧಂ' [ಕಾಲಿದಾಸ], 'ಕರ್ಲಿ ಹೆಡ್ಡ್ ಕವೀಶ್ವರಗೆ' (ಪುರುಷಸರಸ್ವತಿ] ಎಂಬಿವು ಕೆಲವು ಉದಾಹರಣೆಗಳು. ಮುಂಗುರುಳು ತೀಡಿಕೊಳ್ಳುವುದರ ಬಗ್ಗೆ ಇಂದಿನ ನಾಗರಿಕ ತರುಣಿಯರು ಗಂಟೆಗಟ್ಟಲೆಯಾಗಿ ವೇಳೆಯನ್ನು ಹಾಳು ಮಾಡುವುದಂತೂ ಸರ್ವರ ಅನುಭವವಿದೆ. ಅಂದ ಮೇಲೆ ಮುಖದ ಮೋಹಕತೆಯನ್ನು ಹೆಚ್ಚಿಸುವುದರಲ್ಲಿ ಮುಂಗುರುಳಿನ ಪಾತ್ರ ಎಷ್ಟು ಪ್ರಮುಖವಾದದ್ದು ನೋಡಿ!

ಅಮೇರಿಕದಲ್ಲಿ ಈಗ ಕುರುಳು ತಿದ್ದಲು ಹೊಸದೊಂದು ಶೋಧ ನಡೆದಿದೆ. ಅದಕ್ಕೆ Flash Technique- ಸ್ಫುರಣತಂತ್ರವೆಂದು ಹೆಸರು. ಒಬ್ಬಾಕೆ ತನ್ನ ಅಂಗಡಿಯಲ್ಲಿ ಈ ಪ್ರಯೋಗವನ್ನು ಪ್ರಾರಂಭಿಸಿದ್ದಾಳಂತೆ. ಮೂರೇ ನಿಮಿಷಗಳಲ್ಲಿ ಮುಂಗುರುಳು ಅಲೆಯಲೆಯಾಗಿ ಬಿಡುವಂತೆ ಮಾಡಲಾಗುತ್ತದೆ. ಒಂದು ಕೊಂಕಿಗೆ ೧೦ ಸೆಕೆಂಡುಗಳು; ಮತ್ತು ಗಿರಾಕಿ ತಲೆಗಿಲೆ ಸುಟ್ಟುಕೊಳ್ಳಬೇಕಾಗಿಲ್ಲ.

ಹಗುರಾದ ಕುರುಳು ತಿದ್ದುವ ಅಚ್ಚುಗಳಿವೆ. ಅವಕ್ಕೆ ತಂತಿಯಿಲ್ಲ; ತುದಿಯಲ್ಲಿ ಲೋಹದ ಚಿಕ್ಕ ಚಿಕ್ಕ ಮೊನೆಗಳಿವೆ. ಅಂಗಡಿಯವಳು ಪ್ರತಿಯೊಂದನ್ನೂ ತನ್ನ ವೈದ್ಯುತ ಇಕ್ಕಳದಿಂದ ಮುಟ್ಟುತ್ತಾಳೆ. ಕೂದಲಲ್ಲಿ ಅದು ೩೫೦ ಡಿಗ್ರಿಯ ಉಷ್ಣವನ್ನು ಹುಟ್ಟಿಸುತ್ತದೆ. ೧೦ ಸೆಕೆಂಡುಗಳಲ್ಲಿ ಒಂದು ಸ್ವಯಂಚಲ ಕತ್ತರಿಯು ಅದನ್ನು ಬೇಕಾದಲ್ಲಿ ಕತ್ತರಿಸಿ ಒಗೆಯುತ್ತದೆ. ಮರು ನಿಮಿಷದಲ್ಲಿ ಇಕ್ಕಳ ಮುಂದೆ ಸಾಗುತ್ತದೆ. ಇದರಿಂದ ಕುರುಳು ಯಥಾವತ್ತಾಗಿ ರೂಪಿಸಲ್ಪಡುವುವು. ಇದಕ್ಕೆ ಬೇಕಾದದ್ದಷ್ಟೇ; ಅಥವಾ ಹೆಚ್ಚೆಂದರೆ ಒಂದು ಉಲ್ಲಾಸಕರ ಪರಿಮಳ. Flash wave- ಹೊಳೆವ ಕೊಂಕು ಕೊಡುವಾಗ ಅಮೋನಿಯವು ಬಳಸಲ್ಪಡುವುದಿಲ್ಲ. ತಲೆ ಕೊಟ್ಟ ಕ್ಷಣಾರ್ಧದಲ್ಲಿ 'ಗರ್ದಭಾಪ್ಯಪ್ಸರಾಯತೇ' – ಕತ್ತೆ ಕೂಡ ಅಪ್ಸರೆಯಾಗಿ ಪರಿಣಮಿಸುತ್ತದೆ! ಇಂತಹ ಒಂದು ಸಾಧನ ಇಲ್ಲಿಯೂ ಸುಲಭವಾಗಿ ಸಿಕ್ಕಬಾರದೇ ಎಂದು ಈ ವಿಷಯ ತಿಳಿದ ನಿಮಿಷಾರ್ಧದಲ್ಲಿ ತರುಣೀವೃಂದ ಕೊಳಲಾಡದೇ ?

ಮುಪ್ಪಿಗೆ ಸಂಜೀವನಿ !

ಒಬ್ಬನೇ ವಾಸಿಸುತ್ತಿದ್ದರೆ ಮನುಷ್ಯನಲ್ಲಿ ವೈಯಕ್ತಿಕ ಅಧಃಪಾತ ಉಂಟಾಗುತ್ತದೆಂದು ವಿಜ್ಞಾನಿಗಳ ವ್ಯಾಖ್ಯೆ. ಹಾಗಿದ್ದರೆ ಮಾನವನು ಪ್ರತಿಕ್ಷಣವೂ ಅದರ ವಿರುದ್ಧ ಕಾಳಗ ನಡೆಸುತ್ತಿರಬೇಕಾಗುವುದಂತೆ.

ಏಕಾಕಿ ಜೀವನಕ್ಕೆ ಸ್ವಾಭಾವಿಕವಾದ ಮದ್ದೆಂದರೆ ಸಮಾಜ. ಸಾಮಾಜಿಕ ಮತ್ತು ದೈಹಿಕ ಸಮತೋಲವನ್ನು ಎಷ್ಟೇ ಕಷ್ಟಪಟ್ಟು ಉಳಿಸಿಕೊಂಡರೂ ಏಕಾಕಿಗೆ ಗೆಳೆಯನೊಬ್ಬನ ದರ್ಶನವಾದರೆ ಅವನು ಮೊದಲಿಗಿಂತ ಉತ್ತಮ ರೀತಿಯಿಂದ ನಡೆದುಕೊಳ್ಳುವನೆಂಬುದು ಅನುಭವದ ಮಾತು.

ಇದರ ನೀತಿ ಹೀಗಿದೆ. ನೀನು ತಾರುಣ್ಯ ಭಾವದಲ್ಲಿರಬೇಕಾದರೆ ಅದಷ್ಟು ಜಟ್ಟಿಗೆ ಅದಷ್ಟು ಜನ [illegible] ಬೇಕು, ಆತಿಥ್ಯ ನೀಡಬೇಕು. ನಿನ್ನ [illegible] ಹೊರಗಣ ಜೀವನದತ್ತ ಗಮನವೀಯುವದಿಲ್ಲವಾದರೆ ಮುಪ್ಪು ನುಸುಳಿಕೊಂಡು ಬರುತ್ತದೆ. ನೀನು ನಿರೀಕ್ಷಿಸುವ ಮೊದಲೇ ಅದು ನಿನ್ನನ್ನು ಕಬಳಿಸಿಬಿಡುತ್ತದೆ. ಶ್ರೀ ಜಿಲೆಟ್ ಬರ್ಗೆಸ್‌ರಿಂದು ಇದನ್ನು ಬಯಲಿಗೆಳೆದಿದ್ದಾರೆ. ಇದರ ಸಾರರೂಪವೆಂಬಂತೆ ನಮ್ಮಲ್ಲಿ "ಸಂತೋಷಂ ಜನಯೇತ್ ಪ್ರಾಜ್ಞ:" ಎಂದಿದ್ದಾರೆ. ಅನ್ಯರನ್ನು ಸಂತೋಷಗೊಳಿಸುವುದರಿಂದ ತನಗೂ ಸಂತೋಷ ಉಂಟಾಗುವುದೆಂಬುದು ನಾಗರಿಕ ಮಾನವನ ಅನುಭವಕ್ಕೆ ಬರುವುದು ಸಹಜ. ಸಂತೋಷವೇ ಯೌವನ, ಚಿಂತೆಯೇ ಮುಪ್ಪು. ಇದನ್ನರಿತು ಬಾಳುವವನಿಗೆ ಮುಪ್ಪೆಲ್ಲಿಂದ ಬಂತು ?

ಪಾಕಶಾಸ್ತ್ರದಲ್ಲಿ ಹೊಸ ಶೋಧ !

ಮನುಷ್ಯನು ಬದುಕುವುದಕ್ಕಾಗಿ ಉಣ್ಣುತ್ತಾನಲ್ಲದೆ ಉಣ್ಣುವುದಕ್ಕಾಗಿ ಬದುಕುವುದಿಲ್ಲವೆಂದು ಬುದ್ಧಿವಂತರೆಷ್ಟೇ ಬೋಧಿಸಿದರೂ ಬದುಕೆಂದರೇ ಒಂದು ಊಟವೆಂದು ತತ್ವಶಾಸ್ತ್ರಕಾರರೆನ್ನುತ್ತಾರೆ. ಷಟ್ಕರಣ ಸಹಿತನಾದ ಆತ್ಮನು ಪ್ರಪಂಚದಲ್ಲಿ ವಿವಿಧ ಅನುಭವಗಳನ್ನು ಉಣ್ಣುವದೇ ಜೀವನ. ಆದುದರಿಂದ ಅಲಂಕಾರಿಕ ಭುಕ್ತಿಗೆ ಆಧಾರವಾದ ಮೂಲ ಭೋಗ (ಊಟ) ಜೀವನದಲ್ಲಿ ಸರ್ವಪ್ರಧಾನವೆನ್ನಲಡ್ಡಿಯೇನು? ಅದರಿಂದಲೇ–ಆಲಯಃ ಪಾಕಶಾಲಾ ಸ್ಯಾತ್ । ಕುಕ್ಷಿರ್ದೇವಃ ಸನಾತನಃ ॥ ತ್ಯಜೇಲ್ಲಜ್ಜಾಖ್ಯ ನಿರ್ಮಾಲ್ಯಂ । ನಿತ್ಯಂಭಕ್ಷ್ಯೇನ ಪೂರಯೇತ್ ॥ ಅಡಿಗೆಮನೆಯೆಂದರೆ] ದೇವಾಲಯ, ಹೊಟ್ಟೆಯೇ ಸನಾತನನಾದ ದೇವರು; ನಾಚಿಕೆಯ ಹಳೆಹೂಗಳನ್ನು ಬಿಸಾಟು ನಿತ್ಯವೂ ತಿಂಡಿತಿನಸುಗಳನ್ನು ತುಂಬಿ ಪೂಜಿಸಬೇಕು ಕಾಣಿರೋ— ಎಂದು ಬಕಸೂತ್ರದಲ್ಲಿ ಹೇಳಿದೆ.

ಮಂಗರಸನೆಂಬ ಕನ್ನಡ ಕವಿಪುಂಗವನು ಕನ್ನಡದಲ್ಲಿ ಬರೆದ ಸಮ್ಯಕ್ತ್ವಕೌಮುದಿಯಲ್ಲಿ ಬ್ರಾಹ್ಮಣರ ಭೋಜನವನ್ನು ಬಣ್ಣಿಸುತ್ತ "ವಡೆಯೊಬ್ಬಟ್ಟು ಲುಂಡಲಿಗೆಗಳರಾಶಿ... " ಎಂಬುದಾಗಿ ನಾನಾವಿಧದ ಭಕ್ಷ್ಯಗಳನ್ನು ಹೆಸರಿಸಿದ್ದಾನೆ. ಇಂಗ್ಲೆಂಡಿನಲ್ಲಿ ಇಟಾಲಿಯನ್ನರು ಮಾಂಸ ಭಕ್ಷ್ಯತಯಾರಿಕೆಯಲ್ಲೂ ಹಿಂದೀಯರು ತದಿತರ ತಿನಿಸುಗಳ ತಯಾರಿಕೆಯಲ್ಲೂ ಇಂಗ್ಲೀಷರ ಮೆಚ್ಚಿಗೆ ಪಡೆದಿದ್ದಾರಂತೆ. ಒಂದು ಸಲ ಬೆಳಗಾವಿಯಲ್ಲಿ ನಡೆದ ಕಾಂಗ್ರೆಸ ಸಭೆಯಲ್ಲಿ ಮಹಾತ್ಮಾ ಗಾಂಧಿಯವರು ಕರ್ನಾಟಕದ "ರಸವಿದ್ಯೆ" ಯನ್ನು ಮನವಾರೆ ಕೊಂಡಾಡಿದರಂತೆ. ಭಾರತದಲ್ಲೂ ಮದ್ರಾಸು—ದಕ್ಷಿಣಕನ್ನಡ — ಉಡುಪಿ ಬಾಣಸಿಗರ ತವರುಮನೆ! ಗುಜರಾತಿಗಳಾದರೂ ಸಿಹಿತಿಂಡಿಯ ತಯಾರಿಕೆಯಲ್ಲಿ ಯಾರಿಗೂ ಹಿಂದಲ್ಲ!

ಇದೀಗ ಶ್ರೀಮತಿ ಸಗುಣಾಬಾಯಿ ಮೋನಸಿಂಗರು ಕೆಲವು ಹೊಸ ತಿನಿಸುಗಳ ತಯಾರಿಕೆಯ ವಿವರಗಳನ್ನು 'ಹಿಂದು' ವಿನಲ್ಲಿ ಹೊರಗೆಡಹಿದ್ದಾರೆ. ಅವುಗಳಲ್ಲೆರಡು ಇಂತಿವೆ:

ಸಿಹಿಯವಲಕ್ಕಿ

ಅವಲಕ್ಕಿಯನ್ನು ಮೊದಲು ಸೋಸಬೇಕು. ಅನಂತರ ತೊಳೆದು ಒಂದು ಸಿದ್ದೆ ನೀರಿನಲ್ಲಿ ನೆನೆಸಬೇಕು. ಒಂದು ಚಿಟಿಕೆ ಉಪ್ಪು ಹಾಕಿದರೂ ಹಾಕಬಹುದು. ಅರ್ಧಗಂಟೆಯ ನಂತರ ತೆಗೆದು ಅದಕ್ಕೆ ಅರ್ಧ ಸಿದ್ದೆ ಸಕ್ಕರೆಯನ್ನು ಸೇರಿಸಬೇಕು. ಚೆನ್ನಾಗಿ ಕಲಿಸಿ ತಟ್ಟೆಯಲ್ಲಿಟ್ಟು ಬಡಿಸು. ಇದನ್ನು ಮುದುಕರಿಗಿಂತ ಹೆಚ್ಚಾಗಿ ಹುಡುಗರು ಇಷ್ಟಪಡುತ್ತಾರೆ !

ಅವಲಕ್ಕಿ ಉಪ್ಪಿಟ್ಟು

ವಿಧವಿಧದ ತರಕಾರಿಗಳಲ್ಲಿ ಒಂದು ಮುಷ್ಟಿಯಷ್ಟನ್ನು ತೆಗೆದುಕೋ. ಅದನ್ನು ಸ್ವಲ್ಪ ಉಪ್ಪು ಹಾಕಿ ನೀರಿನಲ್ಲಿ ಬೇಯಿಸು. ಬೇಯುವಾಗ ಅದಕ್ಕೆ ಸ್ವಲ್ಪ ಅರಿಸಿನಪುಡಿ, ಹೆಚ್ಚಿದ ನೀರುಳ್ಳಿ ಮತ್ತು ಮೆಣಸಿನಕಾಯಿಗಳನ್ನು ಹಾಕು. ಅರ್ಧ ಬೆಂದಬಳಿಕ ಅವಲಕ್ಕಿ ತೊಳೆದು ಅದರಲ್ಲಿ ಹಾಕು. ಬೇಕಾದರೆ ಇನ್ನೊಂದು ಸ್ವಲ್ಪ ನೀರುಬೆರಸು. ಅನಂತರ ಅದಕ್ಕೆ ತೆಂಗಿನಕಾಯಿಯ ಅರವುಹಾಕಿ ಬೇಯಿಸು. ಹತ್ತು ನಿಮಿಷಗಳಲ್ಲಿ ಅದು ಬೆಂದು ತಯಾರಾಗುತ್ತದೆ. ಇದೊಂದು ರುಚಿಯಾದ ಬೆಳಗಿನ ಉಪಾಹಾರ !

'A woman who has mastered the sauces sits on the apex of civilisation—ಮೇಲೋಗರ ಮಾಡಬಲ್ಲಾಕೆ ನಾಗರಿಕತೆಯ ತುತ್ತತುದಿಯೇರಿ ಕುಳಿತುಕೊಳ್ಳುತ್ತಾಳೆ' ಎಂಬ ಮಾತನ್ನು ತಿಳಿದು ಇಂದಿನ ವಿದ್ಯಾವತಿಯರು ಮೇಲಿನಂತೆ ಹೊಸ ಹೊಸ ತಿಂಡಿತಿನಸುಗಳನ್ನು ತಯಾರಿಸಿ ಮನೆಮಂದಿಯ ನಾಲಿಗೆ ಮೈಮನಸ್ಸುಗಳಿಗೆ ಉಲ್ಲಾಸವನ್ನುಂಟು ಮಾಡಿ ಆರೋಗ್ಯ ದೃಢಕಾಯ ಸಮಾಜವನ್ನು ರಚಿಸಲು ಕಂಕಣಬದ್ಧರಾಗುವುದು ಅತ್ಯಗತ್ಯವಲ್ಲವೆ ?

ಅಭಿನಂದನೀಯ

ಸದ್ಯದ ಪರಿಸ್ಥಿತಿಯನ್ನು ಚೆನ್ನಾಗಿ ಮನಗಂಡು ಜಮಖಂಡಿಯ ರಾಜೇಸಾಹೇಬರು ರಾಜ್ಯಸನ್ಯಾಸಕ್ಕೆ ಸಿದ್ಧರಾದುದು ಸರ್ವಶ್ರುತ. ತಮ್ಮ ಪ್ರಜೆಗಳ ಅಭಿಪ್ರಾಯವನ್ನು ತಿಳಿದುಕೊಳ್ಳುವುದಕ್ಕಾಗಿ ಅವರು ಸಂಸ್ಥಾನದಲ್ಲಿಯೂ ಸಂಚರಿಸಿದರು. ಸಂಸ್ಥಾನ ಪ್ರಜಾಪರಿಷತ್ತು ಬನಹಟ್ಟಿಯಲ್ಲಿ ಕೂಡಿ ವಿಲೀನೀಕರಣಕ್ಕೆ ಒಪ್ಪಿಗೆ ಕೊಡಲಾಯಿತು. ಸಂಸ್ಥಾನ ಮಂತ್ರಿಗಳಾದ ಸರದಾರ ವಲ್ಲಭಭಾಯಿ ಪಟೇಲರು ಕೋರಿದಂತೆ ರಾಜಪ್ರಜೆಗಳಿಬ್ಬರೂ ವಿಲೀನೀಕರಣಕ್ಕೆ ಒಪ್ಪಿಗೆ ಕೊಟ್ಟಂತಾದ್ದರಿಂದ ಮುಂದಿನ ಕಾರ್ಯಕ್ರಮವನ್ನು ಬೇಗ ಕೈಕೊಳ್ಳಲು ಅವರಿಗೆ ಅವಕಾಶ ದೊರೆತಂತಾಯಿತು. ಜಮಖಂಡಿ ರಾಜ—ಪ್ರಜೆಗಳ ಈ ಮಾರ್ಗದರ್ಶನವು ಅಭಿನಂದನೀಯವೂ ಅನುಕರಣೀಯವೂ ಆಗಿದೆ. ಈ ವಿಲೀನೀಕರಣದ ಯೋಜನೆಗೆ ಬದ್ಧರಾಗದೆ ಒಕ್ಕೂಟ ಯೋಜನೆಯನ್ನು ಕಾರ್ಯರೂಪದಲ್ಲಿ ತರಲು ಅಣಿಯಾದ ದಕ್ಷಿಣ ಸಂಸ್ಥಾನಗಳ ಉಳಿದ ರಾಜರೂ ಮತ ಪರಿವರ್ತಿಸಿ, ಸಂಸ್ಥಾನದ ಲೋಕಮತದ ಪ್ರವಾಹವನ್ನು ತಿಳಿದುಕೊಂಡು ಜನತೆ ಮತ್ತು ಘಟನಾ ಸಮಿತಿಯು ಅನುಕೂಲ ಅಭಿಪ್ರಾಯ ಪಟ್ಟರೆ ವಿಲೀನೀಕರಣಕ್ಕೆ ತಾವು ಅಡ್ಡ ಬರುವುದಿಲ್ಲವಾಗಿ ಮಹತ್ವದ ನಿರ್ಣಯವನ್ನು ಕೈಕೊಂಡರು. ಈ ನಿರ್ಣಯವನ್ನನುಲಕ್ಷಿಸಿ ಘಟನಾ ಸಮಿತಿಯ ಪ್ರಜಾಪ್ರಮುಖರು ಅನುಕೂಲ ನಿರ್ಣಯವನ್ನು ಸ್ವೀಕರಿಸಿರುವರು. ಇದೆಲ್ಲವನ್ನು ಬೇರೆ ಕಡೆ ಕೊಟ್ಟಿದ್ದೇವೆ. ಆಯಾ ಸಂಸ್ಥಾನ ಪ್ರಜಾಪರಿಷತ್ತಿನವರು ಬೇಗನೆ ಸಭೆ ಸೇರಿಸಿ ಅನುಕೂಲ ಅಭಿಪ್ರಾಯವನ್ನು ವ್ಯಕ್ತಪಡಿಸುವುದು ಅತ್ಯವಶ್ಯವಾಗಿದೆ. ರಾಜಮಂಡಳದವರೆ ರಾಜ್ಯಸನ್ಯಾಸಕ್ಕೆ ಸಿದ್ಧರಾಗಿರುವಾಗ ಪ್ರಜೆಗಳು ದುರಾಶೆಗೊಳಗಾಗದೆ ಈ ಸುವರ್ಣ ಸಂಧಿಯ ಯೋಗ್ಯ ಲಾಭವನ್ನು ಮಾಡಿಕೊಳ್ಳಬೇಕೆಂದು ಆಗ್ರಹಪಡಿಸುತ್ತೇವೆ. ಒಕ್ಕೂಟ ಯೋಜನೆಗಿಂತ ಇಂದು ಶ್ರೇಷ್ಠವಾದುದೆಂಬುವನ್ನು ಬೇರೆ ಹೇಳಬೇಕಿಲ್ಲ. ಈ ಪರಿಸ್ಥಿತಿಯಲ್ಲಿ ರಾಜಮಂಡಳದವರು ಸ್ವಾರ್ಥತ್ಯಾಗಕ್ಕೆ, ರಾಜಸಂನ್ಯಾಸಕ್ಕೆ ಸಿದ್ಧರಾಗಿ ನಿಜವಾಗಿಯೂ ಎಲ್ಲರ ಪ್ರಶಂಸೆಗೆ ಪಾತ್ರರಾಗಿರುವರು.

ಉಳಿದ ಸಂಸ್ಥಾನಗಳು

ದಕ್ಷಿಣ ಸಂಸ್ಥಾನಗಳ ಒಕ್ಕೂಟದಲ್ಲಿ ಕೂಡಿದ ರಾಜರು ಈಗ ವಿಲೀನೀಕರಣಕ್ಕೆ ಸಿದ್ಧರಾದಂತಾಯಿತು. ಆದರೆ ಈ ಯೋಜನೆಯ ಬಗ್ಗೆ ಚಕಾರಶಬ್ದ ತೆಗೆಯದ ಕರ್ನಾಟಕದ ಸಂಸ್ಥಾನಗಳು ಇನ್ನೂ ಇವೆ. ಮುಧೋಳ, ಅಕ್ಕಲಕೋಟ, ಜತ್ತ, ಸವಣೂರ ಸೊಂಡೂರ ಮೊದಲಾದ ಸಂಸ್ಥಾನಗಳು ತಮ್ಮ ಧೋರಣವನ್ನು ಈ ವರೆಗೆ ವ್ಯಕ್ತಪಡಿಸಿರುವುದಿಲ್ಲ. ಅವಾದರೂ ತಮ್ಮ ಭವಿತವ್ಯವನ್ನು ಬೇಗ ನಿರ್ಣಯಿಸಿಕೊಳ್ಳುವುದು ಕ್ರಮಪ್ರಾಪ್ತವಾಗಿದೆ. ಕೊಲ್ಹಾಪೂರ ಸಂಸ್ಥಾನವನ್ನು ಬಿಟ್ಟುಗೊಟ್ಟರೂ ಉಳಿದ ಸಣ್ಣಪುಟ್ಟ ಸಂಸ್ಥಾನಗಳೆಲ್ಲ ವಿಲೀನೀಕರಣ ಯೋಜನೆಯಲ್ಲಿ ಸೇರಿದ್ದಾದರೆ ಮುಂಬಯಿ ಪ್ರಾಂತವು ದೊಡ್ಡದಾಗುವದಲ್ಲದೆ ಭಾವೀ ಕರ್ನಾಟಕ ಪ್ರಾಂತದ ಪ್ರಶ್ನೆಯೂ ಬಗೆಹರಿಯಲು ಅನುಕೂಲವಾಗುವುದು. ಸದ್ಯದ ಪರಿಸ್ಥಿತಿಯಲ್ಲಿ ಯಾವ ಸಣ್ಣಪುಟ್ಟ ಸಂಸ್ಥಾನಗಳೂ ಸ್ವತಂತ್ರ ರೀತಿಯಿಂದ ಆಡಳಿತವನ್ನು ಸಾಗಿಸಿಕೊಂಡು ಹೋಗಲಾರವೆಂದು ಜಮಖಂಡಿ ರಾಜೇಸಾಹೇಬರು ಅಭಿಪ್ರಾಯಪಟ್ಟದ್ದು ಯಥಾರ್ಥವಾಗಿದೆ. ಇದೀಗ ಆಡಳಿತ ವೆಚ್ಚ ವಿಪರೀತ ಬೆಳೆದಿದ್ದು ಪ್ರಜೆಗಳ ಬೇಡಿಕೆಗಳೂ ಹೆಚ್ಚಿವೆ. ಅಲ್ಪ ಉತ್ಪನ್ನವುಳ್ಳ ಯಾವ ಸಂಸ್ಥಾನಗಳೂ ಜನತೆಯ ಈ ಎಲ್ಲ ಬೇಡಿಕೆಗಳನ್ನು ಪೂರಯಿಸಿಕೊಡಲಾರವು. ಆದುದರಿಂದ ಆಯಾ ಸಣ್ಣಪುಟ್ಟ ಸಂಸ್ಥಾನಿಕರು ಆದಷ್ಟು ಬೇಗ ತಮ್ಮ ಸಲಹೆಗಾರರೊಡನೆ ವಿಚಾರ ವಿನಿಮಯ ಮಾಡಿ ವಿಲೀನೀಕರಣ ಯೋಜನೆಯನ್ನು ಸ್ವೀಕರಿಸಿ ಪ್ರಜೆಗಳ ಅಭಿಪ್ರಾಯವನ್ನು ತಿಳಿದುಕೊಂಡು ಕೇಂದ್ರ ಸರಕಾರಕ್ಕೆ ತಿಳಿಸಬೇಕು. ಸದ್ಯದಲ್ಲಿ ಇದೇ ಸೂಕ್ತವಾದ ಮಾರ್ಗವು.

ಮಹತ್ವದ ಪ್ರಶ್ನೆ

ಹಿಂದುಸ್ಥಾನದ ಮುಖ್ಯ ಮಂತ್ರಿಗಳು ಕರ್ನಾಟಕ ಪ್ರಾಂತದ ಸಂಬಂಧದಲ್ಲಿ ಕೊಟ್ಟ ಹೇಳಿಕೆಯಿಂದ ಕನ್ನಡಿಗರ ಮುಂದೆ ಮಹತ್ವದ ಪ್ರಶ್ನೆ ಧುತ್ತೆಂದು ನಿಂತಿದೆ. ಈ ಪರಿಸ್ಥಿತಿಯಲ್ಲಿ ಕೂಡಲೆ ನಿರ್ಣಯವನ್ನು ಕೈಕೊಂಡು ಕಾರ್ಯಪ್ರವೃತ್ತರಾಗಬೇಕಾಗಿದೆ. ಈ ಸಂಬಂಧದಲ್ಲಿ ಹಲವರು ಹಲವಾರು ವಿಧ ಸೂಚನೆಗಳನ್ನು ಮಾಡಿರುವರು. ಅಸಹಕಾರ, ಸತ್ಯಾಗ್ರಹ, ಶಾಸನಸಭೆಗೆ, ಮಂತ್ರಿ ಮಂಡಳಕ್ಕೆ ರಾಜೀನಾಮೆ ಮೊದಲಾದ ಮಾತುಗಳೂ ಕೇಳಬರುತ್ತಿವೆ. ಇವೆಲ್ಲವುಗಳಲ್ಲಿ ಯಾವುದು ಸೂಕ್ತವಾದುದು ಅಥವಾ ಬೇರೆಯ ಯಾವುವಾದರೊಂದು ಉಪಾಯವನ್ನೇ ಕೈಕೊಳ್ಳಬೇಕೋ ಹೇಗೆ [illegible] ವಿಚಾರಿಸಬೇಕಾಗಿದೆ. ಶಾಸನ [illegible] ಪರಿಷತ್ತು ಗೋಡಿನಲ್ಲಿ [illegible]

ಸಂಪಾದಕೀಯ ಟೀಕೆಟಿಪ್ಪಣಿಗಳು

ಇದೆಲ್ಲವನ್ನು ಚೆನ್ನಾಗಿ ವಿಮರ್ಶಿಸಿ ಸೂಕ್ತವಾದ ಮತ್ತು ಪ್ರಾಂತ ನಿರ್ಮಾಣಕ್ಕೆ ಅನುಕೂಲವಾದ ನಿರ್ಣಯವನ್ನು ಕೈಕೊಳ್ಳುವುದೆಂದು ಆಶಿಸುತ್ತೇವೆ. ಆದರೆ ಏಕೀಕರಣ ಪರಿಷತ್ತಿನ ನಿರ್ಣಯವು ಕಾಂಗ್ರೆಸ್ ಪ್ರತಿನಿಧಿಗಳ ಮೇಲೆ ಅಷ್ಟೊಂದು ಬಂಧನಕಾರಕವಾಗಲಾರದಾದ್ದರಿಂದ ಕರ್ನಾಟಕ ಪ್ರಾಂತಿಕ ಸಮಿತಿಯೂ ಅವಶ್ಯವೆನಿಸಿದರೆ ಕರ್ನಾಟಕ ರಾಜಕೀಯ ಪರಿಷತ್ತೂ ಸೇರಿ ತಮ್ಮ ಪ್ರತಿನಿಧಿಗಳಿಗೆ ಸ್ಪಷ್ಟವಾದ ಆದೇಶವನ್ನು ಕೊಡುವ ನಿರ್ಣಯವನ್ನು ಕೈಕೊಳ್ಳಬೇಕಾಗಿದೆ. ಮುಖ್ಯ ಮಂತ್ರಿಗಳ ಹೇಳಿಕೆಯಿಂದ ಆಂಧ್ರರ ಸಮಸ್ಯೆ ಬಗೆಹರಿದಂತಾಗಿದ್ದರಿಂದ ಅವರು ಹಿಂದಿನಂತೆ ನಮ್ಮ ಕೂಡ ಈಗ ಸಹಕರಿಸಲಾರರು, ಹೋರಾಡಲಾರರು. ಇನ್ನುಳಿದ ಮಹಾರಾಷ್ಟ್ರ, ಕೇರಳರನ್ನು ಕೂಡಿಕೊಂಡು ನಾವು ಸಂಯುಕ್ತ ಚಳವಳಿಯನ್ನು ಮಾಡುವದೂ ಅವಶ್ಯವೆನಿಸಬಹುದು. ಮಹಾರಾಷ್ಟ್ರದವರು ನೆಹರು ಇವರ ಹೇಳಿಕೆಯಿಂದ ಸಮಾಧಾನ ಹೊಂದಿದ್ದರೂ ಬರುವ ರಾಜ್ಯ ಘಟನೆಯಲ್ಲಿ ಮಹಾರಾಷ್ಟ್ರಕ್ಕೆ ಸ್ವತಂತ್ರ ಪ್ರಾಂತ ಸಿಕ್ಕುವಂತೆ ಪ್ರಯತ್ನಿಸಬೇಕೆಂದು ನಿರ್ಧರಿಸಿರುವರು. ಈ ಪರಿಸ್ಥಿತಿಯಲ್ಲಿ ಅವರೂ ಕೇರಳರೂ ನಮ್ಮೊಡನೆ ಕೂಡಬಹುದಾಗಿದೆ. ಆದುದರಿಂದ ಮೂರೂ ಪ್ರಾಂತಗಳ ಪ್ರತಿನಿಧಿಗಳುಳ್ಳ ಸಮಿತಿಯನ್ನು ನೇಮಿಸಿ ಮುಂದಿನ ಕಾರ್ಯವನ್ನು ನಡೆಸಬಹುದಾಗಿದೆ. ಈ ಬಗ್ಗೆ ಕರ್ನಾಟಕ ಏಕೀಕರಣ ಸಂಘವೂ ಶಾಸನ ಸಭಾ ಸದಸ್ಯರೂ ಪ್ರಾಂತಿಕ ಕಾಂಗ್ರೆಸ ಸಮಿತಿಯವರೂ ವಿಚಾರ ಮಾಡಿ ಧೋರಣವನ್ನು ಗೊತ್ತುಪಡಿಸಬೇಕು.

ಪರ್ವಕಾಲದ ಸದುಪಯೋಗ

ಹಿಂದುಸ್ಥಾನದ ರಾಜ್ಯ ಘಟನೆ ಸಿದ್ಧವಾಗುವ ಪರ್ವಕಾಲವೀಗ ಪ್ರಾಪ್ತವಾಗಿದೆ. ಹೊಸ ಘಟನೆ ಬರುವ ಎಪ್ರಿಲ ತಿಂಗಳೊಳಗಾಗಿ ಸಿದ್ಧವಾಗಲಿದೆ. ಇದು ಪ್ರತ್ಯಕ್ಷ ಕಾರ್ಯರೂಪದಲ್ಲಿ ೧೯೪೯ ಮಾರ್ಚ ಅಥವಾ ಜೂನದಲ್ಲಿ ಬರಬಹುದು. ಹೊಸ ಘಟನೆ ಪ್ರತ್ಯಕ್ಷ ಅಮಲಿನಲ್ಲಿ ಬರುವದರೊಳಗಾಗಿ ಹೊಸ ಪ್ರಾಂತಗಳು ರಚಿತವಾದರೆ ಮಾತ್ರ ಆ ಘಟನೆಯಂತೆ ಹೊಸ ಚುನಾವಣೆಗಳು ನಡೆಯಬಹುದು. ಅಂದರೆ ೧೯೪೮ ನೇ ಇಸ್ವಿಯ ಮಧ್ಯದೊಳಗಾಗಿಯೆ ಹೊಸ ಪ್ರಾಂತಗಳ ಸೀಮೆಗಳು ನಿರ್ಣಯಿಸಲ್ಪಡಬೇಕು. ಅಲ್ಲದೆ ಸಾಲ ಸೊತ್ತು ಮೊದಲಾದವುಗಳ ವಿಚಾರವೂ ಮುಗಿಯಲಿಕ್ಕೆ ಬೇಕು. ಅಂದರೆ ಗಡಿ ನಿರ್ಣಯ ಸಮಿತಿಯು ನೇಮಿಸಲ್ಪಟ್ಟು ಬರುವ ಮಾರ್ಚ ಎಪ್ರಿಲದಲ್ಲಿ ಕಾರ್ಯವನ್ನು ಪ್ರಾರಂಭಿಸಬೇಕು. ಇದೆಲ್ಲ ಸಾಧ್ಯವಾಗದಿದ್ದರೆ ಮುಖ್ಯ ಮಂತ್ರಿಗಳು ಮುಂದೆ ಮಾಡಿದ ಅಡಚಣೆಗಳು ಗುಡ್ಡದಷ್ಟಾಗಿ ಹೊಸ ಘಟನೆಯನ್ವಯ ಕರ್ನಾಟಕ ಪ್ರಾಂತದ ನಿರ್ಮಾಣವಾಗುವ ಆಸೆಯನ್ನು ಬಿಟ್ಟುಬಿಡಬೇಕಾಗುವದು. ಬೇರೆ ಪ್ರಾಂತದವರಿಗಿಂತ ಕರ್ನಾಟಕಕ್ಕೆ ಸ್ವತಂತ್ರ ಪ್ರಾಂತದ ಅವಶ್ಯಕತೆ ಹೆಚ್ಚಿದ್ದುದರಿಂದ ಎಲ್ಲರಿಗಿಂತ ಹೆಚ್ಚು ಜೋರಿನಿಂದ ಕನ್ನಡಿಗರು ಈ ದಿಸೆಯಲ್ಲಿ ಪ್ರಯತ್ನಿಸಬೇಕಾಗಿದೆ. ಘಟನಾ ಸಮಿತಿಯಲ್ಲಿ ಬರುವ ಎಪ್ರಿಲದಲ್ಲಿ ಮತ್ತೆ ಭಾಷಾನ್ವಯ ಪ್ರಾಂತಗಳ ಚರ್ಚೆಯಾಗಲಿದೆ. ಅಷ್ಟರಲ್ಲಿ ಭಾಷಾನ್ವಯ ಪ್ರಾಂತ ರಚನೆಯ ಬಗ್ಗೆ ಹೆಚ್ಚು ಒತ್ತಾಯವಾದರೆ, ಸಂಘಟಿತ ಪ್ರಯತ್ನವಾದರೆ ಆಂಧ್ರದೊಡನೆ ಉಳಿದ ಪ್ರಾಂತಗಳ ಹೆಸರೂ ಸ್ವತಂತ್ರ ಪ್ರಾಂತ ರಚನೆಯಲ್ಲಿ ಬರಬಹುದು. ನಾವು ಮೇಲೆ ಹೇಳಿದಂತೆ ಕ್ರಿಯಾ ಸಮಿತಿಯವರು ಪ್ರಾಂತಿಕ ಕಾಂಗ್ರೆಸ ಸಮಿತಿಯವರು ಮತ್ತು ಶಾಸನ ಸಭಾ ಸದಸ್ಯರು ಈ ಬಗ್ಗೆ ಒತ್ತಾಯದ ಬೇಡಿಕೆಯನ್ನು ಮಾಡಿ ಶಿಷ್ಟ ಮಂಡಳದ ಮುಖಾಂತರ ಮುಖ್ಯ ಮಂತ್ರಿಗಳನ್ನು ಕಂಡು ಅವರನ್ನು ಮನಗಾಣಿಸಿ ಕೊಡುವದು ಅಪ್ರಸ್ತುತವಾಗಲಾರದು. ಅದುದರಿಂದ ಬರೀ ಏಕೀಕರಣ ಸಂಘ ಇಲ್ಲವೆ ಕ್ರಿಯಾ ಸಮಿತಿ ಮಾತ್ರವೆ ಈ ಬಗ್ಗೆ ಪ್ರಯತ್ನಿಸದೆ ಪ್ರಾಂತಿಕ ಕಾಂಗ್ರೆಸ ಸಮಿತಿಯೂ ಮುಂದಾಗಿ ಅವಶ್ಯ ಉಪಾಯಗಳನ್ನು ಕೈಕೊಳ್ಳಬೇಕು. ದಕ್ಷಿಣ ಸಂಸ್ಥಾನಗಳು ವಿಲೀನೀಕರಣಕ್ಕೆ ಸಿದ್ಧವಾದ್ದರಿಂದ ಕರ್ನಾಟಕ ಪ್ರಾಂತ ರಚನೆ ಹೆಚ್ಚು ಸುಲಭವಾಗಿದೆ. ಪಂಡಿತ ನೆಹರುರವರು ಮುಂದೆ ಮಾಡಿದ ಅಡಚಣೆಗಳನ್ನು ನಿವಾರಿಸಿ ಕನ್ನಡಿಗರು ಈಗಲೆ ಸ್ವತಂತ್ರ ಪ್ರಾಂತವನ್ನು ಪಡೆಯುವದು ಇಷ್ಟು ಮುತ್ತ ಅವಶ್ಯವಾಗಿದೆ.

ಮೈಸೂರಿನ ಮುನ್ನಡೆ

ಮೈಸೂರು ಸಂಸ್ಥಾನವು ತಾತ್ಪೂರ್ತಿಕ ಹೊಣೆಗಾರ ಸರಕಾರವನ್ನು ಪಡೆದು ಹೊಸ ರಾಜ್ಯಘಟನೆಯನ್ನು ಸಿದ್ಧಪಡಿಸುವುದಕ್ಕಾಗಿ ಘಟನಾ ಸಮಿತಿಯನ್ನು ರಚಿಸಲಾಗಿದೆ. ಈ ಸರಕಾರವು ತಾತ್ಪೂರ್ತಿಕವಾಗಿದ್ದರೂ ಸಂಸ್ಥಾನದ ಸಾರ್ವಾಂಗಿಕ ಉನ್ನತಿಗೆ ಅವಶ್ಯವಾದ ಯೋಜನೆಗಳನ್ನು ಕೈಕೊಳ್ಳಲಣಿಯಾದುದು ಅಭಿನಂದನೀಯವಾಗಿದೆ. ಮೈಸೂರಿನ ದಿವಾಣರಾದ ಸರ್. ರಾಮಸ್ವಾಮಿ ಮುದ್ಲಿಯಾರ ಅಧ್ಯಕ್ಷತೆಯಲ್ಲಿಯೇ ಈ ಅಧಿವೇಶನ ನಡೆದಿದ್ದರೂ ಹಿಂದಿನವರು ಇಂದಿನ ಅಧಿವೇಶನಗಳಲ್ಲಿ ಮಹತ್ವದ ಅಂತರ ಕಂಡುಬರುತ್ತಿತ್ತು. ಆಗಿನ ದರ್ಪ, ಅಧ್ಯಕ್ಷತೆ, ಪ್ರಜಾಭಿಪ್ರಾಯವನ್ನು ಧಿಕ್ಕರಿಸುವ ಧೋರಣೆ ಇಂದು ಕಂಡುಬರುತ್ತಿದ್ದಿಲ್ಲ. ಪ್ರಜಾ ಪ್ರತಿನಿಧಿಗಳಿಗನುಕೂಲವಾದ ರೀತಿಯಲ್ಲಿಯೆ ಅಧಿವೇಶನವು ಸಾಗಿತು. ಸರಕಾರದ ಧೋರಣೆ ಬದಲಾಗಿರುವಾಗ ಶಾಸನ ಸಭೆಯ ರೀತಿ ನೀತಿಗಳಲ್ಲಿ ಮಾರ್ಪಾಡಾದರೆ ಆಶ್ಚರ್ಯವೇನು? ಇರಲಿ, ಹನ್ನೊಂದು ದಿನಗಳ ಈ ಅಧಿವೇಶನದಲ್ಲಿ ಶಾಸನ ಸಭೆ ಮಹತ್ವದ ಗೊತ್ತುವಳಿಗಳನ್ನು ಯೋಜನೆಗಳನ್ನು ಸ್ವೀಕರಿಸಿದ್ದುಂಟು. ಪ್ರಜಾಪ್ರಮುಖರಿಂದ ಅಲಂಕೃತವಾದ ಸರಕಾರವೂ ಮಹತ್ವದ ನಿರ್ಧಾರವನ್ನು ಕೈಕೊಂಡಿದೆ. ಮೈಸೂರು ಸಂಸ್ಥಾನದ ಜನಸಂಖ್ಯೆ ವಿಪರೀತ ಬೆಳೆದದ್ದರಿಂದ ಆಹಾರದ ಉತ್ಪಾದನೆಯನ್ನು ಹೆಚ್ಚಿಸದಿದ್ದರೆ ಜನ ಅನ್ನವಿಲ್ಲದೆ ಸಾಯಬೇಕಾಗುವುದೆಂದು ಮುಖ್ಯ ಮಂತ್ರಿಗಳು ಹೇಳಿದರಲ್ಲದೆ ಸಂಸ್ಥಾನವನ್ನು ಆಹಾರ ವಿಷಯದಲ್ಲಿ ಸ್ವಾವಲಂಬಿಯನ್ನಾಗಿ ಮಾಡಲು ಪಂಚವಾರ್ಷಿಕ ಯೋಜನೆಯನ್ನು ಕೈಕೊಳ್ಳಲು ನಿರ್ಧರಿಸಿದೆಯೆಂದೂ ಹೇಳಿದರು. ಸಂಸ್ಥಾನದಲ್ಲಿ ಆಹಾರ ಉತ್ಪಾದನೆಯ ಸಾಧನ ಸಂಪತ್ತು ಬೇಕಾದಷ್ಟಿದ್ದು ಅದರ ಯೋಗ್ಯ ಉಪಯೋಗ ಮಾಡಿಕೊಂಡಿದ್ದಾದರೆ ಅದು ಸ್ವಾವಲಂಬಿಯಾಗಲು ಅಡ್ಡಿಯಿಲ್ಲ. ಮದ್ಯಪಾನವನ್ನು ಐದು ವರುಷಗಳಲ್ಲಿ ಪೂರ್ಣವಾಗಿ ನಿಲ್ಲಿಸಿಬಿಡಬೇಕೆಂದು ಸರಕಾರದವರು ನಿರ್ಧರಿಸಿರುವರು. ಮದ್ಯಪಾನದ ಅನಿಷ್ಟ, ಘಾತಕ ಪರಿಣಾಮಗಳ ಬಗ್ಗೆ ವಿಶೇಷ ಹೇಳಬೇಕಾಗಿಲ್ಲ. ಅದು ಎಲ್ಲರಿಗೂ ತಿಳಿದ ವಿಷಯ. ಕೇವಲ ಸರಕಾರಕ್ಕೆ ಹೇರಳ ಹಣ ಬರುವುದೆಂದು ಅದನ್ನು ಪುರಸ್ಕರಿಸುವದು ಯಾವ ರೀತಿಯಿಂದಲೂ ನ್ಯಾಯ್ಯವಲ್ಲ. ಉತ್ಪಾದನೆ ಹೆಚ್ಚಬೇಕಾದರೆ ಉದ್ದಿಮೆದಾರರು ಮತ್ತು ಕೂಲಿಕಾರರಲ್ಲಿ ಒಂದು ಬಗೆಯ ಶಾಂತಿ ಸೌಹಾರ್ದತೆ ಇರುವುದು ಅವಶ್ಯ. ಅದಕ್ಕಾಗಿಯೆ ತ್ರೈವಾರ್ಷಿಕ ಔದ್ಯೋಗಿಕ ಶಾಂತಿ ಸ್ಥಾಪಿಸಲು ಒಡೆಯರ ಮತ್ತು ಕೂಲಿಕಾರರ ಪರಿಷತ್ತನ್ನು ಸರಕಾರ ಕರೆಯಲು ನಿರ್ಧರಿಸಿದ್ದು ಸ್ತುತ್ಯವಾಗಿದೆ. ಸಂಸ್ಥಾನದ ಸಾರ್ವಾಂಗಿಕ ಉನ್ನತಿಗಾಗಿ ವಿವಿಧ ಯೋಜನೆಗಳನ್ನು ಕೈಕೊಳ್ಳಲು ಸರಕಾರ ಸಿದ್ಧವಾಗಿದ್ದು ಪ್ರಶಂಸನೀಯವಾಗಿದೆ. ಪ್ರಜೆಗಳು ಅವರಿಗೆ ಸರಿ ರೀತಿಯಿಂದ ಸಹಾಯ ಸಹಕಾರಗಳನ್ನು ನೀಡಿ ಅವರ ಯೋಜನೆಗಳನ್ನು ಯಶಸ್ವಿ ಮಾಡಬೇಕೆಂದು ಸೂಚಿಸುತ್ತೇವೆ.

ರಾಷ್ಟ್ರಭಾಷೆಯ ಸ್ಥಾನ

ಹಿಂದುಸ್ಥಾನ ಆಂಗ್ಲರ ದಾಸ್ಯವನ್ನು ಕಳಚಿ ಒಗೆದು ಸ್ವಾತಂತ್ರ್ಯವನ್ನು ಸಂಪಾದಿಸಿದ್ದರಿಂದ ಅದು ಎಲ್ಲ ವಿಷಯಗಳಲ್ಲಿ ತನ್ನತನವನ್ನು ಅಳವಡಿಸಿಕೊಳ್ಳುವದು ಕ್ರಮಪ್ರಾಪ್ತವಾಗಿದೆ. ಈವರೆಗೆ ಸರಕಾರದ ಭಾಷೆಯೇ ಆಂಗ್ಲ ಭಾಷೆಯಾಗಿದ್ದರಿಂದ ಎಲ್ಲೆಲ್ಲಿಯೂ ಅದರ ಪ್ರಸ್ಥವೇ ಬೆಳೆದಿತ್ತೆಂಬಲ್ಲಿ ಸಂದೇಹವಿಲ್ಲ. ಅದು ಕ್ರಮೇಣ ಕಡಿಮೆಯಾಗಬೇಕಾದುದು ಅವಶ್ಯ ಮತ್ತು ಇಷ್ಟವಾಗಿದೆ. ಅದರ ಬದಲು ರಾಷ್ಟ್ರಭಾಷೆಯಾದ ಹಿಂದಿಯು ಕೇಂದ್ರ ಸರಕಾರದ ಭಾಷೆಯಾಗಬೇಕಾದುದು ಅವಶ್ಯ. ಪ್ರಾಂತೀಯ ಸರಕಾರಗಳ ಭಾಷೆ ಆಯಾ ಪ್ರಾದೇಶಿಕ ಭಾಷೆಯಾಗಿರಬೇಕೆಂಬಲ್ಲಿ ಸಂದೇಹವಿಲ್ಲ. ಕೇಂದ್ರ ಸರಕಾರದ ಶಿಕ್ಷಣ ಮಂತ್ರಿಗಳಾದ ಮಾನ್ಯ ಮೌಲಾನಾ ಅಬುಲ್‌ಕಲಾಂ ಆಝಾದರು ಪಾಟನಾ ವಿಶ್ವವಿದ್ಯಾಲಯದ ಪದವೀದಾನ ಸಮಾರಂಭದಲ್ಲಿ ಮಾತಾಡುತ್ತ ರಾಷ್ಟ್ರಭಾಷೆಯ ಸ್ಥಾನವನ್ನು ಕುರಿತು ಕೆಲ ಮಾತುಗಳನ್ನು ಹೇಳಿರುವರು. ಆಂಗ್ಲ ಭಾಷೆಯನ್ನು ಒಮ್ಮೆಲೆ ಬಿಟ್ಟುಕೊಟ್ಟರೆ ಅನೇಕ ಅಡಚಣಗಳು ಬರಬಹುದೆಂದೂ ಆದರೆ ಭಾಷೆಯಾಗಲು ಯೋಗ್ಯವಾದ ರಾಷ್ಟ್ರಭಾಷೆ ಹಿಂದುಸ್ಥಾನದಲ್ಲಿ [illegible] ಅವರಿಗೆ ಸಂಶಯ. ಬ್ರಿಟಿಶರು ಅಧಿಕಾರವನ್ನು [illegible] ಅಧಿಕಾರವನ್ನು [illegible] ನಮ್ಮಲ್ಲಿ [illegible] ಸ್ವಾತಂತ್ರ್ಯ ಸಂಪಾದನೆಗಾಗಿ [illegible] ರಾಷ್ಟ್ರಭಾಷೆಯ ಬಗ್ಗೆ [illegible] ಸಂದೇಹ! ಈ ಸಂದೇಹ [illegible] ರಾಷ್ಟ್ರಭಾಷೆಗೆ [illegible] ಅಭಿವೃದ್ಧಿ [illegible] ಯೋಗ್ಯ ರಾಷ್ಟ್ರಭಾಷೆಯನ್ನು [illegible] ಅವಶ್ಯವಾಗಿಲ್ಲವೆ? ಒಮ್ಮೆಲೆ ಎಲ್ಲವನ್ನು [illegible] ಕ್ರಮೇಣ ನಮ್ಮ ರಾಷ್ಟ್ರಭಾಷೆ [illegible] ಸ್ಥಾನವನ್ನು ಪಡೆಯಬೇಕಾದುದು ಅವಶ್ಯವಾಗಿದೆ. ಆಯಾ ಪ್ರಾದೇಶಿಕ ಭಾಷೆಯೇ ಆಯಾ ಪ್ರಾಂತಗಳ ಅಧಿಕೃತ ಭಾಷೆಯಾಗುವಂತೆ [illegible] ಕ್ರಮ ಕೈಕೊಳ್ಳಬೇಕು. ಈ ವಿಷಯದಲ್ಲಿ [illegible] ಎಲ್ಲ ಪ್ರಾಂತಗಳ ಪ್ರತಿನಿಧಿಗಳ [illegible] ಈ ಪರಿಸ್ಥಿತಿಯ [illegible] ದೇಶೀಭಾಷೆಗಳಿಗೆ [illegible] ಸ್ಥಾನವು, ರಾಷ್ಟ್ರಭಾಷೆಯು [illegible] ಬಳಕೆಯಲ್ಲಿ ಬರುವಂತಾಗಬೇಕೆಂದು [illegible] ಸುತ್ತೇವೆ.

ಪ್ರಾಂತೀಯ ಯೋಜನೆಗಳು

ಪರಕೀಯ ಸರಕಾರವು ಹಿಂದುಸ್ಥಾನದ ಸಾರ್ವಾಂಗಿಕ ಅಭಿವೃದ್ಧಿಗೆ ಅನುಕೂಲವಾಗುವ ರೀತಿಯಲ್ಲಿ ಆಯಾ ಯೋಜನೆಗಳನ್ನು ಸಿದ್ಧ ಮಾಡದೆ ತಮ್ಮ ಸಾಮ್ರಾಜ್ಯಾಭಿವೃದ್ಧಿಗೆ ಬೊಕ್ಕಸ ತುಂಬುವುದಕ್ಕೆ ಸಹಾಯಕವಾಗುವ ರೀತಿಯಲ್ಲಿ ಎಲ್ಲವನ್ನು ಅಣಿಮಾಡಿದರೆಂದು ಸೂಕ್ಷ್ಮವಾಗಿ ಎಲ್ಲವನ್ನು ವಿಚಾರಿಸುವವರಿಗೆ ಕಂಡು ಬರದೆ ಇರದು. ಆದರೀಗ ಪ್ರಜಾಪ್ರತಿನಿಧಿಕ ಸರಕಾರವು ಆಡಳಿತವನ್ನು ವಹಿಸಿಕೊಂಡದ್ದರಿಂದ ರಾಷ್ಟ್ರದ ಅಭಿವೃದ್ಧಿಗೆ ತಕ್ಕುದಾದ ರೀತಿಯಲ್ಲಿ ಆಯಾ ಯೋಜನೆಗಳು ಕೈಕೊಳ್ಳಲ್ಪಡಬೇಕಾಗಿದೆ. ಹಿಂದುಸ್ಥಾನ ಸರಕಾರದ ಉದ್ಯೋಗ ಮಂತ್ರಿಗಳಾದ ಶ್ರೀ [illegible] ಮದ್ರಾಸದಲ್ಲಿ ಆಂಧ್ರ ಮತ್ತು ತಮಿಳನಾಡಿನ [illegible] ಮಂಡಳದವರಿಗೆ ಉತ್ತರ ಕೊಡುತ್ತ ಹಿಂದುಸ್ಥಾನ ಸರಕಾರವು ಬೇರೆಬೇರೆ ಪ್ರಾಂತಗಳಲ್ಲಿ ದೊಡ್ಡ ದೊಡ್ಡ ಯೋಜನೆಗಳನ್ನು ಕಾರ್ಯರೂಪಕ್ಕೆ ತರಲು ವಿದೇಶೀ ಬಂಡವಲವನ್ನು ಸ್ವಾಗತಿಸುವ ವಿಚಾರ ನಡೆಸಿರುವರೆಂದು ಹೇಳಿದರು. ನಮ್ಮ ಕರಾರುಗಳಂತೆ ವಿದೇಶೀ ಬಂಡವಲ ಮತ್ತು ತಜ್ಞರ ಸಹಾಯ ನಮಗೆ ಸಿಕ್ಕರೆ ಅವನ್ನು ಸ್ವಾಗತಿಸುವಲ್ಲಿ ದೋಷವೇನೂ ಇಲ್ಲೆಂದು ಮಂತ್ರಿಗಳು ಹೇಳಿದರು. ತಜ್ಞರ ಸಹಾಯವು ಅವಶ್ಯವೆಂದು ಹೇಳಬಹುದು; ಆದರೆ ನಮ್ಮಲ್ಲಿಯೇ ಬೇಕಾದಷ್ಟು ಕೋಟ್ಯಾಧೀಶರಿರುವಾಗ ಅವರ ಬಂಡವಲಿಗೇ ಹೆಚ್ಚು ಪ್ರೋತ್ಸಾಹ ಕೊಡುವದು ಅವಶ್ಯವಾಗಿದೆ. ಒಂದು ವೇಳೆ ನಮ್ಮಲ್ಲಿ ಸಾಕಷ್ಟು ಬಂಡವಲು ಸಿಕ್ಕದಿದ್ದರೆ ವಿದೇಶೀ ಬಂಡವಲನ್ನು ಸ್ವಾಗತಿಸಬಹುದು. ಏನೇ ಇರಲಿ, ಅನೇಕ ಮಹತ್ವದ ಯೋಜನೆಗಳನ್ನು ಕೈಕೊಳ್ಳಲು ಕೇಂದ್ರ ಸರಕಾರ ಮುನ್ನಡೆಯುತ್ತಿದ್ದು ಅಭಿನಂದನೀಯ. ಜನತೆಯು ಹಿಂದುಸ್ಥಾನದಲ್ಲಿ [illegible] ಮಾಡಿದೆಯೆಂದೂ [illegible] ಪ್ರಪಂಚ [illegible] ಅಭಿವೃದ್ಧಿಗಾಗಿ [illegible] ಯೋಜನೆಯು [illegible] ಆಹಾರ ಪದಾರ್ಥಗಳಿಗಾಗಿ [illegible] ದೇಶಗಳಿಗೆ [illegible] ಯೋಜನೆಗಳನ್ನು [illegible] ಕ್ರಮಪ್ರಾಪ್ತವಾಗಿದೆ. [illegible] ಪರಿಶೀಲನವಾಗುವಂತೆ [illegible] ಮಾನ್ಯ ಮಂತ್ರಿಗಳು ಹೇಳಿರುವರು. [illegible] ಸರಕಾರದ ಧನಸಹಾಯ [illegible] ಸಾರ್ವಾಂಗಿಕ ಅಭಿವೃದ್ಧಿ [illegible] ಸುತ್ತೇವೆ.

ಕನ್ನಡ ಸಾಹಿತ್ಯದ ಪ್ರಗತಿಯ ಒಳನೋಟ

ಕನ್ನಡ ಸಾಹಿತಿಗಳ ಸ್ಥಾನಾಭಾವ— ಇಂದಿನ ಸಾಹಿತ್ಯದ ಜೊಳ್ಳುತನ- ಉತ್ತಮ ವಿಮರ್ಶೆಯ ಅಭಾವ— ಸಾಹಿತಿಗಳ ಕೂಪಮಂಡೂಕತ್ವ—

ಮೇಲಿನ ಅಂಶಗಳನ್ನು ತಾ. ೨೮—೧೨—೪೭ ರಲ್ಲಿ ನಡೆದ ೩೧ನೆಯ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿಯ ಸಾಹಿತ್ಯಗೋಷ್ಠಿಯ ಅಧ್ಯಕ್ಷ ಪೀಠದಿಂದ ಶ್ರೀ ಆರ್. ವಿ. ಜಾಗೀರದಾರರು ವಿವರಿಸಿ ಅವುಗಳ ಪರಿಹಾರೋಪಾಯಗಳನ್ನು ಸೂಚಿಸಿದ್ದಾರೆ. ಈ ಕೆಳಗಿನದು ಅವರ ಪ್ರಸ್ವರೂಪ.

ಸ್ವಾಗತಾಧ್ಯಕ್ಷರೆ, ಗೆಳೆಯರೆ,

ಪ್ರಾರಂಭಕ್ಕೆ ತಮ್ಮೆಲ್ಲರ ಮತ್ತು ನನ್ನಪರವಾಗಿ ಒಂದು ಸ್ಪಷ್ಟೀಕರಣವನ್ನು ಮಾಡುವುದು ಅಗತ್ಯವಾಗಿದೆ.—ಯಾಕೆಂದರೆ ತಾವು ನನ್ನನ್ನು ಅಧ್ಯಕ್ಷನನ್ನಾಗಿ ಆರಿಸಿದ್ದೀರಿ,ಮತ್ತು ನಾನಾದರೂ ಈ ಸಾಹಿತ್ಯ ಗೋಷ್ಠಿಯ ಅಧ್ಯಕ್ಷನಾಗಲು ಒಪ್ಪಿದ್ದೇನೆ. ಯಾವುದೋ ಒಂದು ತರದ ಸ್ನೇಹ ಇಲ್ಲವೆ ಒಂದು ತರದ ಅನಿವಾರ್ಯತೆ ತಮ್ಮನ್ನು, ಇಲ್ಲಿ ನನ್ನನ್ನು ಕುಳ್ಳಿರಿಸುವಂತೆ ಮಾಡಿದೆ. ನಾನಾದರೂ ಒಂದು ತರದ ಸ್ನೇಹ ಇಲ್ಲವೆ ಒಂದುತರದ ಅನಿವಾರ್ಯತೆ ಇವುಗಳಿಂದ ಪ್ರೇರಿತನಾಗಿಯೆ ನನ್ನ ವಿಚಾರಗಳನ್ನು ತಮ್ಮೆದುರು ಇಡಬೇಕೆಂದಿದ್ದೇನೆ. ಹಿರಿಯರು ಕ್ಷಮಿಸಲಿ, ಕಿರಿಯರು ಕೆರಳದಿರಲಿ, ಮಿಕ್ಕವರು ಮರೆಯಲಿ.

ಗೆಳೆಯರೆ, ಇಂದು "ಸ್ವತಂತ್ರ ಹಿಂದುಸ್ಥಾನದಲ್ಲಿ ಹೇಗಿರ ಕಟಿಂಗ ಸಲೂನಗಳ ಸ್ಥಾನ" ಎಂದು ಮೊದಲ್ಗೊಂಡು "ಸ್ವತಂತ್ರ ಹಿಂದುಸ್ಥಾನದಲ್ಲಿ ಕ್ರೈಸ್ತಾನಿಕರ ಸ್ಥಾನ" ಎಂಬುದರ ವರೆಗೆ ಪ್ರತಿಯೊಬ್ಬನೂ ದೇಶದ ಸ್ವಾತಂತ್ರ್ಯದಲ್ಲಿ ತನ್ನಸ್ಥಾನವನ್ನು ಹುಡುಕಿ ಹೊಂದಿಸಿಕೊಂಡು ನೋಡುತ್ತಲಿದ್ದಾನೆ. ಅದೇಮೇರೆಗೆ ನಾನಾದರೂ "ಸ್ವತಂತ್ರ ಹಿಂದುಸ್ಥಾನದಲ್ಲಿ ಕನ್ನಡ ಸಾಹಿತಿಗಳ ಸ್ಥಾನ" ಎಂಬ ನಾಂದೀಶ್ಲೋಕದಿಂದಲೆ ನನ್ನ ಅಧ್ಯಕ್ಷ ಭಾಷಣದ ನಾಟಕವನ್ನು ಪ್ರಾರಂಭಿಸಬಹುದಾಗಿತ್ತು. ಆದರೆ ಆ ತರಹದ ಪ್ರಾರಂಭವನ್ನು ತಡೆಯಲು ಯತ್ನಿಸುತ್ತಿದ್ದೇನೆ. ಈ ಯತ್ನಕ್ಕೆ ಎರಡು ಕಾರಣಗಳಿವೆ, ಮೊದಲು ಅವನ್ನು ತಮ್ಮೆದುರಿನಲ್ಲಿ ಚರ್ಚಿಸುತ್ತೇನೆ.

ಮೊದಲ ಕಾರಣವೆಂದರೆ, ಸ್ವತಂತ್ರವೆ ಆಗಲಿ- ಪರತಂತ್ರವೆ ಆಗಲಿ- ಹಿಂದುಸ್ಥಾನದಲ್ಲಿ ಕನ್ನಡ ಸಾಹಿತಿಗಳಿಗೆ ಯಾವ ಸ್ಥಾನವಿದೆ? ಇಂದರೆ- ಸ್ಥಾನವಿದೆ ಎಂದು ತಾತ್ಪೂರ್ತಿಕವಾಗಿ ಒಪ್ಪಿಕೊಂಡಾಗ? ಈ ಪ್ರಶ್ನೆಗೆ ಉತ್ತರವನ್ನು ಕೊಡುವುದು ಎಷ್ಟು ಸುಲಭವೋ, ಅಷ್ಟೆ ಅದನ್ನು ಕೇಳಿಕೊಳ್ಳುವುದು ಅಜ್ಞಾನ್ಯವ ಎಂದು ನನ್ನ ತಿಳಿವಳಿಕೆ. (೧) ಆಗಾಗ ಕೆಲವು ಇಂಗ್ಲಿಶ ಪತ್ರಿಕೆಗಳಲ್ಲಿ ಕನ್ನಡದ ಬಗ್ಗೆ ಬರುವ ಕೆಲ ಲೇಖಗಳು (೨) ಪಿ. ಇ. ಎನ್. ದಂತಹ ಸಂಸ್ಥೆಗೆ ಇರಬಹುದಾದ ೧೦-೨೦ ಕರ್ನಾಟಕದ ಸದಸ್ಯರು—ಈ ಎರಡು ಸಂಗತಿಗಳನ್ನು ಹೊರತುಪಡಿಸಿದರೆ ಮಿಕ್ಕ ದೃಷ್ಟಿಯಲ್ಲಿ ಹಿಂದುಸ್ಥಾನಕ್ಕೂ ಇಂದಿನ ಕನ್ನಡ ಸಾಹಿತ್ಯಕ್ಕೂ ಯಾವ ಸಂಬಂಧವೂ ಇಲ್ಲ ಎಂದು ಹೇಳಬಹುದು.ಸಾಹಿತ್ಯವು ಒಂದು ದೇಶದ ಉನ್ನತಿಯ ಮತ್ತು ಸಂಸ್ಕೃತಿಯ ರಾಜಪ್ರತಿನಿಧಿ (Ambassador) ಎಂದುಹೇಳುವರೂಢಿಯುಂಟು ಆ ಮಾತನ್ನು ಇಂದಿನ ನಮ್ಮ ಸಾಹಿತ್ಯಕ್ಕೆ ಅನ್ವಯಿಸುವದಾದರೆ ಹಿಂದುಸ್ಥಾನದಲ್ಲಿ ಇದುವರೆಗೆ ನಮ್ಮವು ನಮ್ಮಪ್ರತಿನಿಧಿಯನ್ನೇ ನಿಯಮಿಸಿಲ್ಲ ಎಂದು ತಿಳಿಯಬಹುದು.

ಈ ಪರಿಸ್ಥಿತಿಯು ನನ್ನ ದೃಷ್ಟಿಯಿಂದ ಮಹತ್ವದ್ದಾಗಿದೆ. ಇಂದಿನ ಕನ್ನಡದ ಪ್ರಚಾರವಾಗಲಿ ಪರಿಚಯವಾಗಲಿ ಹಿಂದುಸ್ಥಾನದಲ್ಲಿ ಸಾಕಷ್ಟು ಮಟ್ಟಿಗೆ ಸರಿಯಾಗಿ ಆಗಿಲ್ಲ ಎಂಬುದಕ್ಕೆ ಕಾರಣವಿರಬಹುದು? ತರ್ಕದಿಂದ ತೂಗಿ ನೋಡಿದರೆ ಎರಡು ಕಾರಣಗಳನ್ನು ಊಹಿಸಬಹುದಾಗಿದೆ. ಒಂದು, ನಮ್ಮ ಇಂದಿನ ಸಾಹಿತ್ಯವು ಮಿಕ್ಕ ಭಾರತೀಯ ಸಾಹಿತ್ಯಗಳೊಡನೆ ಹೋಲಿಸಿದಾಗ ಅಷ್ಟೊಂದು ಯೋಗ್ಯತೆಯದೆನ್ನಿಸಲಿಕ್ಕಿಲ್ಲ. ಎರಡು, ಪ್ರಚಾರದ ನಮ್ಮ ಸಂಘಟನೆಯಲ್ಲಿ ಸಾಲಿದ್ದ ಮಂತಿಕೆ ಇರಲಿಲ್ಲ.

ಈ ಎರಡೂ ಕಾರಣಗಳನ್ನು ತುಸು ವಿವರವಾಗಿ ತಿಳಿಯಬಹುದು. ಇಂದಿನ ನಮ್ಮ ಸಾಹಿತ್ಯವನ್ನು ಮೇಲ್ನೋಟದಿಂದ ನೋಡಿದರೆ ಅದರ ಬೆಳವಣಿಗೆ ವಿಶಿಷ್ಟವಾಗಿದೆ. ಗಾತ್ರ ತಕ್ಕಮಟ್ಟಿಗೆ ವಿಪುಲವೂ ಆಗಿದೆ ಎಂದು ಧೈರ್ಯವಾಗಿ ಹೇಳಬಹುದು. ಆದರೆ ಇದೆಲ್ಲ ಸ್ಥೂಲರೂಪವಾಗಿ ನೋಡಿದಾಗ ಸೂಕ್ಷ್ಮವಾಗಿ ನೋಡಿದಲ್ಲಿ ನಮ್ಮ ಸಾಹಿತ್ಯದಲ್ಲಿ ಯಾವುದು ಇಲ್ಲ, ಎಷ್ಟರಮಟ್ಟಿಗೆ ಇಲ್ಲ ಎಂಬುದು ಸ್ಪಷ್ಟವಾಗುವುದು. ಕವಿತೆಗಳವ ನಮ್ಮಲ್ಲಿ ಮಹಾಕಾವ್ಯ ಇಲ್ಲ, ಇಂದಿನ ಕಾಲದಲ್ಲಿ ಮಹಾಕಾವ್ಯದ ರಚನೆ ಶಕ್ಯವಿದೆಯೆ ಇಲ್ಲವೆ ಎಂಬ ಮಾತು ಅಪ್ರಸ್ತುತ. ಆದರೆ ಮಹಾಕಾವ್ಯವನ್ನು ರಚಿಸಬಲ್ಲ ವಿಶಾಲ ಕಲ್ಪನಾತ್ಮಕ ನಿರೂಪಣಾತ್ಮಕ ಪ್ರತಿಭೆಯ ಕವಿ ನಮ್ಮಲ್ಲಿಲ್ಲ ಎಂಬುದು ಮಾತ್ರ ಅನುಭವ ಸತ್ಯ. ಪಟ್ಟಿ ತಯಾರಾಗುವಷ್ಟು ಪುಸ್ತಕಗಳು ಪ್ರಕಟವಾದುದುನಿಜ. ಆದರೆ ಅದು ಪ್ರಗತಿಯ ಚಿಹ್ನ ಎಂದು ನಾನು ಹೇಳಲಾರೆ. ಒಂದು, ಇಪ್ಪತ್ತು ವರ್ಷಗಳ ಮುಂಚಿನಿಂದ ಬರೆಯುತ್ತಿದ್ದವರೆ ಇಂದು ಬರೆಯುತ್ತಿದ್ದಾರೆ. ಎರಡು, ಅವರಲ್ಲಿ ಹೆಚ್ಚಾಗಿ ಇಪ್ಪತ್ತು ವರ್ಷಗಳ ಮುಂಚೆ ಬರೆದಂತೆ ಮತ್ತು ಬರೆದದ್ದನ್ನೆ ಬರೆಯುತ್ತಲಿದ್ದಾರೆ. ಮೂರು, ಹೊಸತಾಗಿ ಬರೆವವರೆಲ್ಲ ಹೆಚ್ಚಾಗಿ ಮಾಸಪತ್ರಿಕೆಗಳ ಸಾಹಿತಿಗಳು; ಇವರು ಬರೆದದ್ದನ್ನು ಪ್ರಕಟಿಸುವದಕ್ಕಿಂತ ಮಾಸಪತ್ರಿಕೆ ನಡೆಸಲು ಇವರುಬರೆಯುತ್ತಿರುವಂತೆ ಈ ಮಾಸಸಾಹಿತ್ಯವಿದೆ. ಇಂತಹ ಅ-ಪ್ರಗತಿಗೆ ಮುಖ್ಯವಾದ ಕಾರಣಒಂದಿದೆ.ಅದೆಂದರೆ, ನಮ್ಮಲ್ಲಿ ವಿಮರ್ಶೆಯ ಅಭಾವ.ಹೊಸಸಾಹಿತ್ಯವಿಲ್ಲದ್ದಕ್ಕಾಗಿ ವಿಮರ್ಶೆ ಇಲ್ಲ! ವಿಮರ್ಶೆ ಇಲ್ಲದ್ದಕ್ಕಾಗಿ ಹೊಸ ಸಾಹಿತ್ಯನಿರ್ಮಾಣವಿಲ್ಲ. ಈ ಮಾತನ್ನು ನಾನು ಹೆಚ್ಚಾಗಿ ಹೇಳಬೇಕಾಗಿಲ್ಲ. ಪ್ರತಿತಿಂಗಳು ಪ್ರಕಟವಾಗುವ ಮಿಕ್ಕ ಸಾಹಿತ್ಯಗಳಲ್ಲಿಯ ವಿಮರ್ಶೆಯೊಂದಿಗೆ ನಮ್ಮಲ್ಲಿಯ ವಿಮರ್ಶೆಯನ್ನು ಹೋಲಿಸಿನೋಡಿದರೆ ಸಾಕು. ವಿಮರ್ಶೆ ಎಂಬುದು ಒಂದು ತತ್ವಜ್ಞಾನವಾಗಿದೆ,ಒಂದು ಕಲೆಯಾಗಿದೆ. ಒಂದು ಶಾಸ್ತ್ರವಾಗಿದೆ.ಎಂಬುದರ ಕಲ್ಪನೆ ನಮ್ಮ ಸಾಹಿತಿಗಳಿಗೆ ಕೂಡ ಇಲ್ಲ. ಒಬ್ಬೊಬ್ಬ ಸಾಹಿತಿ ಒಂದೊಂದು ಮತವನ್ನು ಸ್ಥಾಪಿಸಿಕೊಂಡುದಕ್ಕಾಗಿ ತರುಣರಿಗೆ ಆದರ್ಶವೂ ಇಲ್ಲ, ಸ್ಫೂರ್ತಿ ಸ್ವಾತಂತ್ರ್ಯವೂ ಇಲ್ಲ! ಇನ್ನೊಬ್ಬರಿಗೆ ತಿಳಿಯುವಂತೆ ಗೀಚುವ ಸ್ವಾತಂತ್ರ್ಯ ತನಗಿದೆ ಎಂದು ವಾದಿಸುವ ಸಾಹಿತಿಯು ತನಗೆ ತಿಳಿದಿಲ್ಲ ಎಂದು ಹೇಳಲು ಓದುಗನಿಗೂ ಸ್ವಾತಂತ್ರ್ಯವಿದೆ ಎಂದು ಒಪ್ಪಲೇಬೇಕು. ವ್ಯಾಪ್ತಿಯಲ್ಲಿ ಸಾಹಿತ್ಯಕ್ಕೆ ತಳಹದಿ ವಿಶಾಲ ಹೃದಯ; ವ್ಯವಹಾರದಲ್ಲಿ ಸಾಹಿತಿಯ ತಳಹದಿ ಸ್ವಾರ್ಥಸಂಕುಚಿತ ಸ್ವಭಾವ! ಇದನ್ನು ಸುಧಾರಿಸುವ ಹೊಣೆ ವಿಮರ್ಶಕನದು. ಇಂದು ಸಾಹಿತ್ಯವನ್ನು,ಅದರಕಲೆಯನ್ನು ತಜ್ಞತೆಯಿಂದ ತಿಳಿದುಕೊಂಡು ಅಜ್ಞರಿಗೆ ತಿಳುಹಿಸಿ ಕೊಡುವ ವಿಮರ್ಶೆಬೇಕು ನಮಗೆ. ಅಂತಹ ವಿಮರ್ಶೆ ನಮ್ಮಲ್ಲಿ ಇದುವರೆಗೆ ಇದ್ದಿತಾಗಿದ್ದರೆ ಇಂದು ನಮ್ಮ ಸಾಹಿತ್ಯವು ಪ್ರಾಂತದ ಹೊರಗೆ ಕೂಡ ತಲೆ ಎತ್ತಿ ನಿಲ್ಲಬಹುದಾಗಿತ್ತು.

ಮೇಲಿನ ಮಾತುಗಳಿಗಾಗಿ ಇಂದು ಕನ್ನಡದಲ್ಲಿ ಪ್ರಕಟವಾದ ಗ್ರಂಥಗಳ ಪಟ್ಟಿಯನ್ನು ಕೊಡಲು ನನಗೆ ಅಭಿಮಾನವೂ ಇಲ್ಲ.ಸಮಾಧಾನವೂ ಇಲ್ಲ. ಪರಸಾಹಿತ್ಯಗಳ ಸಂಪರ್ಕ, ಪರಪ್ರಾಂತಗಳಲ್ಲಿ ನಮ್ಮದರ ಪ್ರಚಾರ ಇವು ಇಲ್ಲದವರೆಗೆ ನಮ್ಮದು ಕೂಪಮಂಡೂಕವೃತ್ತಿಯ ದೃಷ್ಟಿಯಾಗಿ, ಸೃಷ್ಟಿಯಾಗಿ ಉಳಿವುದರಲ್ಲಿ ಸಂದೇಹವೇ ಇಲ್ಲ. ಆ ಕೂಪಮಂಡೂಕ ವೃತ್ತಿ ಬೆಳೆಯುತ್ತಿರುವುದೆಂದು ಇಂದು ನಮ್ಮ ಸಾಹಿತ್ಯದ ಸರ್ವಸಾಮಾನ್ಯಮಟ್ಟ ಇಳಿಯುತ್ತಿದೆ ಏನೊ! ನಮ್ಮಲ್ಲಿ ಖಂಡಿತವಾಗಿ ಬೆಳೆಯುತ್ತಿರುವುದು "ಸಾಹಿತಿಗಳ ಸಂಖ್ಯೆ, ಸಾಹಿತ್ಯವಲ್ಲ. ಇದೇ ರೀತಿ ನಮ್ಮ ಅನಾಸ್ಥೆ ಇಲ್ಲವೆ ಅಲಕ್ಷ್ಯ ಬೆಳೆದರೆ ಕೆಲಕಾಲದಲ್ಲಿಯೆ ಕನ್ನಡದಲ್ಲಿ ಓದುವವರಿಗಿಂತ ಬರೆಯುವವರ ಸಂಖ್ಯೆಯೆ ದೊಡ್ಡದಾಗಬಹುದಾಗಿದೆ. ಸಾಹಿತ್ಯಬೆಳೆದ ಒಂದು ಹೊರ ಚಿಹ್ನೆ ಓದುಗರಿಂದು ಕಂಡುಹಿಡಿಯಬಹುದಾಗಿದೆ. ಕಳೆದ ೨೫ ವರ್ಷಗಳ ಕರುನಾಡಿನಲ್ಲೂ ಓದುಗರಿಗೆ ಎಲ್ಲ ಮಾದರಿಯ ಎಲ್ಲ ಶೈಲಿಯ ಕನ್ನಡ ಗ್ರಂಥಗಳು ಇನ್ನೂ ತಿಳಿಯುವುದಿಲ್ಲವೆಂದರೆ ಅದಾವ ಪ್ರಗತಿ ಸಾಹಿತ್ಯದಿಂದ ಸಾಧಿಸಿದೆ ಎನ್ನಬಹುದು? ಸಾಹಿತ್ಯವು "ಪ್ರಗತಿಶೀಲ"ವಾಗಬೇಕೆಂದು ಸಾಹಿತಿಗಳೇ ಒಬ್ಬರೊಬ್ಬರ ಮೇಲೆ ಕೂಗಾಟವನ್ನೆಬ್ಬಿಸಿದ್ದಾರಲ್ಲದೆ ಓದುಗರಿಗೂ ಪ್ರಗತಿಶೀಲತೆಗೂ ಸಂಬಂಧವಿದೆ, ಓದುಗರೂ ಪ್ರಗತಿಶೀಲರಾದಾಗ ಸಾಹಿತ್ಯ ಮುಂದುವರಿದಂತಾಯಿತು ಎಂಬ ವಿಚಾರ ಬರುವುದಿಲ್ಲ.



ಪ್ರೊ. ಆರ್. ವಿ. ಜಾಗೀರದಾರ

ವಿಮರ್ಶೆಯ ಮತ್ತು ವಿವೇಕದ ಅಭಾವಕ್ಕೆ ನನ್ನದೃಷ್ಟಿಯಿಂದ ಇನ್ನೂ ಒಂದು ಕಾರಣವಿದೆ. ರಾಜಕೀಯದಲ್ಲಿ ಇಂಗ್ಲೀಷರಿಂದ ನಾವು ಸ್ವತಂತ್ರರಾದೆವು, ನಿಜ. ಆದರೆ ಸಾಹಿತ್ಯದಲ್ಲಿ ಮಾತ್ರ ಇನ್ನೂ ಪರದಾಸ್ಯಬಿಗಿಯಾಗಿ ಉಳಿದಿದೆ. ಎಂದೇ ಹೇಳಬೇಕಾಗುವದು. ಇಂದು ಕನ್ನಡದಲ್ಲಿ ಬರೆಯುವವರು ಹೆಚ್ಚಾಗಿ ಇಂಗ್ಲೀಶದ ಪರಿಚಯವಿದ್ದವರು,ಅದರ ಪ್ರಭಾವಕ್ಕೆ ಒಳಗಾದವರು.ಸಮಾಜದಲ್ಲಿ ೧೦೦ಕ್ಕೆ ೮ ರಷ್ಟು ಈ ಜನರು. ಮಿಕ್ಕ ೯೨ ಜನರ ಪರಿಚಯ ಇವರಿಗೆ ಕಡಿಮೆ ಇವರ ಆದರ್ಶ ಇಂಗ್ಲೀಶ ಸಾಹಿತ್ಯದಿಂದ ಬಂದುದು. ಇವರ ವಿಚಾರ ಇಂಗ್ಲೀಶದ ಮುಖಾಂತರವಾಗಿ ರೂಪಗೊಂಡವು, ಇವರ ವಿಮರ್ಶೆ ಇಂಗ್ಲೀಶ ಪಂಡಿತರ ತತ್ವಗಳ ಪುನರುಚ್ಚಾರ. ಈ ಪರಿಸ್ಥಿತಿ ಸಾಹಿತ್ಯದ ಬೆಳವಣಿಗೆಗೆ ಪ್ರತಿಬಂಧಕವಾದ್ದರಲ್ಲಿ ಆಶ್ಚರ್ಯವೇನು? ಪ್ರಗತಿಶೀಲ ಸಾಹಿತ್ಯ, ಸಮಾಜವಾದದ ಸಾಹಿತ್ಯ,ಕಲೆಗಾಗಿ ಕಲೆ ಎಂಬ ಸಾಹಿತ್ಯ ಇವೆಲ್ಲ ವಾಗ್ಯುದ್ಧಗಳು ೧೦೦ ಕ್ಕೆ ೮ ಜನರಲ್ಲಿ! ರಶಿಯಾದ ಕತೆಗಳನ್ನು ಕನ್ನಡದಲ್ಲಿ ಪ್ರಕಟಿಸಿದರೆ ಪ್ರಗತಿಶೀಲತೆ ಅಲ್ಲ! ಔದ್ಯೋಗೀಕರಣದಿಂದ ದುಡಿಮೆಗಾರರ ರಕ್ತಶೋಷಕನಾಗುತ್ತಿದೆ.ಎಂದರೆ ಸಮಾಜವಾದದ ಸಾಹಿತ್ಯವಲ್ಲ. "ಬೋ-ಮಗನೆ ಸೂ-ಮಗನೆ" ಎಂದು ಅಚ್ಚುಮಾಡಿಸಿದರೆ ಕತೆಗಾರಿಕೆಯಲ್ಲ.ಆದರೆಇದನ್ನು ಹೇಳುವ ವಿಮರ್ಶಕನೆಲ್ಲಿದ್ದಾನೆ? ನಮ್ಮವರ ಜೀವನವನ್ನು ಚಿತ್ರಿಸುವುದು ನಮ್ಮಸಾಹಿತ್ಯ ಎಂಬ ಸುಲಭವಾದ ಮಾತು ಇಂದು ದೊಡ್ಡ ತತ್ತ್ವವಾದಂತಾಗಿದೆ.ಅದರಪ್ರಚಾರವಾಗ ಬೇಕಾಗಿದೆ ಇಂಗ್ಲೀಶ ಸಾಹಿತ್ಯದ ಸಂಪರ್ಕ ಬೇಡವೆಂದು ನಾನು ಹೇಳುವುದಿಲ್ಲ. ಆದರೆ ಇಂದು ನಮ್ಮ ಹೃದಯ ಮತ್ತು ಬುದ್ಧಿಗಳೆ ಇಂಗ್ಲಿಶದ ಜಾಲದಲ್ಲಿ ಸಿಕ್ಕಿವೆ. ಅದು ಅನಿಷ್ಟ ಎಂದು ನಾನು ಹೇಳುವುದು. ನಮ್ಮ ಸಾಹಿತ್ಯದ ಮಟ್ಟ ಮೇಲಿನದಾಗ-ಬೇಕೆಂದರೆ ನಮ್ಮ ಇಂದಿನ ಸಾಹಿತ್ಯವು ಮಿಕ್ಕ ಸಾಹಿತ್ಯಗಳೊಡನೆ ಭುಜಕ್ಕೆ ಭುಜ ತಟ್ಟಿ ಎದೆಸೆಟೆಯಿಸಿ ನಿಲ್ಲುವಂತಾಗಬೇಕಾದರೆ-ನಮ್ಮ ಸಾಹಿತ್ಯ ನಮ್ಮದೇ ಆಗಬೇಕು. ಕನ್ನಡ ವಾಕ್ಯಗಳನ್ನೇ ಇಂಗ್ಲೀಶದಲ್ಲಿ ಭಾಷಾಂತರಿಸಿಕೊಂಡಾಗ ಅವುಗಳ ಅರ್ಥವಾಗುವಂತಹ ಸಾಹಿತ್ಯಪಾರತಂತ್ರ್ಯ ಕಳೆಯಬೇಕು. ಕನ್ನಡ ಕನ್ನಡ ಶಬ್ದಕೋಶ ಅಗತ್ಯವೆನಿಸಬೇಕು. ಇಂಗ್ಲಿಷ ಕನ್ನಡದ್ದಲ್ಲ.

ನಮ್ಮ ಇಂದಿನ ಸಾಹಿತ್ಯ ಪ್ರಪಂಚದಲ್ಲಿ ನಾವು ಪ್ರಗತಿಹೊಂದಬೇಕಾದರೆ ಮೂರು ಮಾತುಗಳು ನನ್ನದೃಷ್ಟಿಯಿಂದ ಅಗತ್ಯ ಇವೆ.

(೧) ಸಾಹಿತ್ಯ ಆಸ್ಥಾನದ ಏರ್ಪಾಡು:(Academy Of Kannada Literature) ಈ ಆಸ್ಥಾನವು ಇಲ್ಲವೆ ಸಾಹಿತ್ಯದ ಪಾರ್ಲಿಮೆಂಟು, ವರ್ಷದಲ್ಲಿ ಪ್ರಕಟವಾದ ಗ್ರಂಥದಲ್ಲಿ ಅತ್ಯುತ್ತಮವಾದುವುಗಳನ್ನು ಆಯ್ದುಕೊಳ್ಳುವುದು. ಹೀಗೆ ಹೇಳುವಾಗ ಇಂದಿನ ಪಾರಿತೋಷಕ ಪದ್ಧತಿಯನ್ನು ನಾನು ಮರೆತಿಲ್ಲ. ಅದು ಬೇಡ ಎಂದೇ ಸಾಹಿತ್ಯ ಆಸ್ಥಾನವನ್ನು ಸೂಚಿಸುತ್ತಲಿದ್ದೇನೆ. ಗ್ರಂಥದ ಇಂತಿಷ್ಟು ಪ್ರತಿ,ಜೊತೆಗೆ ಒಂದು ಅಧಿಕೃತ ನಮೂನೆಯ ಅರ್ಜಿ,ಕೊನೆಗೆ ಹತ್ತಾರು ರೂಪಾಯಿಯ ಪಾರಿತೋಷಕ—ಇದು ಸಾಹಿತಿಗೂ ಗೌರವವಲ್ಲ. ಉತ್ತಮ ಸಾಹಿತ್ಯಕ್ಕೂ ಪೋಷಕವಲ್ಲ. ಅದ್ದರಿಂದ ಪ್ರಕಟವಾದ ಎಲ್ಲ ಪುಸ್ತಕಗಳನ್ನೂ ಕಾಲಕಾಲಕ್ಕೆ ಪರಿಶೀಲಿಸಿ ವರ್ಷದಕೊನೆಗೆ ಉತ್ತಮವಾದವುಗಳನ್ನು ತೋರಿಸುವ ಕೆಲಸ ಈ ಆಸ್ಥಾನದ್ದು ಇಷ್ಟಗೇ ಆಸ್ಥಾನದ ಕೆಲಸ ಮುಗಿಯಲಿಲ್ಲ ಹೀಗೆ ಉತ್ತಮವಾದವುಗಳನ್ನು ಅನ್ಯಭಾಷೆಯಲ್ಲಿ ಪರಿವರ್ತಿಸುವದೂ ಅನ್ಯ ಪ್ರಾಂತಗಳಲ್ಲಿ ಪ್ರಚಾರ ಮಾಡುವುದೂ ಮುಖ್ಯವಾಗಿದೆ.

(೨) ಇಲ್ಲಿ ನಾನು ಎರಡನೆಯ ಸಂಗತಿಯನ್ನು ಹೇಳುತ್ತೇನೆ. ಅದೆಂದರೆ ಇಂಗ್ಲೀಷ ಅಥವಾ ಹಿಂದಿಯಲ್ಲಿ ಅಖಿಲ ಕರ್ನಾಟಕಕ್ಕೆ ಪ್ರಾತಿನಿಧಿಕವಾಗಿ ಒಂದು ನಿಯತಕಾಲಿಕೆಯನು ನಾವು ಪ್ರಕಟಿಸಲೇಬೇಕು. ಹರಿದು ಹಂಚಿ ಹೋದ ಕರ್ನಾಟಕದ ಸಾಹಿತಿಗಳಲ್ಲಿ ಏಕಾತ್ಮೀಯತೆ ಮತ್ತು ಪರಪ್ರಾಂತಗಳಲ್ಲಿ ಕನ್ನಡದ ಏಕರೂಪತೆ—ಇವು ಮೂಡಬೇಕಾದರೆ ಇಂತಹದೊಂದು ಪ್ರಕಟನೆ ಅಗತ್ಯ.

(೩) ಮೂರನೆಯದಾಗಿ, ನಮ್ಮಲ್ಲಿಯ ಪ್ರಕಾಶಕರಿಗೆ ಮತ್ತು ಗ್ರಂಥಮಾಲೆಯ ಸಂಚಾಲಕರಿಗೆ ನನ್ನದೊಂದು ಬೇಡಿಕೆ ಇದೆ. ಸಾಹಿತ್ಯಕ್ಕಿಂತಲೂ ವ್ಯವಹಾರವು ಅವರಿಗೆ ಮುಖ್ಯ ಎಂದರೆ ಯಾರೂ ಅನ್ಯಥಾ ಭಾವಿಸಬೇಕಾಗಿಲ್ಲ ಆದರೆ ಸ್ಥಾನಿಕ ಇಲ್ಲವೆ ಪ್ರಾದೇಶಿಕವಾಗಿ ಈ ಪ್ರಕಾಶಕರು ಒಂದು ತಜ್ಞಸಮಿತಿಯನ್ನು ಏರ್ಪಡಿಸಿಕೊಳ್ಳಬೇಕು. ಸಾಹಿತ್ಯ ದೃಷ್ಟಿಯಿಂದ ಒಂದು ಪುಸ್ತಕ ಉತ್ತಮವೆನಿಸಿದಾಗ "ಇದು ತಜ್ಞರ ಮೆಚ್ಚುಗೆ" ಎಂಬ ಮಾತನ್ನು ಪ್ರಕಾಶಕರು ಪುಸ್ತಕದಮೇಲೆ ಕಾಣಿಸಬಹುದಲ್ಲ? ಈ ರೀತಿ ಬೇರೆ ಸಾಹಿತ್ಯಗಳಲ್ಲಿ ನಡೆದಿದೆ ಪ್ರಯೋಗ; ಇದನ್ನೇನು ನಾನು ಹೊಸತಾಗಿ ಹೇಳುತ್ತಿಲ್ಲ. ಆದರೆ ಇಂದಿನ ನಮ್ಮ ಸಂದರ್ಭದಲ್ಲಿ ಈ ಪ್ರಯೋಗ ಕೆಲಕಾಲದ ವರೆಗಾದರೂ ಅಗತ್ಯ ಎಂದು ನನ್ನ ಅಭಿಪ್ರಾಯವಾದ್ದರಿಂದ ಆ ವಿಷಯವನ್ನು ಇಲ್ಲಿ ಎತ್ತಿದ್ದೇನೆ.

ಸಾಹಿತ್ಯದ 'ಪಾರ್ಲಿಮೆಂಟು' ಎಂದು ಬುದ್ಧಿಪೂರ್ವಕವಾಗಿಯೆ ನಾನು ಪದಪ್ರಯೋಗವನ್ನಿಟ್ಟಿದ್ದೇನೆ. ಸಾಹಿತ್ಯಕ್ಕೆ ಪಾರ್ಲಿಮೆಂಟು ಬೇಕು; ಸಾಹಿತಿಯ ಅಧಿಕಾರ ರಕ್ಷಣೆಗೆ, ಸಾಹಿತ್ಯ ಸಮಾಜದ ಆರೋಗ್ಯಕರ ಬೆಳವಣಿಗೆಗೆ ಸರ್ವಸಾಮಾನ್ಯವಾದ ಕಾಯಿದೆ-ಕಾನೂನುಗಳ ಅಗತ್ಯವಿದೆ. ಇಂದು ಸ್ವತಂತ್ರವಾದ ನಮ್ಮ ದೇಶದಲ್ಲಿ ಸಾಹಿತಿಗೆ ಸಂಪೂರ್ಣ ಮತ್ತು ಸ್ವಭಾವಸಿದ್ಧ ಸ್ವಾತಂತ್ರ್ಯವಿಲ್ಲ. ಸಭೆಯ ಭಾಷಣದಲ್ಲಿ ಆಡುವ ಮಾತುಗಳನ್ನು ಬರೆಹದಲ್ಲಿ ಕಾಣಿಸುವ ಸ್ವಾತಂತ್ರ್ಯವಿಲ್ಲ. ಎಷ್ಟೋಸಲ ನಾಲ್ಕು ಜನರೆದುರು ಹೇಳುವ ಅಭಿಪ್ರಾಯಗಳನ್ನು ಪುಸ್ತಕರೂಪವಾಗಿ ಹೇಳಿದರೆ ಅಪರಾಧವೆನ್ನಿಸಬಹುದಾಗಿದೆ. ಭಾಷಣಕಾರನಿಗೆ ಲೈಸೆನ್ಸದ ಅಗತ್ಯವಿಲ್ಲ; ನಾಟಕದ ಪ್ರದರ್ಶನಕ್ಕೆ ಮಾತ್ರ ಲೈಸೆನ್ಸ ಬೇಕು! ಒಂದು ಚಿಲ್ಲರೆ ಪೆನ್ಸಿಲ್ ಕದ್ದರೆ ಶಿಕ್ಷೆಯಾಗಬಹುದು, ಆದರೆ ನನ್ನ ನಾಟಕಗಳಲ್ಲಿಯ ಒಂದು ವಿಚಾರಪೂರ್ಣ ವಾಕ್ಯವನ್ನು ಕದ್ದರೆ ಅದು ಸಾಮಾಜಿಕ (cognizable) ಅಪರಾಧವಲ್ಲ! ಈ ಪರಿಸ್ಥಿತಿಯನ್ನು ಸಾಹಿತಿಗಳು ಸುಧಾರಿಸಿಕೊಳ್ಳಲೇಬೇಕು. ಅವರಂತೆಯೆ, ಆತ್ಮಶುದ್ಧಿಗಾಗಿಯೂ ಕಾನೂನುಬೇಕು. ಕೋರ್ಟಿನೊಳಗಿನ ಕಾಪಿಇಸ್ಟನಿಂದ ಕಲ್ಪನಾಶಾಲಿ ಕವಿಯವರೆಗೂ ಇಂದು ಎಲ್ಲರೂ ಸಾಹಿತಿಗಳೆ! ಕಾಂಗ್ರೆಸದ ಅನುಯಾಯಿಯು ನಾಲ್ಕಾರು ಭಾಷಣಮಾಡಿದರೆ ಸಾಹಿತಿ; ಕಮ್ಯುನಿಷ್ಟನು ಪ್ರತಿಭಾಸಂಪನ್ನನಾದರೂ ಸಾಹಿತಿಯಲ್ಲ! ಪಂಪನು ನನ್ನ ಜಾತಿಯವನಿದ್ದರೆ ಮಾತ್ರ ನನಗವನು ಉತ್ತಮ ಕವಿ! ಸಾಹಿತ್ಯ ಸೃಷ್ಟಿಯ ತಳಹದಿಯಾದ ಶುದ್ಧ ಹೃದಯವೆತ್ತ, ಇಂದಿನ ಈ ಮಡಿವೈಲಿಗೆಯ ಮೂರ್ಖತನವೆತ್ತ! ಸಾಹಿತ್ಯಕ್ಕೆ ಪಾರ್ಲಿಮೆಂಟು ಅಗತ್ಯ; ಅದನ್ನು ಬೇಗ ನಾವು ಸ್ಥಾಪಿಸದಿದ್ದರೆ ಡಿಕ್ಟೇಟರ್‌ಶಿಪ್ (ಸರ್ವಾಧಿಕಾರಿತ್ವ) ದ ರಾಜ್ಯ ಸ್ಥಾಪಿತವಾಗುವುದರಲ್ಲಿ ಸಂದೇಹವೇ ಇಲ್ಲ. ಹಾಗಾದರೆ, ಇವನೇ ಸಾಹಿತಿ, ಇವನು ಬರೆದುದೆ ಸಾಹಿತ್ಯ ಎಂಬ ಸಂಸ್ಕೃತಿಯ ಕೆಳಮೆಟ್ಟಲಿಗೆ ಇಳಿಯುವೆವು.

ಸಾಹಿತ್ಯವು ಸಮಾಜದ ಕನ್ನಡಿ, ಸಾಹಿತಿಯು ಸಾಮಾನ್ಯನನ್ನು ತನ್ನ ಮಟ್ಟಕ್ಕೆ ಏರಿಸುವುದು ಪ್ರಗತಿ ಮುಂತಾದ ಮಾತುಗಳನ್ನು ಹೇಳಲು ನನ್ನದೊಂದು ವಿಶಿಷ್ಟಕಾರಣವಿದೆ. ಅದೆಂದರೆ, ಇಂದಿನ ಪರಿಸ್ಥಿತಿಯಲ್ಲಿ ಆ ಮಾತುಗಳನ್ನು ವ್ಯವಹಾರದ ಒರೆಗೆ ಹಚ್ಚುವುದು. ಇಂದು ನಮ್ಮ ದೇಶ ಒಂದು ಕಡೆ ಸ್ವತಂತ್ರವಾಗಿದೆ, ಇನ್ನೊಂದು ಕಡೆ ದೇಶದ ಒಂದು ತುಂಡು ಸಿಡಿದೇ ಹೋಗಿದೆ, ಮೂರನೆಯ ಕಡೆ ನಮ್ಮ ಪ್ರಾಂತದ ಚೂರುಚೂರುಗಳು ಕಾಲ್ತೊಡಕಾಗಿವೆ. ದೇಶದ ಲಕ್ಷಾವಧಿ ನಿರಪರಾಧಿ ಜೀವಗಳು ಧರ್ಮಮದಾಂಧರ, ಪಕ್ಷಮದಾಂಧರ, ಸ್ವಾರ್ಥಮದಾಂಧರ ಅಶುದ್ಧ ಹೃದಯದ ಅಸಚಾರಗಳಿಗೆ, ಅಸಭ್ಯತೆಗಳಿಗೆ ಆಹುತಿಯಾಗುತ್ತಲಿವೆ. ಇಂದು ವಿಚಾರದ ಸ್ವಾತಂತ್ರ್ಯವನ್ನೂ ಜೀವನದ ನೈರ್ಮಲ್ಯವನ್ನೂ ದೇಶಾಭಿಮಾನವನ್ನೂ ಜನರ ಹೃದಯದಲ್ಲಿ ಮೂಡಿಸುವದು ಸಾಹಿತಿಯ ಹೊಣೆಯಾಗುವುದು. ಇದೊಂದು ಪ್ರಚಾರಾತ್ಮಕ ಸಾಹಿತ್ಯ ಎಂದು ಯಾರೂ ತಿಳಿಯಬಾರದು. ಯಾಕೆಂದರೆ ವಿಚಾರ ಸ್ವಾತಂತ್ರ್ಯ, ಜೀವನ ನೈರ್ಮಲ್ಯ ಮತ್ತು ಸೃಷ್ಟಿಯ ಅಭಿಮಾನ ಇವು ಸಾಹಿತಿಯ ಹೃದ

[೧೨ನೇ ಪುಟಕ್ಕೆ]

ಕರ್ಮವೀರ
ಹರಿಜನ ಪುರವಣಿ

ಆರೋಗ್ಯ ನಿಯಮಗಳು

ಶ್ರೀ ಬ್ರಿಜಲಾಲ ನೆಹರು ನನ್ನಂತೆಯೇ ಮರುಳು ಹಿಡಿದವರು. ಅವರು ಆರೋಗ್ಯ ಮಂತ್ರಿಗಳ ಪ್ರಕಟನೆಯೊಂದನ್ನು ಅಲ್ಲಗಳೆದು ಪತ್ರಿಕೆಗಳಿಗೆ ಹೇಳಿಕೆ ಕೊಟ್ಟಿದ್ದಾರೆ. ಅವರು ಅದರಲ್ಲಿ, ನಮ್ಮ ತಪ್ಪಿನ ಫಲವಾಗಿಯೇ ನಾವು ನಮ್ಮ ಆರೋಗ್ಯವನ್ನು ಕೆಡಿಸಿಕೊಳ್ಳುವೆವೆಂದು ಖಂಡಿತೋಕ್ತಿಯನ್ನಾಡಿದ್ದಾರೆ. ಈ ತಪ್ಪನ್ನು ತಿದ್ದುವದಕ್ಕೆ ಯಾವ ಹೊಣೆಗಾರ ಸರಕಾರವೂ ಈ ವರೆಗೆ ಮುಂದೆ ಬಂದುದು ತಮಗೆ ತಿಳಿದಿಲ್ಲವೆಂದೂ ಆರೋಗ್ಯ ಮಂತ್ರಿಗಳು ಇಷ್ಟು ದಿನ ತಮ್ಮ ಲಕ್ಷ್ಯವನ್ನೆಲ್ಲ ಅನೇಕಾನೇಕ ಹೊಸ ಹೊಸ ಔಷಧಾಲಯಗಳನ್ನೂ ರುಗ್ಣ ನಿವಾಸಗಳನ್ನೂ ರೋಗ ಪರೀಕ್ಷಾ ಸ್ಥಾನಗಳನ್ನೂ ತೆರೆಯುವದರಲ್ಲಿ ವೇಧಿಸುತ್ತ ಬಂದಿದ್ದಾರೆಂದೂ ದೂರಿ ಮಂತ್ರಿಗಳು ರೋಗ ಚಿಕಿತ್ಸೆಗಾಗಿ ಶ್ರಮವಹಿಸಿದರಲ್ಲದೆ ರೋಗ ಪ್ರತಿಬಂಧಕ ಉಪಾಯಗಳ ಬಗ್ಗೆಯಾಗಲಿ ಪರಿಶುದ್ಧ ಜೀವನ ವಿಧಾನದ ಬಗ್ಗೆಯಾಗಲಿ ಒಂದಿಷ್ಟೂ ಜನರಿಗೆ ತಿಳಿ ಹೇಳುವ ಎತ್ತುಗಡೆ ಮಾಡಲಿಲ್ಲವೆಂದು ಆಪಾದಿಸಿದ್ದಾರೆ.

ಅವರು ಮುಂದುವರಿಯುತ್ತ ಹೀಗೆ ಹೇಳಿದ್ದಾರೆ. :—

ಪ್ರತ್ಯೇಕ ಶಾಖೆಯೊಂದನ್ನು ಪ್ರಾರಂಭಿಸಿ ರೋಗ ಚಿಕಿತ್ಸೆಗಿಂತ ಜನತೆಯ ಆರೋಗ್ಯ ವರ್ಧನೆಯತ್ತ ಗಮನಿಸಬೇಕು. ಈ ಶಾಖೆಗೆ ನಿಷ್ಣಾತರ ಹಾಗೂ ಜನಸಾಮಾನ್ಯರ ಒಂದು ಸಲಹೆ ಸಮಿತಿಯಿರಬೇಕು. ಅಂದರೆ ನಿಷ್ಣಾತರಾದವರು ತಕ್ಕ ಉಪಾಯಗಳನ್ನು ಹೂಡುವ ಮೊದಲು ಜನಸಾಮಾನ್ಯರ ಇರವಿನ ರೀತಿ ರವಶ್ಯಗಳನ್ನೂ ಅವರ ಕುಂದು ಕೊರತೆಗಳನ್ನೂ ಅರಿತುಕೊಳ್ಳಲು ಅನುವುಂಟಾಗುವದು.

ಈ ನನ್ನ ಮರುಳ ಸಂಗಾತಿಗೆ ಈ ಬಗ್ಗೆ ಪ್ರತ್ಯೇಕ ಶಾಖೆಯೇಕೆ ಬೇಕಾಗಿತ್ತು? ಮೊದಲಿನ ಕಾಲದ ಆಡಳಿತದಲ್ಲಿ ಈ ಬಗೆಯ ಆಡಂಬರ ಒಪ್ಪಬಹುದಿತ್ತು. ಶಾಖೆಗಳು ಹೆಚ್ಚಾದಷ್ಟೂ ವೆಚ್ಚ ಹೆಚ್ಚಾದಷ್ಟು ಉಪಯುಕ್ತತೆಯು ಹೆಚ್ಚೆಂಬ ಅಭಾವವನ್ನು ಉಂಟು ಮಾಡಿ ಜನತೆಯನ್ನು ವಂಚಿಸಿ ತಮ್ಮನ್ನೂ ಮೊದಲಿನ ರಾಜ್ಯಭಾರ ವಹಿಸಿದವರು ವಂಚಿಸಿಕೊಳ್ಳುತ್ತಿದ್ದರು. ಆರೋಗ್ಯ ಮಂತ್ರಿಗಳು ತಮ್ಮ ಅಧೀನದಲ್ಲಿರುವ ಡಾಕ್ಟರರು ಹಾಗೂ ಇನ್ನುಳಿದ ನೌಕರರು ಜನರ ಸೇವೆಗಾಗಿ ಅವರಿಗೆ ವೇತನ ದೊರಕುವದೋ ಅಂತಹ ಜನತೆಯ ಆರೋಗ್ಯರಕ್ಷಣೆಯತ್ತ ಮೊಟ್ಟಮೊದಲು ಗಮನಿಸಬೇಕೆಂದು ನಿರೀಕ್ಷಿಸುತ್ತೇನೆ.

ಪ್ರಥಮೋಪಾಯವೆಂದು ಶ್ರೀ ಬ್ರಿಜಲಾಲ ನೆಹರು ಈ ರೀತಿ ಸೂಚಿಸುತ್ತಾರೆ.

ಹಿಂದುಸ್ತಾನದ ಪರಿಸ್ಥಿತಿಯನ್ನು ಗಮನಿಸಿ ಇಲ್ಲಿಯ ಜನರ [illegible] ಜೀವನ [illegible] ಮಾಡಿದರೆ ಸರಿ ಎಂಬುದನ್ನು ವಿವರಿಸಿ ಆರೋಗ್ಯ ವಿಷಯಕ ಪುಸ್ತಕ ಒಂದು ಪ್ರಕಟಿಸಲ್ಪಡಬೇಕು. ಈ ಪುಸ್ತಕಕ್ಕೆ ಗೌರವ ಮತ್ತು ಮಾನ್ಯತೆ ದೊರಕಬೇಕಾದರೆ ಭಾರತ ಸರಕಾರದ ಆರೋಗ್ಯ ಶಾಖೆಯ ಅಧಿಕಾರಿಗಳೇ ಇದನ್ನು ಅಧಿಕೃತ ರೀತಿಯಲ್ಲಿ ಪ್ರಕಟಿಸಬೇಕು. ಈ ಪುಸ್ತಕ ಬರೆಯುವ ಕೆಲಸವನ್ನು (ಇಂಡಿಯನ್ ಮೆಡಿಕಲ್ ಅಸೋಸಿಯೇಶನ್) ಭಾರತೀಯ ವೈದ್ಯಕ ಸಂಘಕ್ಕೆ ಒಪ್ಪಿಸಬಹುದು. ಈ ಸಂಘಕ್ಕೆ ಒಂದು ಕಾಲ ಪರಿಮಿತಿ ಹಾಕಿ ಕೊಟ್ಟು ಅಷ್ಟು ಅವಕಾಶದಲ್ಲಿ ಪುಸ್ತಕ ಬರೆದು ಮುಗಿಸಬೇಕೆಂದು ಗೊತ್ತುಪಡಿಸಬಹುದು. ನಮ್ಮ ವೈದ್ಯಕ ಕಾಲೇಜುಗಳಲ್ಲಿ ಕಲಿಸುವ ರೋಗ ಪ್ರಧಾನ ಶಿಕ್ಷಣವನ್ನು ಆರೋಗ್ಯ ಪ್ರಧಾನ ಶಿಕ್ಷಣವನ್ನಾಗಿ ಮಾರ್ಪಡಿಸುವದು ಬಹಳ ಹಿತಕಾರಿಯಾಗುವದು. ಕಾರಣ ಈ ಮಾರ್ಪಾಟು ಅತ್ಯಗತ್ಯವಾಗಿರುವದು.

ಎಲ್ಲ ಶಾಲೆ ಕಾಲೇಜುಗಳಲ್ಲಿಯೂ ಆರೋಗ್ಯ ನಿಯಮಗಳ ಶಿಕ್ಷಣವು ಅತ್ಯಗತ್ಯವಿದೆ. ಶ್ರೀ ಬ್ರಿಜಲಾಲ ನೆಹರು ಅವರು ಕೋರುವ ಆರೋಗ್ಯ ವಿಷಯಕ ಪುಸ್ತಕ ಬರೆವುದೇ ಆದರೆ ಅದರ ಲೇಖಕರು, ಆರೋಗ್ಯ ರಕ್ಷಣೆಯ ಹೆಸರಿನಲ್ಲಿ ರೋಗಗಳ ವಿವೇಚನೆಯನ್ನು ಖಂಡಿತ ಬರೆಯಕೂಡದು. ಹೀಗೆ ಈ ಲೇಖಕರಿಗೆ ಮೊದಲೇ ತಿಳಿಸುವದವಶ್ಯ. ಇದರಂತೆ ಬಗೆಬಗೆಯ [illegible] ಮದ್ದಿನ ಉಲ್ಲೇಖವೂ ಅನಿಷ್ಟಕಾರಕವೇ.

ಹೊಸದಿಲ್ಲಿ — ಮೋ. ಕ. ಗಾಂಧಿ

೨೧—೧೨—೪೭

ಸಂಘದ ಅಧ್ಯಕ್ಷ ಕಾರ್ಯದರ್ಶಿಗಳ ಅಧಿಕಾರಾವಧಿ [illegible] ಮುಗಿಯುವದೆಂದು ಕಾರ್ಯದರ್ಶಿ ತಿಳಿಸಿದರು. ಮುಂದಿನ ಮೂರು ವರ್ಷಗಳ ಅವಧಿಗೆ ಗಾಂಧೀಜಿಯವರೇ ಅಧ್ಯಕ್ಷರಾಗಿಯೂ ಶ್ರೀ ಜೆ. ಸಿ. ಕುಮಾರಪ್ಪನವರನ್ನೆ ಕಾರ್ಯದರ್ಶಿಯಾಗಿಯೂ ಮತ್ತೆ [illegible] ಸರ್ವಾನುಮತದ ನಿರ್ಣಯವಾಯಿತು.

ಕಾರ್ಯದರ್ಶಿ ಈ ಪರಿ ವರದಿ ಮಾಡಿದರು—

ಬತ್ತ ಕುಟ್ಟುವ ಹಾಗು ಹಿಟ್ಟು ಬೀಸುವ ಗಾಣಗಳು ನಡೆಯುತ್ತಿದ್ದರೂ ಸೀಡಾ ನಿಮಿತ್ತ ಅಕ್ಕಿ ವಿಶೇಷ ಬಳಸುವದಿಲ್ಲ. ಸೀಡಾ ಅಕ್ಕಿ ಗಿರಣಿಗಳಿಂದಲೇ ಬರುತ್ತದೆ.

[illegible] ಧಾರಾಳವಾಗಿ ಸಿಗುತ್ತಿರುವದರಿಂದ ಈಗ 'ಮೊಗನಾದೀಶ'ಗಳಿಗೆ ಇದ್ದ ಬೇಡಿಕೆ ಇಳಿದಿದೆ. ಇಲ್ಲಿಯೂ ಎಲ್ಲ ಕಾರ್ಯ ಬಹಳ ಕಡಿಮೆ [illegible].

ಕುಂಬಾರಿಕೆ ಶಾಖೆ ಬೆಳೆಯುತ್ತಿದೆ. ಹೊಗೆಯಿಲ್ಲದ ಒಲೆಗಳನ್ನು ಸುಧಾರಿಸಿ ಈಗ ನಮ್ಮ ವಿದ್ಯಾಲಯದ ಅಡಿಗೆ ಮನೆಯಲ್ಲಿಯೂ ಕೆಲ ನೌಕರರ ಮನೆಗಳಲ್ಲೂ ಅದನ್ನು ಉಪಯೋಗಿಸಲಾಗುತಿದೆ.

—ಜೆ. ಸಿ. ಕುಮಾರಪ್ಪ

ಮಲದ ಗೊಬ್ಬರ

ಸಾಧ್ಯವಾದಷ್ಟು ಹೆಚ್ಚು ಪ್ರಮಾಣದಿಂದ ಮಲ ಸಾರ ಸಂವರ್ಧನ ಮಾಡುವದನ್ನು ವಿಚಾರಿಸಲು ಈ [illegible] ಹೊಸ ದಿಲ್ಲಿಯಲ್ಲಿ ಅಖಿಲ ಭಾರತ ಮಲ ಸಾರ ಪರಿಷತ್ತು ಸೇರಿತು. ಅದು ಶ್ರೀಮತಿ ಮೀರಾಬಾಯಿಯ ಆಲೋಚನೆ; ಡಾ. ರಾಜೇಂದ್ರಪ್ರಸಾದರು ಅದಕ್ಕೆ ಅಧ್ಯಕ್ಷರಾದರು. [illegible] ಸರದಾರ ದಾತಾರಸಿಂಗ, ಡಾ. ಆಚಾರ್ಯ [illegible] ವರು ಅದರಲ್ಲಿ ಭಾಗವಹಿಸಿದರು. ನಗರ ಮತ್ತು ಹಳ್ಳಿಗಳ ಬಗ್ಗೆ ಬೇಕಾದ ಯೋಜನೆಗಳ ಮೇಲೆ ಅದು ಅನೇಕವೂ ವಿವಿಧವೂ ಆದ ಠರಾವುಗಳನ್ನು ಪಾಸುಮಾಡಿತು. ಶ್ರೀಮತಿ ಮೀರಾಬಾಯಿ, ಶ್ರೀ ಶಿವಕುಮಾರ ಶರ್ಮ, ಡಾ. ಕೆ. ಜೆ. ಜೋಶಿ (ಡಾ. ಬಿ. ಎನ್. ಲಾಲರು ನಿಮಂತ್ರಕರು) ಇವರನ್ನೊಳಗೊಂಡ ಉಪಸಮಿತಿಯೊಂದನ್ನು ಪ್ರಾಂತಗಳ ಬಗ್ಗೆ ಸರಿಯ ಯೋಜನೆ ತಯಾರಿಸಲು ನಿಯಮಿಸಲಾಯಿತು. ನಗರದ ಮಲ, ಕಕ್ಕಸ, ಹೊಲಸು, ಕಸಾಯಿಖಾನೆ ಕೊಟ್ಟಿಗೆಯ ಹೊಲಸು ಮತ್ತು ಇತರ ವ್ಯಾಪಾರ ವ್ಯವಹಾರದಿಂದ ಉಂಟಾಗುವ ಅಪ್ರಯೋಜಕ ಪದಾರ್ಥ (ಉದಾ: ಚೆಲ್ಲಿದ ಉಣ್ಣೆ, ಗಿರಣಿಯ ಹೊಟ್ಟು, ದೂಳು, ಚರ್ಮದ ಚೂರು ಇತ್ಯಾದಿ) ಮುಂತಾದವನ್ನು ಒಕ್ಕಲುತನದ ಉದ್ಯೋಗಕ್ಕೆ ಬಳಸಿಕೊಳ್ಳಬೇಕೆಂಬುದನ್ನು ಠರಾವುಗಳಲ್ಲಿ ಒತ್ತಿ ಹೇಳಲಾಯಿತು ಮತ್ತು ಪಾಚಿ, ಕಳ್ಳಿ ಸಸಿಪ್ಪೆ, ಅತಿಮನೆಯ ಹೊಲಸು, ಕಾಡು ಸೊಪ್ಪುಗಳು ಮುಂತಾದವುಗಳ ಬಳಕೆಯನ್ನೂ ಅವುಗಳಲ್ಲಿ ಚಿತ್ರಿಸಲಾಯಿತು.

ಕೇವಲ ಕಾಗದದ ಮೇಲೆ ಉಳಿಯುವಂತಾಗದಿದ್ದರೆ ಈ ಠರಾವುಗಳೆಲ್ಲ ಉಪಯುಕ್ತವಾದವು ಮತ್ತು ಒಳ್ಳೆಯವೆಂದು ಹೇಳಬಹುದು. ಇಡೀ ಹಿಂದುಸ್ತಾನದಲ್ಲಿ ಅವನ್ನು ಬಳಕೆಗೆ ತರುವದೋ ಹೇಗೆ ಎಂಬುದೇ ಬಹು ಮುಖ್ಯವಾದ ಮುದ್ದೆ. ಹಾಗೆ ಮಾಡಲು ಅನೇಕ ವಿಚಾರಾಭಾಯರನ್ನು [illegible] ಬೇಕಾಗುತ್ತದೆ. ಭಾರತದ ಜನತೆಯು ಅಷ್ಟಸಹಾರದ ದೊರೆತರೆ ಈ ದೇಶವು ಆಹಾರದ ಕೊರತೆಯನ್ನು ಹೊಡೆದೋಡಿಸಬಹುದಲ್ಲದೆ ಭಾರತಕ್ಕೆ ಬೇಕಾದಷ್ಟಕ್ಕಿಂತ ಹೆಚ್ಚನ್ನು ಕೊಡಬಲ್ಲುದು. ಈ [illegible] ಗೊಬ್ಬರ ಎಂದೂ ಮಣ್ಣನ್ನು [illegible] ಗೊಳಿಸದು; ಸದಾ ಸತ್ವಪೂರ್ಣಗೊಳಿಸುತ್ತದೆ.

[illegible] ಹೊಲಸಿನ ಗಳನ್ನು ಕೊಳೆಯಿಸಿದರೆ, ಅದು ಮಣ್ಣಿಗೆ ಬಂಗಾರದಂಥ ಗೊಬ್ಬರವಾಗುತ್ತದೆ! ಮತ್ತು ಅದರಿಂದ ಲಕ್ಷ [illegible] ಉಳಿದಂತಾಗುತ್ತದೆ, ಅಲ್ಲದೆ [illegible] ಜೀವಿಗಳ [illegible] ಅನೇಕಪಟ್ಟು ಹೆಚ್ಚು [illegible] ಮಾಡುತ್ತದೆ. [illegible] ಕಸಕಡ್ಡಿಗಳನ್ನು ಬಳಸಿ [illegible] ಉಳಿಯುತ್ತದೆ! ಮತ್ತು ಸ್ವಚ್ಛತೆಯು ಹಳ್ಳಿಗೆ [illegible] ಆರೋಗ್ಯವನ್ನು ಸುಧಾರಿಸುತ್ತದೆ.

ಹೊಸದಿಲ್ಲಿ, — ಮೋ. ಕ. ಗಾಂಧಿ

೨೧—೧೨—೪೭

ಯೋಗ್ಯ ಉದಾಹರಣೆ

ತಮ್ಮ ಒಬ್ಬ ಸಮರ್ಥ ಕೆಲಸಗಾರರು ಕೆಲಸದಲ್ಲಿರುವಾಗಲೆ ಕೀರ್ತಿಶೇಷವಾದ ಸಾವಿಗೆ ತುತ್ತಾದುದನ್ನು ಕರಾಡ ಪ್ರಸಿದ್ಧಿಯ ಶ್ರೀ ದಿಲಖುಶ್ ದಿವಾನಜಿ ವರದಿ ಮಾಡುತ್ತಾರೆ. ದಿವಂಗತ ವಾಗಜಿಭಾಯಿಯವರು ಬಾರ್ಡೋಲಿಯಲ್ಲಿಯ ಕರ ನಿರಾಕರಣ ಚಳವಳದಲ್ಲಿ ಭಾಗವಹಿಸಿದ ಕರಾಡಿಯ ಪ್ರಸಿದ್ಧ ಒಕ್ಕಲಿಗರಾದ ಪಂಚಕಾಕರ ಸೋದರ ಸಂತಾನ. ಅವರೆಂದೂ ಸಿಹಿನ ಮೋಸ ಮಾಡಲಿಲ್ಲ. ಈಗಲೂ ಅವರು ತಮ್ಮ ಭೂಮಿಯನ್ನು ಉಳಲೂ ಕಂದಾಯವನ್ನು ಕೊಡಲೂ ಒಪ್ಪುವದಿಲ್ಲ. ನಮ್ಮಿಂದ ನಮ್ಮನ್ನ ರಕ್ಷಿಸಿಕೊಳ್ಳಲು ಸ್ವಸ್ವಬಲ ಮತ್ತು ನಮ್ಮ ಮನೆ ಮಾರುಗಳನ್ನು ಕಾಯಲು ಪೋಲೀಸ ದಲ ಅಗತ್ಯವಿರುವಲ್ಲಿಯ ವರೆಗೆ ತಮ್ಮ ಕನಸಿನ ಸ್ವರಾಜ್ಯ ಸಾಧಿಲ್ಲವೆಂದು ಅವರು ಸರಿಯಾಗಿಯೇ ಹೇಳಿದ್ದಾರೆ. ಮೃತರು ಒಳ್ಳೆಯ ಸಂಬಳ ಸಿಗುವಂಥ ನೌಕರಿಯನ್ನು ಬಿಟ್ಟು ಕೇವಲ ದೇಶಾಭಿಮಾನ ಪ್ರೀತಿ ಉದ್ದೇಶದಿಂದ ನೌಕರರಾದವರು ಅವರು ತಮ್ಮ ಚಿಕ್ಕಪ್ಪನಿಗೆ ತಕ್ಕ ಮನೆ ನೆನಿಸಿ ಕೆಲಸ ಮಾಡುತ್ತಲೇ ತೀರಿಕೊಂಡರು. ಅವರಿಂದ ಶಿಕ್ಷಣ ಪಡೆದ ನೌಕರರು ಅಗಣಿತ ಸಂಖ್ಯಾಕರಾಗಿ ಹೆಚ್ಚಲೆಂದು ಹಾರೈಕೆ. ಭಾರತವು ಭಾರತವೆನಿಸಬೇಕಾದರೆ ಕೈನೂಲುತೆಗೆಯುವ ಸಾವಿರಾರು ನೌಕರರಿಂದು ಬೇಕಾಗಿದ್ದಾರೆ. ಪ್ರತಿಯೊಬ್ಬ ಗಂಡಸು, ಹೆಂಗಸು, ಮತ್ತು ೬ ವರ್ಷ ಕಳೆದ ಮಗುವು ಒಳ್ಳೆಯ ನೂಲನ್ನು ತೆಗೆಯಬೇಕು ಪ್ರತಿದಿನಕ್ಕೆ ಅರ್ಧ ಗಂಟೆ ಯಾದರೂ ತೆಗೆಯಬೇಕೆಂದು ಭಾರತ ನಿರೀಕ್ಷಿಸುತ್ತದೆ. ದಿವಾನರ ಕನಸು ಇಂಥದಿತ್ತು. ಮತ್ತು ಅದರ ಸಿದ್ಧಿಗಾಗಿ ವಾಗ್ಜಿಭಾಯಿಯವರು ಮಡಿದರು.

ಹೊಸದಿಲ್ಲಿ, — ಮೋ. ಕ. ಗಾಂಧಿ.

೨೨—೧೨—೪೭

ಅ. ಭಾ. ಗ್ರಾಮೋದ್ಯೋಗ ಸಂಘದ ವ್ಯವಸ್ಥಾಪಕ ಸಭೆ

ಅಖಿಲ ಭಾರತ ಗ್ರಾಮೋದ್ಯೋಗ ಸಂಘದ ವ್ಯವಸ್ಥಾಪಕ ಮಂಡಲದ ಒಂದು ಸಭೆ ದಿಲ್ಲಿಯಲ್ಲಿ ೧೧ ಡಿಸೆಂಬರ ೧೯೪೭ ಕ್ಕೆ ಜರಗಿತು. ಸಾಮಾನ್ಯ ದೈನಂದಿನ ವ್ಯವಹಾರವಲ್ಲದೆ ಈ ಕೆಳಗಿನ ಇತರ ವ್ಯವಹಾರಗಳೂ ನಡೆದವು:

ಸಂಘದ ಆರ್ಥಿಕ ವರ್ಷವನ್ನು ಜನವರಿಯಿಂದ ಡಿಸೆಂಬರ ೩೧ ರ ಬದಲು ಜುಲೈ೧ರಿಂದ ಜೂನ ೩೦ ಕ್ಕೆ ಬದಲಿಸುವ ನಿರ್ಣಯ ವಾಯಿತು.

ಮಂಡಿಸಲ್ಪಟ್ಟ ವಾರ್ಷಿಕ ವರದಿಯನ್ನು ಸ್ವೀಕರಿಸಿ ಅದನ್ನ [illegible] ಕಾರ್ಯದರ್ಶಿಗೆ ಅಧಿಕಾರ ಕೊಡಲಾಯಿತು.

ಸರಕಾರಿ ಮತ್ತು ಇತರ ಪ್ರದರ್ಶನಗಳಲ್ಲಿ ಭಾಗವಹಿಸುವ ವಿಷಯವೂ ವಿಚಾರಿಸಲ್ಪಟ್ಟಿತು. ಪ್ರದರ್ಶನಗಳ [illegible] ಈ ಕೆಳಗಿನ ಧೋರಣವನ್ನೇ [illegible], ಮುಖ್ಯವಾಗಿ ವೈಜ್ಞಾನಿಕ ಧ್ಯೇಯವನ್ನು ಇಟ್ಟುಕೊಂಡು ಮತ್ತು ಕೇವಲ [illegible] ಗ್ರಾಮೋದ್ಯೋಗಗಳಿಗಷ್ಟೇ ಸೀಮಿತವಾದ ಪ್ರದರ್ಶನಗಳಲ್ಲಿ ಮಾತ್ರ ಭಾಗ ವಹಿಸಬೇಕೆಂಬುದನ್ನೇ ಮುಂದೆಯೂ ಇಟ್ಟುಕೊಳ್ಳಬೇಕೆಂದು ನಿರ್ಧರಿಸಲ್ಪಟ್ಟಿತು.

ಸರಕಾರಗಳ [illegible] ಸಂಘವೆಷ್ಟು ಮಟ್ಟಿಗೆ [illegible] ಚರ್ಚೆ ಜರಗಿತು. ಈಗ [illegible] ಸರಕಾರಗಳು ಇರುವದರಿಂದ ನಮಗೆ ಅವುಗಳ ಬೆಂಬಲ [illegible] ಗುವ ವಿಷಯಗಳಲ್ಲಿ [illegible] ಸರಕಾರ [illegible] ನಿಶ್ಚಯವಾಯಿತು.

ನನ್ನ ಕಣೋಯಾತ್ರೆ

[illegible]

ಗಂಗಾ

[illegible]

ನಿರಾಶ್ರಿತರ ಶಿಬಿರ

[illegible]

ಆಲಸ್ಯ

[illegible]

ಗಾಂಧೀಜಿಯವರ ಪ್ರಾರ್ಥನೋತ್ತರ ಭಾಷಣಗಳು

ಬಿರ್ಲಾಭವನ, ಹೊಸದಿಲ್ಲಿ ೧೫—೧೨—೪೭

ಲಜ್ಜಾಸ್ಪದ ಉಲ್ಲಂಘನೆ

ವೃತ್ತಪತ್ರಪತ್ರಿಕೆಗಳಲ್ಲಿ ಓದಿ ಖೇದವಾದ ವಿಷಯವಿದು.

"ಆರು ಮುನಸಿಪಲ್ ಶಾಲೆಯ ಕಟ್ಟಡಗಳು ನಿರಾಶ್ರಿತರಿಂದ ಆಕ್ರಮಿಸಲ್ಪಟ್ಟಿವೆ. ದಿಲ್ಲಿಯ ಮುನಸಿಪಲ್ ಕಮಿಟಿಯವರು ಅದೆಷ್ಟು ಪ್ರಯತ್ನಿಸಿದರೂ ಪೋಲೀಸರ ಸಹಾಯದಿಂದ ಕಟ್ಟಡಗಳನ್ನು ತೆರವುಮಾಡಿಸಿಕೊಳ್ಳಬೇಕೆನ್ನುತ್ತಾರೆ."

ಈ ವರದಿಯು ನಂಬಲು ತಕ್ಕುದಾಗಿರುವದಾಗಿ ತೋರುತ್ತದೆ. ಶಾಸನ ಬಾಹಿರರ ಉಚ್ಛೃಂಖಲತೆಗೆ ಇದು ಒಂದು ತೀರ ನಿರ್ಲಜ್ಜ ಉದಾಹರಣೆಯೇ ಸರಿ. ಅದೂ ಒಕ್ಕೂಟದ ರಾಜಧಾನಿಯಲ್ಲಿ ಹೀಗೆ ನಡೆಯುವದೆಂದರೆ ಇದು ಯಾರಿಗೂ ಭೂಷಣಾಸ್ಪದವಲ್ಲ. ನೀತಿಯ ನಿಯಮಮೀರಿ ನಡೆವ ಈ ಅಪರಾಧಿಗಳು ತಮ್ಮ ತಪ್ಪಿಗೆ ಪಶ್ಚಾತ್ತಾಪ ತೋರ್ಪಡಿಸಿ ತಾವಾಗಿಯೇ ಕಟ್ಟಡತೆರವುಮಾಡುವರಾಗಿ ಆಶಿಸುತ್ತೇನೆ. ಅವರು ಕರ್ತವ್ಯಚ್ಯುತರಾದರೆ ಅವರ ಹಿತಸಂಬಂಧಿಗಳಾದರೂ ಅವರಿಗೆ ಛೀಮಾರಿ ಹಾಕಿ ಸರಕಾರವು ಬಲಾತ್ಕಾರದಿಂದ ಅವರನ್ನು ಮನೆಬಿಟ್ಟು ತಳ್ಳುವದನ್ನು ತಪ್ಪಿಸುವರಾಗಿ ಬಯಸುತ್ತೇನೆ. ನಿರಾಶ್ರಿತರು ಭಯಾನಕ ಗಂಡಾಂತರ ಎದುರಿಸಿ ಪಾರಾಗಿ ಬಂದಿದ್ದರೂ ಇದರಿಂದ ಅವರು ಒಂದಣುವಾದರೂ ತಿಳುವಳಿಕೆ ಕಲಿತಿಲ್ಲ. ಪ್ರೇಮೂ ಒಳ್ಳೆಯವರೂ ಉದ್ಯಮಶೀಲರೂ ಆಗಿಲ್ಲವೆಂದೂ ಸರ್ವಸಾಮಾನ್ಯವಾಗಿ ಅವರ ಬಗ್ಗೆ ದೂರಿದೆ. ನಿರಾಶ್ರಿತರು ಹಾಗೂ ಮೇಲ್ಕಾಣಿಸಿದ ತಪ್ಪಿತಸ್ಥರು ತಮ್ಮ ತಪ್ಪಿಗೆ ನೊಂದು ಮುಂದಾದರೂ ನಡೆಯನ್ನು ತಿದ್ದಿಕೊಳ್ಳುವರಾಗಿ ತಿಳಿಯುವಾ.

ಅರಾಜಕತೆ ಮತ್ತು ಲಂಚಗುಳಿತನ

ಶನಿವಾರದಿನ ನಾನು ಕಲಕತ್ತೆಯಲ್ಲಿಯ ಅರಾಜಕತೆಯ ಬಗ್ಗೆ ಹೇಳಿದೆ. ಅದರ ಪ್ರಕಾರವೇ ಬೇರೆ; ಮತ್ತು ಆ ಅರಾಜಕತೆಯು ನಿರಾಶ್ರಿತರಲ್ಲದವರಿಂದ ಘಟಿಸಿದ್ದು. ಈ ಬಗೆಯ ಅರಾಜಕತೆಯೂ ಲಂಚಗುಳಿತನವೂ ದೇಶವ್ಯಾಪಿಯಾಗಿಬಿಟ್ಟರೆ ದೇಶದ ಮಾನ ಉಳಿವ ಬಗೆಯೆಂತು? ಇದನ್ನು ನಾಡಿನ ಮುಂದಾಳುಗಳಾದವರು ಅವರು ಅದಾವದೇ ಪಕ್ಷಸಂಗಡದವರಿರಲಿ ಅವಶ್ಯವಾಗಿ ನಿಗ್ರಹಿಸಿ ದೇಶದ ಮಾನವನ್ನು ಕಾಯುವ ಹೊಣೆ ಹೊರಬೇಕು. ನಾನು ಲಂಚಗುಳಿತನವನ್ನು ಇದೇ ಮಾಲಿಕೆಯಲ್ಲಿ ಸೇರಿಸಿದ್ದೇನೆ. ಕಾರಣ ಅದೂ ಇದೇ ಜಾತಿಗೆ ಸೇರಿದ್ದು. ಈ ಲಂಚಗುಳಿತನವು ದಿನದಿನವೂ ಹೆಚ್ಚುತ್ತಲೇ ಇರುವದಾಗಿ ನಂಬಲರ್ಹವಾದವರಿಂದ ತಿಳಿದಿದ್ದೇನೆ. ಪ್ರತಿಯೊಬ್ಬನೂ ತನಗಾಗಿ ಮಾತ್ರ ಬಾಳಬೇಕೆನ್ನುವನೆ? ಭಾರತಕ್ಕಾಗಿ, ಭಾರತದ ಮೇಲ್ಮೆಗಾಗಿ ಒಬ್ಬನೂ ಬಾಳಬೇಡವೆ?

ಚಾಣಾಕ್ಯ ತಂತ್ರ

ಪತ್ರಬರೆದವರೊಬ್ಬರು ಹೀಗೆ ಉಲ್ಲೇಖಿಸಿದ್ದಾರೆ:

"೧೧ ನೇ ಡಿಸೆಂಬರ ೧೯೪೭ ರ ನಿಮ್ಮ ಪ್ರಾರ್ಥನೋತ್ತರ ಭಾಷಣವನ್ನು ರೇಡಿಯೋ ಮೂಲಕ ಇದೇ ಕೇಳಿದೆ. ಈ ಭಾಷಣದಲ್ಲಿ ನೀವು, ಯುಕ್ತಪ್ರಾಂತದ ಕೆಲವು ಮುಸಲ್ಮಾನರು ಬಂದು, ಹಿಂದುಗಳು ಲಾಹೋರಿಗೆ ಹೋಗಿ ತಮ್ಮ ತಮ್ಮ ಉದ್ಯೋಗದಲ್ಲಿ ಪುನಃ ನೆಲೆಸಬಹುದಾಗಿ ಪಾಕಿಸ್ತಾನ ಸರಕಾರದ ಪರವಾಗಿ ಆಶ್ವಾಸನ ಕೊಟ್ಟರೆಂದು ಹೇಳಿದಿರಿ. ಮೊದಲನೆಯದಾಗಿ, ಶೀಖರನ್ನು ಬಿಡು ಕೇವಲ ಹಿಂದುಗಳಿಗಾಗಿ ಕೊಟ್ಟ ಪಾಕಿಸ್ತಾನದ ಈ ಔತಣವು ಕಪಟದಿಂದ ಕೂಡಿದ್ದಾಗಿದೆ. ಇದರಿಂದ ಅವರು ಹಿಂದು ಮತ್ತು ಶೀಖರಲ್ಲಿ ಭೇದವಹುಟ್ಟುಮಾಡುವ ಎಣಿಕೆ ಹಾಕಿದ್ದಾರೆ.

"ಈ ಬಗೆಯ ವಾಗ್ದಾನಗಳು ತೋರಿಕೆಯವು ಹಾಗೂ ಜೊಳ್ಳು. ಇಂತಹ ಮುಸಲ್ಮಾನರಿಂದ ನಿಮ್ಮಂತಹರು ಮಾತ್ರ ವಂಚನೆಗೆ ಒಳಗಾಗಬಹುದು. "ಹಿಂದುಸ್ತಾನ ಟಾಯಿಮ್ಸ್" ಪತ್ರಿಕೆಯ ೧೧—೧೨—೪೭ ರ ತುಂಡೊಂದನ್ನು ನಿಮಗೆ ಕಳಿಸಿದ್ದೇನೆ. ಅದು ಪಾಕಿಸ್ತಾನ ಸರಕಾರದವರ ಅಂತರಂಗವನ್ನು ಸರಿಯಾಗಿ ತೆರೆದು ತೋರಿಸುವಂತಿದೆ. ಇದನ್ನು ಓದಿದ ಮೇಲೂ ನೀವು ಇಂತಹ ಮುಸಲ್ಮಾನರನ್ನು ನಂಬುವಿರಾ? ಪಾಕಿಸ್ತಾನ ಸರಕಾರವು ನಿಷ್ಪಕ್ಷಪಾತದಿಂದಿರುವದೆಂದೂ ಅವರು ಅಲ್ಪಸಂಖ್ಯಾಕರನ್ನು ಸದಾಶಯದಿಂದ ನೋಡುವರೆಂದೂ ಜಗತ್ತಿಗೆ ತೋರಿಸಬೇಕೆಂದೂ ಈ ಸ್ವರವೆತ್ತುತ್ತಾರೆ ಅಷ್ಟೇ. ಅಲ್ಲಿ ಇರುವ ನಿಜಸಂಗತಿಯೇ ಬೇರೆ ವಿಪರೀತ. ಈ ಮುಸಲ್ಮಾನರು ಮರಳಿ ನಿಮ್ಮ ಬಳಿಗೆ ಬಂದರೆ ಅವರಿಗೆ ಈ ಪತ್ರಿಕೆಯ ತುಂಡನ್ನು ದಯವಿಟ್ಟು ತೋರಿಸಿರಿ.

"ಇದಲ್ಲದೆ, ತಾ ೨೦ ನವೆಂಬರ ೧೯೪೭ ಕ್ಕೆ ಹಿಂದೂಗಳೂ ಶೀಖರೂ ತಮ್ಮ ತಮ್ಮ ಧನಕನಕಗಳನ್ನು ಬ್ಯಾಂಕುಗಳಿಂದ ತರಲೆಂದು ಲಾಹೋರಿಗೆ ಹೋದಾಗ ಇವರ ಪಾಡೇನಾಯಿತೆಂಬುದರ ಅರಿವು ನಿಮಗೆ ಇರಲು ಸಾಕು. ಹಿಂದುಸ್ತಾನದ ಸೈನ್ಯ ರಕ್ಷಣೆಯಲ್ಲಿ ಇವರು ಹೋಗಿದ್ದರೂ ಇವರನ್ನೂ ಸೈನ್ಯವನ್ನೂ ಪಾಕಿಸ್ತಾನದ ಅಧಿಕಾರಿಗಳ ಸಮಕ್ಷಮದಲ್ಲಿಯೇ ಮುಸಲ್ಮಾನರ ತಂಡವು ಮುತ್ತಿತು. ಇದನ್ನು ತಡೆಯಲು ಪಾಕಿಸ್ತಾನ ಅಧಿಕಾರಿಗಳು ಒಂದು ಬೆರಳನ್ನೂ ಎತ್ತಲಿಲ್ಲ."

ಪತ್ರ ಬರೆದ ಈ ಮಿತ್ರರು ಕಳುಹಿದ ಪತ್ರಿಕೆಯ ತುಂಡಿನಲ್ಲಿ ಹೀಗಿದೆ.

"ಇತ್ತೀಚೆಗೆ ನಡೆದ ಜಾತೀಯ ಗಲಭೆಯ ಮೂಲಕ ಪೂರ್ವ ಪ್ರದೇಶಗಳಿಗೆ ಓಡಿಹೋದ ಮುಸಲ್ಮಾನೇತರರು ತಿರುಗಿ ಲಾಹೋರಕ್ಕೆ ಬಂದು ಇಷ್ಟು ದಿನ ನಿಂತು ಹೋದ ತಮ್ಮ ತಮ್ಮ ವ್ಯವಹಾರ ಉದ್ಯಮಗಳನ್ನು ಪ್ರಾರಂಭಿಸಬೇಕೆನ್ನುತ್ತಾರೆ. ಆದರೆ ತಮ್ಮ ತಮ್ಮ ಅಂಗಡಿಗಳನು ಮರಳಿ ಪಡೆಯುವ ಮುನ್ನ ಹೊಲ್ಲಸಲ್ಲದ ಅಸಾಧ್ಯ ಶರ್ತುಗಳಿಗೆ ಒಪ್ಪಿ ಸೈ ಇಕ್ಕಬೇಕಾದ ಪರಿಸ್ಥಿತಿಯನ್ನು ಕಂಡು ಹತಾಶರಾಗಿ ಎಷ್ಟೋ ಜನ ಬಂದ ದಾರಿಗೆ ಸುಂಕವಿಲ್ಲವೆಂದು ತಿರುಗಿ ಹಿಂದುಸ್ತಾನಕ್ಕೆ ಹೋಗಿದ್ದಾರೆ ಎಂದು ಮೊದಲಾಗಿ ಲಾಹೋರದ "ಸಿವ್ಹಿಲ್ ಎಂಡ ಮಿಲಿಟರಿ ಗೆಝೆಟ್" ಎಂಬ ಪತ್ರಿಕೆಯಲ್ಲಿ ಪ್ರಕಟವಾಗಿದೆ.

"ಆ ವರದಿಯಲ್ಲಿ ಇನ್ನೂ ಹೀಗುಂಟು. ಪುನರ್ನಿವೇಶನ ಅಧಿಕಾರಿಯ ಪರವಾಗಿ ಅಂಗಡಿಗಳ ಒಡೆಯರು ಅವನ್ನು ತೆರೆಯುತ್ತಿದ್ದಾರೆ. ಈ ಕೆಳಗಿನ ಕರಾರುಗಳಿಗೆ ಅಂಗಡಿಕಾರರು ಒಪ್ಪಿ ಸಹಿ ಇಕ್ಕಬೇಕಾಗುತ್ತದೆ.

(೧) ಮಾರಾಟದ ಎಲ್ಲ ಲೆಕ್ಕಗಳನ್ನೂ ನಾನು ಸರಿಯಾಗಿ ಬರೆದಿಡುವದಾಗಿ ವಚನಕೊಡುತ್ತೇನೆ.

(೨) ಪುನರ್ನಿವೇಶನದ ಉಪ ಅಧಿಕಾರಿಯ ಬರೆಹ ಮೂಲಕ ಅಪ್ಪಣೆ ದೊರಕಿಸದೆ ನಾನು ನನ್ನ ಅಂಗಡಿಯ ಹಿತ ಸಂಬಂಧಗಳನ್ನು ಅನ್ಯರಿಗೆ ಬದಲಿಸುವದಿಲ್ಲ.

(೩) ನಾನು ನನ್ನ ಅಂಗಡಿಯನ್ನು ನಿರಂತರ ನಡೆಸಿಕೊಂಡು ಹೋಗುತ್ತೇನೆ.

(೪) ಮಾರಿಬಂದ ಹಣವನ್ನೆಲ್ಲ ನಾನು ದಿನವೂ ಗೊತ್ತುಪಡಿಸಿದ ಬ್ಯಾಂಕಿನಲ್ಲಿಡುವೆನಲ್ಲದೆ ಆ ಹಣವನ್ನು ಪುನರ್ನಿವೇಶನ ಅಧಿಕಾರಿಯ ಅಪ್ಪಣೆ ಪಡೆಯದೆ ತೆಗೆದುಕೊಳ್ಳುವದಿಲ್ಲ.

(೫) ಲಾಹೋರದಲ್ಲಿಯೇ ನಾನು ಸತತವೂ ವಾಸವಾಗಿರುತ್ತೇನೆ.

"ಮತ್ತೆ ತಮ್ಮ ವ್ಯವಹಾರಗಳನ್ನು ಪ್ರಾರಂಭಿಸಬೇಕೆಂದು ಲಾಹೋರಕ್ಕೆ ಹೋದ ಅನೇಕ ವ್ಯಾಪಾರಸ್ಥರೂ ಉದ್ಯೋಗಸ್ಥರೂ ತಿರುಗಿ ಹಿಂದುಸ್ತಾನಕ್ಕೆ ಹೋಗಿದ್ದಾರೆ. ತಮ್ಮ ವ್ಯವಹಾರಗಳನ್ನು ಕೈಕೊಳ್ಳುವ ಮೊದಲು ತಾವು ಒಪ್ಪಿ ಸಹಿ ಇಕ್ಕಬೇಕಾದ ಕರಾರುಗಳು ಮರ್ಯಾದೆಯಿಂದ ವ್ಯವಹಾರ ಸಾಗಿಸಿಕೊಂಡು ಹೋಗಲು ಒಂದಿಷ್ಟು ಅನುಕೂಲವಾಗಿಲ್ಲ. ಸರಕಾರವು ತನ್ನ ಮೇಲ್ವಿಚಾರಣೆಯ ರೂಪದಲ್ಲಿ ಅಷ್ಟು ಅಡ್ಡ ನಿಂತಿದೆ ಎಂದು ಹೀಗೆ ತಿರುಗಿ ಬಂದವರಿಗೆ ಅನಿಸಿದೆ.

"ಮೇಲಾಗಿ, ಅವರೆನ್ನುತ್ತಾರೆ, ಪಾಕಿಸ್ತಾನ ಸರಕಾರವು ಅಲ್ಪಸಂಖ್ಯಾಕರನ್ನು ಔದಾರ್ಯದಿಂದ ನೋಡಿಕೊಳ್ಳುವದಾಗಿ ವಚನ ಕೊಟ್ಟದ್ದು ಮುಸಲ್ಮಾನೇತರ ವ್ಯವಹಾರಸ್ಥರನ್ನು ಹೀಗೆ ಅನ್ಯಥಾ ನಡೆಸಿಕೊಳ್ಳುವದು ಸರಕಾರಕ್ಕೆ ಒಂದಿಷ್ಟೂ ಒಪ್ಪುವದಿಲ್ಲ. ಓರ್ವ ಪ್ರಮುಖ ವ್ಯವಹಾರಸ್ಥರು, ಈ ಬಗೆಯ ನಿಯಮ ನಿರ್ಬಂಧಗಳನ್ನು ಮುಸಲ್ಮಾನ ವ್ಯಾಪಾರಿಗಳ ಮೇಲೆ ಹೇರಲಾಗಿಲ್ಲವೆಂದು ಹೇಳಿದರು.

ವಿಶ್ವಾಸವೇ ವಿಶ್ವಾಸಕ್ಕೆ ಕಾರಣ

ಈ ಅಪಭಾಗದ ವಿಷಯದಲ್ಲಿ ನಾನು ಮೊನ್ನೆಯೇ ಮಾತನಾಡಿದ್ದೇನೆ. ಮೇಲ್ಕಾಣಿಸಿದ ಸಮಾಚಾರ ಸತ್ಯವಿದ್ದರೂ ನನಗೆ ಮುಸಲ್ಮಾನ ಮಿತ್ರರು ಹೇಳಿದ್ದು ಇದರಿಂದ ಅಸತ್ಯವೇನಾಗಬೇಕು? ಇವರಿಗೆ ತಮ್ಮ ಮಾನವೆಂಬುದೂ ಒಂದು ಉಂಟಿಲ್ಲವೆ? ಅಲ್ಲದೆ ಪಾಕಿಸ್ತಾನದ ಅಧಿಕಾರಿಗಳು ಅವರಂತೆ ತಾವು ಯಾರ ಪ್ರತಿನಿಧಿಗಳಾಗಿ ಅಭಿವಚನ ಪಡೆದು ಹೊರಟಿರುವರೋ ಅವರ ಮಾನಕ್ಕೂ ಇವರು ಹೊಣೆಯಲ್ಲವೆ? ಈ ಮುಸಲ್ಮಾನ ಮಿತ್ರರು ನನ್ನ ಸಂಪರ್ಕದಲ್ಲಿರುವರೆಂಬ ಮಾತನ್ನು ಇಲ್ಲಿ ಹೇಳಬಯಸುತ್ತೇನೆ. ಅವರು ಇಂದು ಮತ್ತೆ ಬಂದಿದ್ದರು. ನನಗೆ ಮೌನವಿದ್ದ ಕಾರಣ ಮತ್ತು ನಾನು ನನ್ನ ಪ್ರಾರ್ಥನೋತ್ತರ ಭಾಷಣ ಬರೆಯುವದರಲ್ಲಿ ಮಗ್ನನಾಗಿದ್ದ ಕಾರಣ ಅವರನ್ನು ಕಾಣಲು ನನಗಾಗಲಿಲ್ಲ. ಆದರೂ ಅವರು ಈ ಬಗ್ಗೆ ನಿಶ್ಚಯವಾಗಿ ತಾವು ಸುಮ್ಮನೆ ಕುಳಿತಿಲ್ಲ [illegible] ದ್ದಾರೆ. ಪತ್ರ ಬರೆದ ನನ್ನ ಮಿತ್ರರಿಗೆ, ಅಷ್ಟು ಸಂಶಯಗ್ರಸ್ತರಾದರೆ ಅಷ್ಟು ಸೂಕ್ಷ್ಮಪ್ರಕೃತಿಯವರಾದರೆ ಸಾಗದಾಗಿ ಎಚ್ಚರಿಸುತ್ತೇನೆ. ನಂಬಿ ಕೆಟ್ಟವರುಂಟೆ? ನಂಬುವದರಿಂದ ಅವರೇನು ಕಳೆದು ಕೊಳ್ಳುವರು? ಅಪನಂಬಿಗೆಯೆಂಬುದು ತುಂಬ ವಂಚಕ ಸಂಗತಿ ಇದನ್ನು ಅವರು ಅರಿತಿರಲಿ. ನನ್ನ ಮಟ್ಟಿಗೆ ಹೇಳುವದೆಂದರೆ ನಾನಂತೂ ಇದರಿಂದ ಪಶ್ಚಾತ್ತಾಪಗೊಂಡಿಲ್ಲ, ನಾನು ಕಂಡು ತೆರೆದೇ ಜೀವನದುದ್ದಕ್ಕೂ ನಂಬಿಗೆಯನ್ನು ನೆಚ್ಚಿ ನಡೆದಿದ್ದೇನೆ. ಅವರೇ ತಾವು ನಂಬಲು ಯೋಗ್ಯರಲ್ಲವೆಂದು ತೋರಿಸಿ ಕೊಡುವವರೆಗೆ ನಾನು ಈ ಮುಸಲ್ಮಾನ ಮಿತ್ರರನ್ನೂ ನಂಬಿಯೇ ನಡೆಯುತ್ತೇನೆ. ನಂಬಿಗೆಯೇ ನಂಬಿಗೆಯನ್ನು ಹುಟ್ಟಿಸುತ್ತದೆ. ನಂಬಿಗೆಯು ವಂಚನೆಯನ್ನು ಎದುರಿಸುವ ಬಲ ಕೊಡುತ್ತದೆ. ನಿರಾಶ್ರಿತರು ಪಾಕಿಸ್ತಾನ ಹಿಂದುಸ್ತಾನಗಳ ತಮ್ಮ ತಮ್ಮ ಮನೆಗಳಿಗೆ ಮರಳಬೇಕಿದ್ದರೆ ನಾನು ಹೇಳುತ್ತ ಬಂದ ಹಾಗು ಕೈಕೊಂಡ ಉಪಾಯಗಳಿಂದ ಮಾತ್ರ ಸಾಧ್ಯ.

ನಿಷ್ಕಾರಣ ಭಯ

ಹಿಂದು ಶಿಬಿರದಲ್ಲಿ ಒಡಕುಂಟುಮಾಡುವ ಉದ್ದೇಶದಿಂದ ಈ ಆಮಂತ್ರಣವಿದೆಯೆಂಬುದಾಗಿ ಪತ್ರಬರೆದವರು ಅನ್ನುವದು ನಿಷ್ಕಾರಣ ಭಯವೆಂದು ಹೇಳುತ್ತೇನೆ. ಅವರ ಔತಣವು ಅಲ್ಲಸಲ್ಲದ ಅರ್ಥದಲ್ಲಿಗ್ರಹಿಸಲ್ಪಡುವ ಸಂಭವವಿದೆಯೆಂಬ ಮಾತನ್ನು ನಾನು ಆ ಮಿತ್ರರಿಗೆ ಹೇಳಿದ್ದೆ ಅವರು ಅದಕ್ಕೆ ಅತ್ಯಂತ ದೃಢ ಕಂಠದಿಂದ "ಎಂದಿಗೂ ಇಲ್ಲ" ಎಂಬುದಾಗಿ ಮಾರ್ನುಡಿದಿದ್ದರು. ಮತ್ತೆ ಮಾರ್ಗಕ್ರಮಿಸಲು ವಿಚಾರದದಾರಿಯನ್ನು ಸರಿಗೊಳಿಸಿಗೊಳ್ಳುವವರಲ್ಲಿ ತಪ್ಪೇನು? ಶೀಖರ ವಿಷಯಕ್ಕೆ ಪಾಕಿಸ್ತಾನದಲ್ಲಿ ತೀವ್ರವಾದ ಕಲುಷಿತಭಾವವಿದೆಯೆಂಬ ಮಾತೂ ಸುಳ್ಳೇನಲ್ಲ ಆದರೆ ಇವರಿಬ್ಬರೂ ಕೂಡಿಯೇ ತೇಲಬೇಕು. ಇಲ್ಲವೆ ಮುಳುಗಬೇಕು. ಎಂಬುದೂ ನಿಃಸಂದಿಗ್ಧ ಸತ್ಯವೇ. ಇಷ್ಟೇ ಇವರಲ್ಲಿ ಕುತಂತ್ರದ ವಿಚಾರಗಳಿರಕೂಡದು. ಇಬ್ಬಣದ ಸಂಚುಗಾರಿಕೆಯಲ್ಲಿ ಸನ್ಮಾನ್ಯ ಸಹಕಾರವೆಂಬುದು ಎಂದಿಗಾದರೂ ಇರಬಲ್ಲುದೆ?

ಅವಿಭಕ್ತ ಭಾರತದ ಪ್ರಜೆ

ಪೂರ್ವ ಪಾಕಿಸ್ತಾನದ ಓರ್ವಮಿತ್ರರು ಕೇಳುತ್ತಾರೆ.

"ಅವಿಭಕ್ತ ಭಾರತಪ್ರಜೆಯೆಂದು ಅದು ಹೇಗೆ ನಾನು ಘೋಷಿಸಬಲ್ಲೆ? ದೇಶ ಇಬ್ಭಾಗವಾಗಿದ್ದು ಒಂದು ಭಾಗದಲ್ಲಿದ್ದರೆ ಇನ್ನೊಂದು ಭಾಗದ ಪ್ರಜೆಯಾಗಲು ವಂಚಿತನಾಗಬೇಕಾಗುವದಲ್ಲ?" ಕಾಯದೆ ತಜ್ಞರು ಏನೇ ಎಂದುಕೊಳ್ಳಲಿ ಕಾಯದೆಗಳು ಮನುಷ್ಯನ ಮನಸಮೇಲೆ ಅಧಿಕಾರ ನಡೆಸವು. ಈ ಮಿತ್ರರು ಇಡೀ ಪ್ರಪಂಚದ ಪ್ರಜೆ ಎಂದು ಬೇಕಾದರೂ ಹೇಳಿ ಕೊಳ್ಳಬಹುದು. ಕಾಯದೆ ಕಾನೂನುಗಳು ವಿವಿಧ ದೇಶಗಳ ಸೀಮೆಯಲ್ಲಿ ಕಾಲಿಡಲು ಅಡ್ಡಿಯೊಡ್ಡಿದರೂ ಭಾವಲೋಕದಲ್ಲಿ ಯಾರ ಅಡೆ? ಕಾಯದೆ ಕಾನೂನುಗಳು ಮಾನವನ ಮನವನ್ನು ಚಿಂತೆಗೆ ಗುರಿಪಡಿಸಕೂಡದು. ಅನೇಕರ ಮನಸ್ಸು ಯಂತ್ರದಂತಾಗಿದ್ದರಿಂದಲೆ ಕಾರಣವಿಲ್ಲದೆ ಚಿಂತೆಗೆ ತುತ್ತಾಗುತ್ತೇವೆ. ನೈತಿಕ ಬಲ ಸಾಕಷ್ಟಿದ್ದರೆ ಚಿಂತೆ ಆತುರತೆಗಳು ಪೀಡಿಸಲಾರವು. ಒಂದು ದೇಶದ ಅಥವಾ ಒಂದು ಜನಾಂಗದ ವಿರುದ್ಧ ಕುಭಾವನೆ ತಳೆಯುವದನ್ನು ನಾವೆಲ್ಲ ಮೊದಲು ನಿಲ್ಲಿಸಬೇಕಾಗಿದೆ. ಪಾಕಿಸ್ತಾನದ ಅಥವಾ ಹಿಂದುಸ್ತಾನದ ಪ್ರಜೆಯಾಗಿ ಆಯಾ ದೇಶಗಳ ಬಗ್ಗೆ ಅಥವಾ ಅಲ್ಲಿಯ ನಿವಾಸಿಗಳ ಬಗ್ಗೆ ಕೆಟ್ಟಭಾವ ತಾಳಿ ತಾನು ಆಯಾದೇಶದವನೆಂದು ಹೇಳಿಕೊಳ್ಳುವದು ಶುದ್ಧ ತಪ್ಪು, ಈ ಬಗೆಯ ಪರಿಸ್ಥಿತಿಯು ಅದು ಇದ್ದುದೇ ಆದರೆ ದೇಶದೇಶಗಳಲ್ಲಿ ಯುದ್ಧಕ್ಕೆ ಕಾರಣವಾಗಬಹುದು. ಹೀಗೆ ಮಾಡಿದವರನ್ನು ಘಾತಕಿಗಳೆಂದೂ ಶತ್ರುದೇಶಕ್ಕೆ ಸಹಾಯಮಾಡುವವರೆಂದೂ ಆರೋಪಿಸಿ ಯಾವ ಸರಕಾರವೂ ಅಂಥಹರನ್ನು ದಮನಿಸಿ ಶಿಕ್ಷಿಸಬಹುದು. ನಿಷ್ಠೆ ಎಂಬ ವಸ್ತುವು ಅವಿಭಾಜ್ಯವಾಗಿದೆ.

ಬಿರ್ಲಾಭವನ, ಹೊಸದಿಲ್ಲಿ, ೧೬-೧೨-೪೭

ವಿನಿಯಂತ್ರಣದ ಫಲಿತಾಂಶ

ಮೇಲಿನ ಸಂಜೆ ತಮ್ಮ ಪ್ರಾರ್ಥನೋತ್ತರ ಭಾಷಣದಲ್ಲಿ ಗಾಂಧಿಯವರು, ಶ್ರೀ ವ್ರಜಕೃಷ್ಣ ಚಾಂದಿವಾಲರೊದಗಿಸಿದ ಅಂಕಿಸಂಖ್ಯೆಗಳಿಂದ ಈಗ ಆಗಿರುವ ವಿನಿಯಂತ್ರಣದ ಫಲಿತಾಂಶಗಳು ತಿಳಿಯುವದೆಂದು ನುಡಿದರು. ಅದರ ಫಲವಾಗಿ ಬೆಲ್ಲದ ಬೆಲೆಯು ೧ ರೂಪಾಯಿಯಿಂದ (ಸೇರಿಗೆ) ೮ ಆಣೆಗೆ ಇಳಿಯಿತೆಂದೂ ಅದು ಅದಕ್ಕೂ ಕೆಳಗಿಳಿಯಬಹುದೆಂದೂ ಅರಿಕೆಯಾಯಿತು. ತಮ್ಮ ಬಾಲ್ಯದಲ್ಲಿ ಬೆಲ್ಲದ ಸೇರಿಗೆ ಒಂದಾಣೆಯಿತ್ತೆಂದರು ಯಿದ್ದದ್ದು ಈಗ ೨೪ ಕ್ಕಿಳಿದಿದೆ. ಒಂದು ರೂಪಾಯಿಗೆ ೧೪ ಚಟಾಕುಗಳ ಬದಲು ಈಗ ಒಂದು ವರೆಸೇರು ಬೇಳೆ ಸಿಗುತ್ತದೆ ಕಡಲೆಯ ಬೆಲೆಯು ಮಣವೊಂದಕ್ಕೆ ೧೮ ಕ್ಕಿಳಿದಿದೆ. ಕಳ್ಳಪೇಟೆಯಲ್ಲಿ ಗೋದಿಯನ್ನು ಮಣಕ್ಕೆ ೩೪ ರೂಪಾಯಿಯಂತೆ ಮಾರುತ್ತಿದ್ದರು. ಅದೀಗ ೨೪ ರೂಪಾಯಿಗಿಳಿದಿದೆ. ಹಳೆಯ ಕಾಲದ ಅರ್ಥಪದ್ಧತಿ ಮತ್ತು ಬೆಲೆಯ ಏರಿಳಿತ ತಮಗೆ ಗೊತ್ತಿಲ್ಲವೆಂದು ಹೇಳುವುದು ಸಹಜವೆಂದರವರು. ತಮ್ಮ ಅಜ್ಞಾನದಿಂದ ತಾವು ವಿನಿಯಂತ್ರಣವನ್ನು ಸೂಚಿಸಿದ್ದು; ಅದರೆ ಬಡಜನರು ಅದರ ಪರಿಣಾಮಗಳನ್ನು ಭೋಗಿಸಬೇಕಾಗಿತ್ತು. ಫಲಿತಾಂಶ, ಹೇಗೇ ಆಗಲಿ, ಇಲ್ಲಿಯವರೆಗೆ ಆ ಭಯವನ್ನು ಸುಳ್ಳುಮಾಡಿದೆ. ನಿಯಂತ್ರಣ ತೆಗೆದ ಮೇಲೆ ಬಡವರು ಸ್ವಲ್ಪ ಸುಧಾರಿಸಿದರೆಂದು ತೋರುತ್ತದೆ. ನಿಯಂತ್ರಣ ತೆಗೆದದ್ದಕ್ಕಾಗಿ ತಮಗೆ ಅನೇಕರ ಧನ್ಯವಾದ ಬಂದಿವೆಯೆಂದು ಗಾಂಧಿಯವರು ಹೇಳಿದರು. ಅನೇಕರು ಅದಕ್ಕಾಗಿ ದುಡಿದಿರುವದರಿಂದ ಅನೇಕ ಕಾರಣಗಳಿಗಾಗಿ ಆ ಧನ್ಯವಾದವನ್ನು ತೆಗೆದುಕೊಳ್ಳಲು ತಮಗೆ ಸಾಧ್ಯವಿಲ್ಲವೆಂದು ಅವರು ಮುಂಬರಿದರು. ದಲಾಲರೂ ಬೆಳೆಗಾರರೂ ತಮಗಿಂತ ಹೆಚ್ಚಾಗಿ ಇಡೀ ದೇಶವನ್ನು ಲಕ್ಷ್ಯದಲ್ಲಿ ತಂದರೆ ಸಂಪೂರ್ಣ ವಿನಿಯಂತ್ರಣವು ಒಂದು ಅಸಂಕಲಿತವರವೆನ್ನಬಹುದಾಗಿ ಅವರು ಅಭಿಪ್ರಾಯಪಟ್ಟರು. ವ್ಯಾಪಾರಿ ಜಾತಿಯು ಸರಿಯಾಗಿ ನಡೆದುಕೊಳ್ಳುವದಿಲ್ಲವೆಂಬ ಕಲ್ಪನೆಯೇ ವಿನಿಯಂತ್ರಣದ ಬಗೆಗಿದ್ದ ಭಯಕ್ಕೆ ಕಾರಣ. ಈ ಸಂಶಯಾರ್ತರು ದಲಾಲ ಮತ್ತು ಬೆಳೆಗಾರರನ್ನು ನಂಬದಾದರು. ಬಹುಸಂಖ್ಯಾಕರು ಸ್ವಾರ್ಥಿಗಳೂ ಅವಿಶ್ವಾಸ್ಯರೂ ಆದರೆ ಪ್ರಜಾಸತ್ತೆ, ಪಂಚಾಯತ ರಾಜ್ಯಗಳು ಹೇಗೆ ನಡೆದಾವು?

ಸಾಧಾರಣ ಅಧಿಕಾರಿಗಳೊಡನೆ ಐ. ಸಿ. ಎಸ್ ಅಧಿಕಾರಿಗಳನ್ನೂ ನೆರವಿಗೆ ತೆಗೆದುಕೊಳ್ಳಬೇಕೆಂದು ಸರಕಾರಕ್ಕೆ ಕೇಳಿಕೊಳ್ಳುವೆನೆಂದು ಗಾಂಧೀಜಿ ನುಡಿದರು. ವ್ಯತ್ಯಾಸವೆಂದರೆ, ೨ನೆಯವರು ಹೆಚ್ಚು ಸಂಬಳ ತಿನ್ನುವರು ಮೊದನೆಯವರು ಸ್ವಯಂಸೇವಕರು. ಯಾವ ವಂಚನೆಯಿದ್ದರೂ ಅದಕ್ಕಾಗಿ ಅವರು ಕಾಯಿದೆಯಂತೆ ನಡೆದುಕೊಳ್ಳತಕ್ಕವರು.

ಸಂಬಳ ಮತ್ತು ಐ. ಸಿ. ಎಸ್ ನೋಕರಿ

ಐ. ಸಿ. ಎಸ್ ಖಾತೆಯವರಿಗೆ ಹೆಚ್ಚು ಸಂಬಳ ಕೊಡಲಾಗುತ್ತಿದೆಯೆಂದು ತಮಗೆ ದೂರು ಬಂದಿದೆ ಎಂಬುದಾಗಿ ಗಾಂಧಿಯವರೆಂದರು. ಒಮ್ಮೆಲೇ ಆ ಖಾತೆಯನ್ನು ತೆಗೆದು ಹಾಕಲು ಸಾಧ್ಯವಿಲ್ಲ. ಅವರ ಸಂಖ್ಯೆಯನ್ನು ಆಗಲೆ ಕಡಿಮೆ ಮಾಡಲಾಗಿದೆ. ಅದರ ಫಲವಾಗಿ ಉಳಿದವರು ಹೆಚ್ಚು ಕಷ್ಟಪಟ್ಟು ಕೆಲಸಮಾಡಬೇಕಾಗಿದೆ. ಆದುದರಿಂದ ಸರದಾರ ಪಟೇಲರು ಅವರ ಕೆಲಸಕ್ಕಾಗಿ ಅವರನ್ನು ಅಭಿನಂದಿಸಿದರು. ತಾವು ಮೆಚ್ಚಿಗೆಗೆ ಅರ್ಹತೆಯಿದ್ದಲ್ಲಿ ಮೆಚ್ಚಲು ಹಿಂಜರಿಯುವದಿಲ್ಲವೆಂದೂ ಆದರೆ ಸ್ವಾತಂತ್ರ್ಯಸಿಗುವ ಮುನ್ನ ಅವರು ತೆಗೆದುಕೊಳ್ಳುತ್ತಿದ್ದ ಸಂಬಳ ಬಹಳ ಹೆಚ್ಚೆಂದು ಕಾಂಗ್ರೆಸ್ಸಿಗರೆನ್ನುತ್ತಿದ್ದರೆಂಬುದನ್ನು ಹೇಳದಿರಲಾರೆನೆಂದೂ ಅವರೆಂದರು. ಜನರೇ ನಿಜವಾದ ಐ. ಸಿ. ಎಸ್. ನೌಕರರು. ಎಷ್ಟೇ ಆಗಲಿ, ಮೊದಲು ಕಾಂಗ್ರೆಸ್ಸಿಗರು ಸಂಬಳವಿಲ್ಲದೆ ದುಡಿಯುತ್ತಿದ್ದರು. ಇಂದು ಕಾಂಗ್ರೆಸ್ಸಿಗನೊಬ್ಬನು ಉಪಮಂತ್ರಿಯಾದರೆ ಅವನಿಗೇಕೆ ಹೆಚ್ಚು ಸಂಬಳ ಕೊಡಬೇಕು? ಉಪಮಂತ್ರಿಗಳು ಬೇಕೆಂಬುದೇ ತಮಗೆ ಅರ್ಥವಾಗದೆಂದು ಅವರು ಮುಂಬರಿದರು. ಹೆಚ್ಚು ಸಂಬಳದ ಕಾರ್ಯದರ್ಶಿಗಳನ್ನು ಸರಕಾರದಲ್ಲಿ ನಿಯಮಿಸಿಕೊಳ್ಳುವುದರಲ್ಲಿ ಕಾಂಗ್ರೆಸ್ಸು ಜಿಪುಣತನವನ್ನು ತೋರಿಸಬೇಕು. ದೇಶದೆದುರು ಕಾಂಗ್ರೆಸ್ಸಿಟ್ಟ ಉನ್ನತ ಮಟ್ಟವನ್ನು ಕೆಳಗಿಳಿಸುವುದು ತಪ್ಪಾದೀತು, ಕೋಟಿಗಟ್ಟಲೆ ಹಣ ಅವರಲ್ಲಿರುವುದರಿಂದ ಈಗ ಅವರು ಮೊದಲಿಗಿಂತಲೂ ಎಚ್ಚರದಿಂದ ವರ್ತಿಸಬೇಕು. ಆದಾಯ ಇದ್ದ ಹಾಗೇ ಇರುವಾಗ ವೆಚ್ಚವೇರಲು ಅವಕಾಶ ಕೊಡುವದು ಬುದ್ಧಿಗೇಡಿತನ. ಹೋಗುವದಕ್ಕಿಂತ ಬರುವದೇ ಹೆಚ್ಚಿನದಿರಬೇಕೆಂದು ಪ್ರತಿಯೊಂದು ವ್ಯಾಪಾರಿ ಸಂಸ್ಥೆಯೂ ನೋಡಿಕೊಳ್ಳಬೇಕು. ಈ ಮೂಲಭೂತ ವಿಷಯವನ್ನು ಅಲಕ್ಷಿಸಿ ಅವರು ಸ್ವತಂತ್ರ ಹಿಂದುಸ್ತಾನದ ವ್ಯವಹಾರವನ್ನು ಸಾಗಿಸಬಲ್ಲರೋ? ಅವರ ಹತ್ತಿರ ಇಂದು ಸ್ವಲ್ಪ ಹಣವಿದೆ; ಬೇಕಾದ ಹಾಗೆ ಅವರದನ್ನು ಹಾಳುಮಾಡಿಬಿಡಬಲ್ಲರು. ಆದರೆ ಅವರು ಜಾಣ ವ್ಯಾಪಾರಿಗಳಂತೆ ವರ್ತಿಸದಿದ್ದರೆ ಅದು ಬಹಳ ಕಾಲ ಬರಲಾರದು.

—೯ನೇ ಪುಟಕ್ಕೆ

ಗಾಂಧೀಜಿಯ ಪ್ರಾರ್ಥನೋತ್ತರ ಭಾಷಣಗಳು

[ಅನೇ ಪುಟದಿಂದ ಮುಂಬರಿದುದು]

ಬಿರ್ಲಾ ಭವನ, ಹೊಸದಿಲ್ಲಿ, ೧೭-೧೨-೪೭

ಬಲಾತ್ಕಾರದ ಆಕ್ರಮಣ

ಗಾಂಧಿಯವರು ತಮ್ಮ ಪ್ರಾರ್ಥನೋತ್ತರ ಭಾಷಣದಲ್ಲಿ ಪೂರ್ವ ಪಂಜಾಬಿನ ಒಬ್ಬ ಗೆಳೆಯನ ಕಾಗದದತ್ತ ಲಕ್ಷ್ಯ ಸೆಳೆದರು. ಅಲ್ಲಿ ಅವನಿಗೊಂದು ಮನೆಯಿತ್ತು; ಅವನ ವ್ಯಾಪಾರ ಪಶ್ಚಿಮ ಪಂಜಾಬಿನಲ್ಲಿತ್ತು. ಉಳಿದವರಂತೆ ಪಶ್ಚಿಮ ಪಂಜಾಬನ್ನು ಬಿಟ್ಟು ಬರಬೇಕಾಯಿತು. ಪೂರ್ವ ಪಂಜಾಬಿಗೆ ಬಂದೊಡನೆ ಒಬ್ಬ ಸರಕಾರಿ ನೋಕರನು ತನ್ನ ಮನೆಯನ್ನು ಆಕ್ರಮಿಸಿದುದನ್ನು ನೋಡಿದನು. ಅವನ ವಿಶ್ವ ಪ್ರಯತ್ನದ ಫಲವಾಗಿ ಆ ನೋಕರನನ್ನು ಮನೆಯಿಂದ ಹೊರಡಿಸಲಾರದಾದನು ಮತ್ತು ಕೇವಲ ಎರಡೇ ಕೋಣೆಗಳನ್ನು ತನ್ನ ಮನೆಯಲ್ಲಿ ಪಡೆಯಲು ಶಕ್ತನಾದನು. ಪೂರ್ವ ಪಂಜಾಬಿನ ಸರಕಾರವು ಮನೆಯನ್ನು ತನ್ನ ವಶಪಡಿಸಲು ನೆರವಾಗತಕ್ಕದ್ದೋ ಅಥವಾ ತಾನು ನ್ಯಾಯಾಲಯದಲ್ಲಿ ದೂರಿಕೊಳ್ಳತಕ್ಕದ್ದೋ ಎಂಬುದನ್ನು ತಿಳಿಸಬೇಕೆಂದು ಅವನು ಗಾಂಧಿಯವರನ್ನು ಕೇಳಿದ್ದನು. ನ್ಯಾಯಾಲಯಕ್ಕೆ ಹೋಗಗೊಡದೆ ಸರಕಾರವೇ ಅವನಿಗೆ ಅವನ ಮನೆಯನ್ನು ಕೊಡಿಸತಕ್ಕದ್ದೆಂಬುದಕ್ಕೆ ತಮ್ಮ ಒಪ್ಪಿಗೆಯಿದೆ ಎಂದು ಗಾಂಧೀಜಿ ಹೇಳಿದರು. ಆಕ್ರಮಿಸಿದವನು ಸರಕಾರಿ ನೋಕರನೇ ಆದುದರಿಂದ ಅವನನ್ನು ಬಿಡಿಸಲು ಸರಕಾರಕ್ಕೆ ಅಷ್ಟು ಕಷ್ಟವಾಗಬಾರದು. ನಿರಾಶ್ರಿತರಿಗೆ ಸೇರಿದ ಮನೆಗಳನ್ನು ಬಿಟ್ಟುಕೊಡಬೇಕಾದದ್ದು ನ್ಯಾಯವಾದರೂ ಅವರಲ್ಲಿ ಕೆಲವರು ಬಲತ್ಕಾರದಿಂದ ಇನ್ನೊಬ್ಬರ ಮನೆಗಳನ್ನು ಆಕ್ರಮಿಸುತ್ತಿದ್ದುದನ್ನು ಗಾಂಧಿಯವರು ನೆನಪು ಮಾಡಿಕೊಡಬೇಕಾಯಿತು. ಅವರು ಖಾಲಿಯಿದ್ದ ಮನೆಗಳ ಬೀಗಒಡೆದರೆಂದು ಸುದಿಯಿದೆ— ಅದರಲ್ಲೂ ಅವು ಮುಸಲ್ಮಾನರವಿದ್ದಾಗ. ಅಂಥ ಅರಾಜಕತೆಯು ಸಂಬಂಧಪಟ್ಟವನಿಗಾಗಲಿ, ದೇಶಕ್ಕಾಗಲಿ ಒಳ್ಳೆಯದಲ್ಲ. ರಕ್ತಪಾತ, ಕೊಳ್ಳಿ, ಲೂಟಿಗಳು ಎಂದಾದರೂ ಯಾರಿಗಾದರೂ ಪ್ರಯೋಜನಕಾರಿಯಾದಾವೇ?

ಸವಿಮಾತು

ಮುಸ್ಲಿಂ ಮುಖಂಡರು ಎಷ್ಟೇ ಸವಿಮಾತುಗಳನ್ನಾಡಲಿ, ಪಾಕಿಸ್ತಾನದಲ್ಲಿ ಯಾವ ಹಿಂದು ಇಲ್ಲವೆ ಶೀಖನೂ ಸ್ವಾಭಿಮಾನ ಸುರಕ್ಷಿತತೆಗಳಿಂದ ಬದುಕಲಾರನೆಂದು ಗಾಂಧೀಜಿಗೆ ಎಚ್ಚರಿಕಲಾಯಿತು. ತಮ್ಮದು ಧರ್ಮಪ್ರಧಾನ ರಾಜ್ಯವಲ್ಲವೆಂದು ಕಾಂಗ್ರೆಸಿಗರು ಎಂದಿನಿಂದಲೂ ಹೇಳುತ್ತ ಬಂದಿದ್ದಾರೆ, ಅಂಥ ರಾಜ್ಯದಲ್ಲಿ ಜಾತಿ, ನಂಬಿಗೆ ಪದ್ಧತಿಗಳಿಗೆ ಎಡೆಯಿಲ್ಲ! ಆದರೆ ಬಹಳ ಜನ ಹಿಂದು ಶೀಖರು ತದ್ವಿರುದ್ಧವಾಗಿ ನಡೆದುಕೊಳ್ಳುತ್ತಿದ್ದಾರೆ. ಎರಡು ರಾಜ್ಯಗಳೂ ಹದತಪ್ಪಿ ನಡೆದರೆ ಅದರಿಂದ ಎರಡರ ನಾಶವೂ ಸಂಭವಿಸುವುದು.

ಹಿಂದಿರುಗಲು ಕರಾರು

ಒಬ್ಬ ಗೆಳೆಯ ಗಾಂಧಿಯವರಿಗೆ ಹೀಗೆ ಬರೆದಿದ್ದ: “ಪರಿಸ್ಥಿತಿಯ ಒತ್ತಾಯಕ್ಕೊಳಗಾಗಿ, ಬೆಲೆಬಾಳುವ ಮಾನವ ಜೀವಗಳನ್ನು ರಕ್ಷಿಸಲು ೧೭ ನೆಯ ಅಗಸ್ಟಿನಲ್ಲಿ ನಾವು ಲಾಹೋರನ್ನು ಬಿಡಬೇಕಾಗಿ ಬಂದಿತು; ಕುಟುಂಬ ಸಹಿತ ದಿಲ್ಲಿಯ ಒಬ್ಬ ನೆಂಟರಲ್ಲಿ ಉಳಿದುಕೊಳ್ಳಬೇಕಾಯಿತು. ನಮ್ಮ ಮನೆಯನ್ನು ಲೂಟಿಮಾಡಲಾಯಿತು- ಪಾಕಿಸ್ತಾನ ಸರಕಾರವು ನಮ್ಮ ಅಂಗಡಿಯನ್ನು ಒಬ್ಬ ಮುಸಲ್ಮಾನನಿಗೆ ಕೊಟ್ಟಿತು. ದಿಲ್ಲಿಯಲ್ಲಿ ನಿರಾಶ್ರಿತರ ಮಂತ್ರಿಶಾಖೆಯನ್ನು ಕಂಡು ತಾ. ೯-೯-೪೭ ರಲ್ಲೇ ನಮ್ಮ ಸಾಮಾನುಗಳನ್ನು ತರಲು ಸಹಾಯ ಮಾಡಬೇಕೆಂದು ಕೇಳಿದ್ದೆವು. ಆಗ ಎಲ್ಲ ಸಾಮಾನುಗಳೂ ಸರಿಯಾಗಿದ್ದವು. ಆದರೆ ಆ ಪ್ರಾರ್ಥನೆಗೆ ಉತ್ತರವೇ ದೊರೆಯಲಿಲ್ಲ. ಅದರ ಮೇಲೆ ಲೂಟಿಯಾದ ಸುದ್ದಿ ಬಂತು. ಆಗ ಪಾಕಿಸ್ತಾನ ಹಿಂದುಸ್ತಾನಗಳಲ್ಲಿ, ಸ್ವಸ್ಥಾನಕ್ಕೆ ತೆರಳಬಯಸುವವರಿಗೆ ಸರ್ವ ಸಹಾಯವನ್ನು ಒದಗಿಸಿ, ಅವರಿಗೆ ತಮ್ಮ ವ್ಯಾಪಾರವನ್ನು ಪುನಃ ಪ್ರಾರಂಭಿಸಲವಕಾಶ ಮಾಡಿಕೊಟ್ಟು ಸಂರಕ್ಷಣೆ ಕೊಡಬೇಕೆಂಬ ಒಪ್ಪಂದವಾಗಿದ್ದಿತು. ಅದರ ಪ್ರಕಾರ ನಮ್ಮ ತಂದೆ ಅನಂತರ ಡಿಸೆಂಬರ ೧ ಕ್ಕೆ ಲಾಹೋರಿಗೆ ಹೋಗಿ ಪಾಕಿಸ್ತಾನ ಅಧಿಕಾರಿಗಳನ್ನು ಕಂಡು ನಮ್ಮ ಕಾರಖಾನೆಗಳನ್ನು ತೆರೆದು ಕೆಲಸ ಮಾಡಲು ಅನುಮಾಡಿಕೊಡಬೇಕೆಂದು ಅರ್ಜಿಕೊಟ್ಟರು. ಲಾಹೋರಿನ ಉದ್ಯೋಗ ನಿರ್ದೇಶಕನು ಅಪ್ಪನೆ ಕೊಡಲಿಲ್ಲವೆಂದು ನಮ್ಮ ಪ್ರತಿನಿಧಿಯಿಂದ ತಿಳಿದು ಬಂದಿತು. (ಅವರಿಗೆ ಅವರ ಒಡೆಯತನವನ್ನು ಬಿಟ್ಟು ಕೊಡಲಾಗಿದ್ದಿಲ್ಲವಾದರೂ) ಅದು ೧೦ ಜನ ನಿರಾಶ್ರಿತರಿಗೆ ಒಟ್ಟಿಗೆ ಕೊಡಲಾಗಿದೆಯೆಂದೂ ಕೊಟ್ಟ ನಿರ್ಣಯವನ್ನು ಮಾರ್ಪಡಿಸಲಾಗುವುದಿಲ್ಲವೆಂದೂ ನಿರ್ದೇಶಕ ಉತ್ತರಿಸಿದನು. ಈ ಪಾಕಿಸ್ತಾನ ಸರಕಾರದ ವಚನ ಮತ್ತು ವ್ಯವಸ್ಥೆಯಲ್ಲಿದೆ ಯಾರಿಗೂ ತಾವು ಹೊರಟ ಬಳಿಕೆಂದು ಹೇಳಲಿಲ್ಲವೆಂಬುದೇ ಗಾಂಧಿಯವರ ಉತ್ತರ. ಕೆಲವು ಮುಸ್ಲಿಮರು ಹಿಂದು ಶೀಖ ನಿರಾಶ್ರಿತರ ಪುನರ್ವಸತಿಗೆ ಪ್ರಯತ್ನ ಮಾಡುತ್ತಿದ್ದಾರೆಂಬುದು ಅವರಿಗೊಂದು ಸಂತೋಷದ ಸಂಗತಿ. ಆದರೆ ಅವರ ಪುನರ್ನಿರ್ಗಮನಕ್ಕೆ ಉಚಿತ ಕಾಲ ಪ್ರಾರಂಭವಾಗಿಲ್ಲ. ಅವರೆಂದು ಸುರಕ್ಷಿತವಾಗಿ ಹಿಂದಿರುಗಬಹುದೆಂಬುದನ್ನು ಅವರಿಗೆ ತಾವು ಹೇಳುವೆವೆಂದು ಗಾಂಧಿಯವರೆಂದರು. ತಾವು ಹೇಳಿದ ಮುಸ್ಲಿಂ ಗೆಳೆಯರು ಮತ್ತು ತಾವೂ ಕೂಡ ಪೊಡಬ ಗುಂಪಿನೊಡನೆ ನಿರ್ಗಮಿಸಬಹುದೆಂದು ಅವರು ಅಭಿಪ್ರಾಯಪಟ್ಟರು.

ಪೂರ್ವ ಆಫ್ರಿಕದಲ್ಲಿ ಹಿಂದೀಯರು

ಆಮೇಲೆ, ಗಾಂಧಿಯವರು ಪೂರ್ವ ಆಫ್ರಿಕದತ್ತ ಹೊರಳಿದರು. ಬಹಳ ಕಷ್ಟಪಟ್ಟು ಶೀಖರು ರೇಲ್ವೆ ಹಾಕಿದ್ದರು. ಶೀಖರದೊಂದು ಸುಹಸಿ ಜಾತಿ. ಸ್ಥಳೀಯ ಶಾಸನ ಸಭೆಗೀಗ ಒಂದು ಹಿಂದೀ ವಿರುದ್ಧ ಗೊತ್ತುವಳಿ ಬಂದಿದೆ. ಭಾರತೀಯರಾದ ಹಿಂದು ಮುಸ್ಲಿಮರು ಯುರೋಪಿಯನ್ನರಿಗಿಂತ ಮೊದಲೇ ಅಲ್ಲಿ ಹೋಗಿ ನೆಲಸಲಾರಂಭಿಸಿದ್ದರು. ಕೈಯಲ್ಲಿ ಕೋವಿ ಹಿಡಿದು ಅವರು ಅಲ್ಲಿಯ ಸತ್ವಹೀರಲೆಂದು ಹೋದವರಲ್ಲ. ಅವರು ವ್ಯಾಪಾರಿಗಳು. ಮೂಲ ನಿವಾಸಿಗಳೊಡನೆ ಅವರ ಸಖ್ಯ ಬೆಳೆದು ಹೋಗಿದೆ. ನಡುವೆ ತಲೆಹಾಕಿದವರೆಂದು ಹೇಳುವುದು ಯೋಗ್ಯವಲ್ಲ. ಪೂರ್ವ ಆಫ್ರಿಕದಲ್ಲಿರುವ ಹಿಂದೀ ಪ್ರತಿನಿಧಿಗಳು ಪಂಡಿತ ನೆಹರೂ ಅವರಿಗೆ ತಂತಿಕಳುಹಿ, ಅದರ ನಕಲೊಂದನ್ನಿತ್ತಿ ಗಾಂಧಿಯವರಿಗೆ ಅರ್ಪಿಸಿ, ಹಿಂದೀ ವಲಸೆಗಾರರ ಪರವಾಗಿ ಹಿಂದುಸ್ತಾನ ಸರಕಾರವು ಈ ವಿಷಯದಲ್ಲಿ ಕೈಹಾಕಬೇಕೆಂದು ಪ್ರಾರ್ಥಿಸಿಕೊಂಡರು. ಹಿಂದುಸ್ತಾನವು ಸ್ವತಂತ್ರವಾಗಿದೆ. ತನ್ನ ಜನಾಂಗದವರ ವಿರುದ್ಧ ಕಾಯಿದೆಗಳನ್ನು ಅದು ಸಹಿಸದು. ಹಿಂದುಸ್ತಾನದ ಸಖ್ಯವನ್ನು ಕಳೆದು ಕೊಳ್ಳುವುದು ಬುದ್ಧಿಗೇಡಿತನವೆಂದು ಪೂ. ಆಫ್ರಿಕವು ತಿಳಿದುಕೊಳ್ಳಲೆಂದು ಗಾಂಧಿಯವರು ಹಾರೈಸಿದರು. ಪೂ. ಆಫ್ರಿಕದಲ್ಲಿರುವ ಹಿಂದೀಯರಿಗೆ ಮಾಡಲು ಸಾಧ್ಯವಾದದ್ದನ್ನೆಲ್ಲ ಪಂ. ನೆಹರೂ ಅವರು ಮಾಡುವರೆಂದು ತಮಗೆ ನಂಬಿಗೆಯಿದೆ ಎಂದು ಅವರೆಂದರು.

ಬಿರ್ಲಾ ಭವನ, ಹೊಸದಿಲ್ಲಿ, ೧೮-೧೨-೪೭

ಅಸ್ತ ವ್ಯಸ್ತ ವಾದಸರಣಿ

ತಮ್ಮ ಪ್ರಾರ್ಥನೋತ್ತರ ಭಾಷಣದಲ್ಲಿ ಮೇಲಿನ ಸಂಜೆ, “ಇಂಗ್ಲೀಷಿನಲ್ಲಿ ಬರೆದ ಪತ್ರಗಳನ್ನು ಮತ್ತೆ ಮತ್ತೆ ಸ್ವೀಕರಿಸಲು ನನಗೆ ವಿಷಾದವಾಗುತ್ತದೆ” ಎಂದು ಗಾಂಧಿಯವರ ಬಾಯಿಂದ ಬಂದುದನ್ನು ಕೇಳಿ ತನಗೆ ಸಖೇದಾಶ್ಚರ್ಯವಾಯಿತೆಂದು ಒಬ್ಬ ಪತ್ರಕಾರ ಬರೆದ ಕಾಗದವನ್ನು ಗಾಂಧಿಯವರು ಪರಾಂಬರಿಸಿದರು. ಭಾರತವು ಎಲ್ಲರ ಗೆಳೆಯ ಎಂದು ಗಾಂಧಿಯವರು ಹೇಳಿದ್ದರು. ಮುಸ್ಲಿಂ ಮತ್ತು ಇಂಗ್ಲೀಷರಿಬ್ಬರಿಗೂ ಅವರು ಸಮನಾದ ಗೆಳೆಯರಾಗಿದ್ದರೆ, ಉರ್ದುವನ್ನು ಉಳಿಸಲೂ ಇಂಗ್ಲೀಷನ್ನು ಸ್ಥಾನಚ್ಯುತಿಗೊಳಿಸಲೂ ಹೇಗೆ ಬಯಸುತ್ತಿದ್ದಾರೆ? ಈ ಪ್ರಶ್ನೆಯನ್ನು ಕಂಡು ಗಾಂಧಿಯವರಿಗೆ ಆಶ್ಚರ್ಯವಾಯಿತು. ಅದು ವಸ್ತುಸ್ಥಿತಿಯ ಅರಿವಿದ್ದವರು ಬರೆದಂತಿದ್ದಿಲ್ಲ. ಇಂಗ್ಲೀಷೊಂದು ಅಂತರ್ರಾಷ್ಟ್ರೀಯ ಭಾಷೆ; ಆದರೆ ಅದೆಂದೂ ಹಿಂದುಸ್ತಾನದ ರಾಷ್ಟ್ರಭಾಷೆಯಾಗಲಾರದು. ಇಂಗ್ಲೀಷೆಂಬುದು ಪರಭಾಷೆ; ಉರ್ದು ಹಾಗಲ್ಲ. ಉರ್ದುವು ಭಾರತದಲ್ಲೇ ರೂಪಗೊಂಡದ್ದೆಂದು ತಮಗೆ ಹೆಮ್ಮೆ ಇರುವದಾಗಿ ಗಾಂಧಿಯವರೆಂದರು. ಅದೊಂದು ಹಿಂದೀಯ ಭಾಷೆ. ಮೊದಲು ಮುಸ್ಲಿಂ ಆಳಿಕೆಯಲ್ಲಿ ಮಿಲಿಟರಿ ಶಿಬಿರಗಳಲ್ಲಿ ಬಳಸುತ್ತಿದ್ದ ಭಾಷೆಯದು. ಮಿಲಿಟರಿಯಲ್ಲಿ ಹಿಂದೀಯರೇ ಬಹಳವಾಗಿದ್ದರು— ಅವರಲ್ಲಿ ಹಿಂದುಗಳೂ ಇದ್ದರು. ಮುಸ್ಲಿಮರೂ ಇದ್ದರು. ಮುಸ್ಲಿಂ ಅರಸರು ಭಾರತದಲ್ಲಿ ನಲಸಿನಿಂದವರು. ಬ್ಯಾರಿಸ್ಟರಾಗಿ ಗಾಂಧಿಯವರು ಭಾರತಕ್ಕೆ ಬಂದೊಡನೆ ಅವರಿನ್ನೂ ಚಿಕ್ಕವರಿದ್ದರು. ೨ ವರ್ಷ ಭಾರತದಲ್ಲುಳಿದ ನಂತರ ಅವರು ದ. ಆಫ್ರಿಕಕ್ಕೆ ತೆರಳಿದರು. ಅಲ್ಲಿ ಅವರು ೨೦ ವರ್ಷ ಬಾಳಿದರು. ದ. ಆಫ್ರಿಕದಿಂದ ಹಿಂದುಸ್ತಾನಕ್ಕೆ ಬಂದಂದಿನಿಂದ ಮನೆಯಲ್ಲಿದ್ದವರೊಂದ ಅವರ, ನಾಗರಿ ಇಲ್ಲವೆ ಉರ್ದುಲಿಪಿಯಲ್ಲಿ ಬರೆದ, ಉತ್ತರದಲ್ಲಿ ಹಿಂದು ಮುಸ್ಲಿಮರಿಂದ ಬಳಸಲ್ಪಡುವ ಭಾಷೆಯಲ್ಲದೆ ಬೇರಾವುದೂ ಭಾರತದ ರಾಷ್ಟ್ರಭಾಷೆಯಾಗಲಾರದೆಂದು ಸಾರುತ್ತಲೇ ಬಂದಿದ್ದಾರೆ. ಅದು ತುಲಸೀದಾಸನ ಭಾಷೆಯಾಗಿತ್ತು. ಕಬೀರನು ತನ್ನ ಕಾಲದಲ್ಲಿ ಕೂಡ ಅರಬ್ಬೀ ಮತ್ತು ಪಾರಸೀ ಶಬ್ದಗಳನ್ನು ಬಳಸಲು ಹಿಂದೆಮುಂದೆ ನೋಡಲಿಲ್ಲ. ದೇಶವಿಭಾಗದೊಂದಿಗೆ ಆ ಭಾಷೆಯು ಲಿಪಿದ್ವಯದಲ್ಲಿ ಬರೆಯಲ್ಪಡುತ್ತದೆ. ಪ್ರಾಂತಭಾಷೆಗಳು ಬೆಳೆದು ಪುಷ್ಟವಾಗಲು ಶಕ್ತವಾಗಬೇಕು. ಅಖಿಲ ಭಾರತ ಭಾಷೆ ಅಥವಾ ರಾಷ್ಟ್ರಭಾಷೆಯು ಇಂಗ್ಲೀಷಿನ ಸ್ಥಾನವನ್ನು ಆಕ್ರಮಿಸಬೇಕು. ಬೇರಿದ್ದರೆ ಇಂಗ್ಲೀಷು ಎಲ್ಲ ಹಿಂದೀಯ ಭಾಷೆಗಳ ಪ್ರಗತಿಗೂ ವಿಘ್ನಕಾರಿಯೆನಿಸಿದೆ. ಇಂಗ್ಲೀಷರ ಆಳಿಕೆಯು ಅವಸಾನದೊಡನೆ ಇಂಗ್ಲೀಷು ಭಾಷೆಯು ಇಲ್ಲಿಂದ ತೊಲಗಬೇಕು. ಅದರ ಮುಕ್ತನಾದ, ಅದ್ವಿತೀಯವಾದ ಸ್ಥಾನವೊಂದರೆ, ಅಂತರ್ರಾಷ್ಟ್ರೀಯ ವಾಗ್ವ್ಯವಹಾರ ಸಾಧನವಾಗಿರುವುದು. ಅರಬ್ಬೀ ಪಾರಸೀ ಶಬ್ದ ಮತ್ತು ಕೆಲಮಟ್ಟಿಗೆ ವ್ಯಾಕರಣ ಇವುಗಳಿಂದ ಬಂದುದು ಉರ್ದುಭಾಷೆ. ಹಿಂದಿಯು ಅರಬ್ಬೀ ಪಾರಸೀಶಬ್ದಗಳನ್ನು ಹೊರದೂಡುವ ಪ್ರವೃತ್ತಿ ತೋರಿತು. ಅರಬ್ಬೀ ಇಲ್ಲವೆ ಪಾರಸೀ ಭಾಷೆಗಳ ಪ್ರಭಾವಕ್ಕೊಳಗಾಗದೆ ತನ್ನ ವ್ಯಾಕರಣ ರಚನೆಯನ್ನು ಕಾಯ್ದುಕೊಂಡು ಹಿಂದಿ ಮತ್ತು ಉರ್ದು ಈ ಎರಡರ ಒಕ್ಕಟ ಮಿಶ್ರಣವೇ ಹಿಂದುಸ್ತಾನಿ.

ಕೇವಲ ಅಜ್ಞಾನ

ಸರ ತೇಜಬಹದ್ದೂರ ಸಪ್ರೂ ಅವರಿಗೆ ಉರ್ದುವನ್ನು ಮರೆಯಲು ಕಷ್ಟವಾದರೆ, ದಕ್ಷಿಣ ಭಾರತದವರಿಗೆ ಇಂಗ್ಲೀಷನ್ನು ಮರೆಯುವುದು ಕಷ್ಟವಾಗಲಿಕ್ಕಿಲ್ಲವೆ? ಎಂದು ಪತ್ರಕಾರ ಕೇಳಿದ್ದ. ಈ ಪ್ರಶ್ನೆಯು ಪುನಃ ಅಜ್ಞಾನವನ್ನೇ ಬಯಲುಮಾಡುತ್ತದೆ. ತಾವು ಮದ್ರಾಸಿಗೆ ಅನೇಕ ಸಲ ಹೋಗಿರುವುದಾಗಿಯೂ (ತಾವು ಆಗ ಮದ್ರಾಸಿಗನೆನಿಸಿಕೊಂಡಿದ್ದಿಲ್ಲ) ಆಗ ಜಟಕಾವಾಲನಿಗೆ ಇಂಗ್ಲೀಷಿನಿಂದ ತಮಗೇನನ್ನೂ ತಿಳಿಸಲಾಗದೆ ಹರಕು ಮುರುಕು ಹಿಂದುಸ್ತಾನಿಯಲ್ಲೇ ಮಾತನಾಡಿ ಕಾರ್ಯ ನಿರ್ವಹಿಸಿಕೊಂಡದ್ದೆಂದೂ ಗಾಂಧಿಯವರೆಂದರು. ಉರ್ದುವು ಸರ ತೇಜರ ಮಾತೃಭಾಷೆಯಾಗಿರುವಂತೆ ಇಂಗ್ಲೀಷು ದಕ್ಷಿಣ ಹಿಂದುಸ್ತಾನದವರ ಮಾತೃಭಾಷೆಯಲ್ಲ. ಲಾಲಾ ಲಜಪತರಾಯರು ಗಾಂಧಿಯವರ ಗೆಳೆಯರು. ಅವರನ್ನು ಗಾಂಧಿಯವರು ಯಾವಾಗಲೂ ಶುದ್ಧ ಹಿಂದಿಯನ್ನು ಕಲಿತು ಎಂದು ಮಾತಾಡುವಿರಿ, ಬರೆಯುವಿರಿ ಎಂದು ಕೇಳುತ್ತಿದ್ದರು. ಲಾಲಜಿ ಅದು ತಮ್ಮಿಂದ ಸಾಧ್ಯವಿಲ್ಲವೆಂದರು. ಆದರೂ ಲಾಲಜಿಯು ಕಟ್ಟಾ ಆರ್ಯ ಸಮಾಜ ಭಕ್ತರು. ತಮ್ಮ ಮಾತೃಭಾಷೆ ಉರ್ದುವೆಂದೂ ಅದರಲ್ಲಿ ಸಭಿಕರನ್ನು ಅಚ್ಚರಿಗೊಳಿಸುವಂತೆ ಮಾತಾಡಬಲ್ಲೆನೆಂದೂ ಅವರು ಹೇಳಿದರು. ಗಾಂಧಿಯವರು ೨ ಸಲ ಹಿಂದೀ ಸಾಹಿತ್ಯ ಸಮ್ಮೇಲನದ ಅಧ್ಯಕ್ಷರಾಗಿದ್ದರು. ಆಗ ಅವರು ಗಾಂಧಿಯವರು ಹೇಳಿದ ಲಕ್ಷಣದ ಪ್ರಕಾರ ರಾಷ್ಟ್ರ ಭಾಷೆಯನ್ನು ರಚಿಸಬೇಕೆಂಬುದನ್ನು ಸ್ವಾಗತಿಸಿದ್ದರು. ಅವನ್ನವರೀಗೇಕೆ ತಿರಸ್ಕರಿಸುತ್ತಿದ್ದಾರೆ?

ಹಿಂದೀ ಮತ್ತು ಉರ್ದುಗಳ ಮಿಶ್ರಣವಾಗಬೇಕೆಂಬ ಇಚ್ಛೆಯಿರುವುದರಿಂದ ತಾವೇನಾದರೂ ಹಿಂದುತ್ವದಲ್ಲಿ ಕಡಿಮೆಯಾದೆವೇನೆಂದು ಗಾಂಧಿಯವರು ಪ್ರಶ್ನಿಸುತ್ತಾರೆ.

ಧರ್ಮ ನಿಷೇಧ

ದುಃಖದಿಂದ ಅಜ್ಞೇರವ ಗಲಭೆಯತ್ತ ಗಾಂಧೀಜಿ ತಿರುಗಿದರು. ಒಕ್ಕೂಟದಲ್ಲಿಯ ಮುಸಲ್ಮಾನರನ್ನು ಕೊಂದು ಇಲ್ಲದೆ ಓಡಿಸಿ ಹಿಂದೂ ಧರ್ಮವನ್ನು ರಕ್ಷಿಸಬಹುದೆಂದು ಅವರು ಆಲೋಚಿಸಿರಬಹುದೆ? ಉರ್ದು ಲಿಪಿ ಇಲ್ಲವೆ ಭಾಷೆಯನ್ನು ಬಿಟ್ಟು ಅ. ಭಾ. ಭಾಷೆಗೆ ಸೇವೆ ಸಲ್ಲಿಸಬಲ್ಲೆವೆಂದು ಅವರು ಆಶಿಸಿದರೆ? ಅವರೊಡನೆ ತಾವೆಂದೂ ಬರಲಾರೆವೆಂದರು ಗಾಂಧೀಜಿ. ತಾವು ತೀರಿದ ಬಳಿಕ ಅವರಿಗೆ ತಮ್ಮ ಮಾತುಗಳು ನೆನಪಾದಾವೆಂದು ಅವರೆಂದರು. ಎಲ್ಲ ಧರ್ಮಗಳೂ ಒಳ್ಳೆಯವರಾಗಿಯೂ ಪ್ರಯೋಜನಕಾರಿಗಳಾಗಿಯೂ ಇರಬೇಕೆಂದು ಜನರಿಗೆ ಹೇಳಿವೆ. ಅಸಹನೆಯು ಧರ್ಮದ ನಿಷೇಧವೇ ಸರಿ.

[೭ನೆಯ ಪುಟದಿಂದ]

ಕೆಲಸದ ಆಳುಗಳ ಕೊರತೆಯೊಂದು ಆ ಕೆಲಸ ಆಗದೆಂದು ಗೊಣಗಿದನು. ಆದರೆ ಅಲ್ಲಿದ್ದ ಅಸ್ಪೃಶ್ಯ ಕೃಷಿಕಾಯರು ಹೆಗಲಿಗೆ ಹೆಗಲು ಹಚ್ಚಿ ದುಡಿಯಬಹುದಿತ್ತು. ಹಾಗೆ ತಮ್ಮ ದುಡಿಮೆಗೆ ಪ್ರತಿಫಲವನ್ನು ಗಳಿಸಿಕೊಳ್ಳಬಹುದಿತ್ತು. ತಾವು ಸಾಕಷ್ಟು ದುಡಿಯದಿದ್ದರೂ ತಮಗೆ ಕೂಲಿಯಲ್ಲಿ ಒಂದಿಷ್ಟು ಕಡಿತವಾಗಕೂಡದಾಗಿ ಈ ನಿರಾಶ್ರಿತರ ಹಟ. ಇದನ್ನು ನಿವಾರಿಸುವದೆಂತು? ಇನ್ನುಳಿದ ಕಡೆಯಲ್ಲೂ ಇದೇ ಕತೆ.

(ಮುಂದುವರಿಯುವದು)

ಗೋಮಂತಕದ ಬಾಗಿಲುಗಳು

ಹಿಂದುಸ್ತಾನಿ “ಹರಿಜನ” ಕ್ಕೆ ಬರೆದ ಪತ್ರದಲ್ಲಿ [illegible] ಗೋಮಂತಕದ [illegible] ಬಾಗಿಲುಗಳ [illegible] ಒಂದು [illegible] ಪ್ರಬಂಧವನ್ನು [illegible]. [illegible] ಬಾಗಿಲುಗಳನ್ನು [illegible] ಬಾಗಿಲುಗಳ [illegible] ಬಾಗಿಲುಗಳನ್ನು [illegible] ಮುಂದೆ [illegible] ಎಂದು ಹೇಳುತ್ತಿದ್ದಾರೆ [illegible]

ಹೊಸದಿಲ್ಲಿ, ಮೋ. ಕ. ಗಾಂಧಿ

೨೨-೧೨-೪೭

ಹಳ್ಳಿಗಳಲ್ಲಿ ಧಾನ್ಯಸಂಗ್ರಹ

[ಮೋ. ಕ. ಗಾಂಧಿ]

ನಿಯಂತ್ರಣ ತೆಗೆದೊಡನೆ [illegible] ಕಾರಣದಿಂದ [illegible] ಮತ್ತು ಎದುರಿಸಲು [illegible] ಗ್ರಾಮ ಪಂಚಾಯತು [illegible] ಧಾನ್ಯವನ್ನು [illegible] ಸಂಗ್ರಹಿಸುವದು ಅವಶ್ಯಕವೆಂದು [illegible] ಮೂಲ ಪತ್ರವು [illegible] “ಹರಿಜನ”ದಲ್ಲಿ ಪ್ರಕಟಿಸಿ [illegible] ಇಲ್ಲಿ ಅವರ [illegible] ಕೊಡಲಾಗಿದೆ. [illegible] ಕೊಡುವವನ್ನು [illegible] ಈ ಕ್ರಮವನ್ನು ಪ್ರಾರಂಭಿಸಿದುದರಿಂದ ಹಳ್ಳಿಗಳಲ್ಲಿ ಧಾನ್ಯವನ್ನು ಸಂಗ್ರಹಿಸುವ [illegible] ಉಂಟಾಗುವಷ್ಟು ರಾಷ್ಟ್ರಕ್ಕೆ [illegible]. ಆಗಲೆ ಹೇಳಿದ ಕಾರಣದಿಂದ ಹಳ್ಳಿಗಳಲ್ಲಿ ಧಾನ್ಯವನ್ನು ಉಳಿಸಿಟ್ಟುಕೊಳ್ಳುವದು ಅಗತ್ಯವಿದೆ. [illegible] ಮಾರಾಟಗಾರರೂ [illegible] ವಿವೇಕ ಇಲ್ಲದವರೂ [illegible] ದೊಂದು [illegible] ಪ್ರಾಮಾಣಿಕತೆ ಸಾರ್ವತ್ರಿಕವೆನಿಸುವತನಕ, ಕೊಳ್ಳುವವನು ವಂಚನೆಗೊಳಗಾಗಬಾರದು. ಒಂದು ರಾಷ್ಟ್ರದ ಆರ್ಥಿಕಸ್ಥಿತಿಯನ್ನು [illegible] ಮೇಲೆ [illegible] ನಂತರ ಮತ್ತು ಎಲ್ಲ ವರ್ಗಗಳಿಗೂ ಜೀವನದ ಅವಶ್ಯಕವಸ್ತುಗಳನ್ನೊದಗಿಸಿಕೊಳ್ಳಲು ಅಗತ್ಯವಾದ ವೆಚ್ಚಕ್ಕೆ ಸರಿಯಾದ ಆದಾಯವಿದ್ದರೆ ಆಗ [illegible] ಇಲ್ಲವೆ [illegible] ಎಂಬ ಪ್ರಶ್ನೆ [illegible].

ಹೊಸದಿಲ್ಲಿ ೨೨-೧೨-೪೭

ಜುನಾಗಡ ನವಾಬರ ನಿಧಿ ಜಪ್ತಾಯಿತು

ಭಾರತ ಸರಕಾರದ ವಿಶೇಷಾಜ್ಞೆ

ಜುನಾಗಡದ ನವಾಬ, [illegible] ಮತ್ತು [illegible] ಅಧಿಕಾರಿಗಳ ಹೆಸರಿನಲ್ಲಿದ್ದ ಆಸ್ತಿಯನ್ನೆಲ್ಲ [illegible] ಸರಕಾರದ ವಶಕ್ಕೆ ತೆಗೆದುಕೊಳ್ಳಬೇಕೆಂಬ ಒಂದು ವಿಶೇಷ ಆಜ್ಞೆಯನ್ನು ಹಿಂದುಸ್ತಾನ ಸರ್ಕಾರ [illegible] ಹೊರಡಿಸಿದ್ದಾರೆ.

ಬ್ಯಾಂಕುಗಳಲ್ಲಿಟ್ಟ [illegible] ಕಂಪನಿಗಳಲ್ಲಿ [illegible] ಇವುಗಳೆಲ್ಲ ಕೂಡಿ ಈ [illegible] ಲಕ್ಷವಾಗುತ್ತದೆ. ನವಾಬರ [illegible] ಹಿಂದುಸ್ತಾನ [illegible] ಬ್ಯಾಂಕಿನ [illegible] ಆಗಿದೆ. ಜುನಾಗಡ [illegible] ಕೇಂದ್ರ ಸರಕಾರಕ್ಕೆ [illegible] ಈ ಆಜ್ಞೆಯು ಅಮಲಿನಲ್ಲಿ ಬಂದಿದೆ.

ಪಾಕಿಸ್ತಾನಕ್ಕೆ ಹೋಗುವ [illegible] ಕಾಲದಲ್ಲಿ [illegible] ಬ್ಯಾಂಕಿನಲ್ಲಿದ್ದ [illegible] ಆ ಬ್ಯಾಂಕಿನವರು [illegible] ಪಾಕಿಸ್ತಾನ ಸರಕಾರದವರು [illegible] ಆಜ್ಞೆಯನ್ನು [illegible] ಆ ಹಣವನ್ನು [illegible] ಕೊಟ್ಟರೆಂದು ತಿಳಿದುಬರುತ್ತದೆ.

ಗುರುಗಾಂವದ ಸಮೀಪ ಜೆಸರಾದಲ್ಲಿ ಮೇವರನ್ನು ಕುರಿತು ಗಾಂಧೀಜಿಯ ಭಾಷಣ

(೧೯—೧೨—೪೭)

ಗುರುಗಾವ ತಹಶೀಲಿನ ಜೆಸರಾ ಗ್ರಾಮದಲ್ಲಿ ಕೂಡಿದ ಮೇವ ಜನರ ಒಂದು ಸಭೆಯಲ್ಲಿ ಭಾಷಣ ಮಾಡುತ್ತ ತಮ್ಮ ದನಿಯ ಪ್ರಭಾವ ವಿಂದು ಮೊದಲಿನಷ್ಟು ಇಲ್ಲೆಂದು ಗಾಂಧೀಜಿ ನುಡಿದರು. "ಒಂದು ಕಾಲವಿತ್ತು. ಆಗ ನಾನು ಹೇಳಿದ್ದೆಲ್ಲವೂ ಕಾರ್ಯರೂಪಕ್ಕೆ ಬರುತ್ತಿತ್ತು. ಅದಕ್ಕೆ ಹಿಂದಿನಷ್ಟು ಶಕ್ತಿಯಿದ್ದಿದ್ದರೆ ಇಂಡಿಯಾ ದಿಂದ ಒಬ್ಬನೇ ಒಬ್ಬ ಮುಸಲ್ಮಾನನು ಪಾಕಿಸ್ತಾನಕ್ಕೆ ಹೋಗುವದಾಗಲಿ ಒಬ್ಬನೇ ಒಬ್ಬ ಸೀಖ ಇಲ್ಲವೆ ಹಿಂದು ಪಾಕಿಸ್ತಾನದಲ್ಲಿರುವ ತನ್ನ ಮನೆ ಮಾರು ಬಿಟ್ಟು ಹಿಂದುಸ್ತಾನದಲ್ಲಿ ಆಶ್ರಯ ಪಡೆಯುವದಾಗಲಿ ಅವಶ್ಯವಾಗುತ್ತಿದ್ದಿಲ್ಲ. ಈಚೆಗೆ ಸಂಭವಿಸಿದ್ದು- ಈ ಕೊಲೆ, ಸುಲಿಗೆ, ಕೊಳ್ಳೆ, ಕನ್ಯಾಪಹಾರ, ಬಲವಂತದ ಧರ್ಮಾಂತರಮತ್ತು ಅದಕ್ಕೂ ಹೀನವಾದ ಕೃತ್ಯಗಳ ತಾಂಡವ- ಎಲ್ಲ ಬರ್ಬರತೆಯಲ್ಲದೆ ಬೇರಲ್ಲ. ನಿಜ, ಹಿಂದೆ ಇಂಥ ಸಂಗತಿಗಳು ನಡೆದದ್ದೇ ಇಲ್ಲವೆಂದಲ್ಲ; ಆದರೆ ಇಷ್ಟು ಸರ್ವವ್ಯಾಪಿಯಾದ ಜಾತೀಯ ಪಕ್ಷಪಾತ ಹಿಂದೆಂದೂ ಇದ್ದಿಲ್ಲ. ಇಂಥ ಘಟನೆಗಳ ಕತೆ ಕೇಳಿ ಕೇಳಿ ನನ್ನ ಹೃದಯ ನಾಚಿಕೆಯಿಂದ ತುಂಬಿ ಹೋಗಿದೆ. ಮಸೀದೆ, ಗುಡಿ, ಗುರುದ್ವಾರಗಳನ್ನು ನಾಶಗೊಳಿಸಿದ್ದು ಅಪವಿತ್ರಗೊಳಿಸಿದ್ದಂತೂ ಇನ್ನೂ ಹೆಚ್ಚಿನ ಕಲಂಕದ ಕೆಲಸ. ಇಂಥ ಹುಚ್ಚಾಟವನ್ನು ತಡೆಯದೆ ಹೋದರೆ ಅದು ಎರಡೂ ಜಾತಿಗಳಿಗೆ ಮುಳುವಾಗದಿರದು. ಇಂಥ ಉದ್ಭ್ರಾಂತಿ ಇರುವಷ್ಟು ದಿನ ನಾವು ಸ್ವಾತಂತ್ರ್ಯದಿಂದ ದೂರಾತ್ ದೂರತರವಾಗಿ ಉಳಿಯುವೆವು"

"ಇದಕ್ಕೇನು ಉಪಾಯ?" ಗಾಂಧೀಜಿ ಕೇಳಿದರು. ನನಗೆ ಬಂದೂಕಿನ ಬಲದಲ್ಲಿ ವಿಶ್ವಾಸ ವಿಲ್ಲ. ನಾನು ನಿಮಗೆ ಕೊಡಬಲ್ಲ ಒಂದೇ ಆಯುಧ ವೆಂದರೆ ಅಹಿಂಸೆ. ಅದು ಎಂಥೆಂಥ ಆಪತ್ಕಾಲ ದಲ್ಲಿಯೂ ಉಪಯೋಗ ಬೀಳುವಂಥದು. ಅದು ಅಜಯ್ಯವಾದುದು. ಅದೇನೋ ಎಲ್ಲ ಧರ್ಮಗಳಿಗೂ ಸಾಮಾನ್ಯವಾದುದು- ಕ್ರಿಸ್ತ ಧರ್ಮಕ್ಕೂ, ಹಿಂದು ಧರ್ಮಕ್ಕೂ ಎಲ್ಲಕ್ಕೂ. ಆದರೆ ಇಂದು ಅದು ಆಯಾ ಧರ್ಮದ ಅನುಯಾಯಿಗಳಿಂದ ಬರಿ ಬಾಯುಪಚಾರದ ನಾಣ್ಣುಡಿಯಾಗಿ ಮುಂದಲ್ಪಟ್ಟಿದೆ. ಕೃತಿಯಲ್ಲಿ ಎಲ್ಲರೂ ಕಾಡಿನ ಕಟ್ಟಳೆಯನ್ನು ಅನುಸರಿಸುವವರೆ. ಇಂದು ನನ್ನದು ಅರಣ್ಯರೋದನವೆಂದು ತೋರಿತು. ಆದರೆ ಅಹಿಂಸೆಯು- ಪಶುಬಲದ ಶಸ್ತ್ರವನ್ನು ಆತ್ಮಬಲದಿಂದ ಎದುರಿಸುವ. ಉಪದೇಶವಲ್ಲದೆ ಬೇರೊಂದು ಸಂದೇಶ ಕೊಡುವದು ನನ್ನಿಂದಾಗದು."

ಆ ಮೇಲೆ ಗಾಂಧೀಜಿ ಮೇವರ ಪ್ರತಿನಿಧಿಯೊಬ್ಬನು ತಮಗೆ ಓದಿಹೇಳಿದ ಒಂದು ಮನವಿಯನ್ನು ಪ್ರಸ್ತಾವಿಸಿದರು. ಅದರ ಮೇವರ ಅನೇಕ ದೂರುಗಳ ಯಾದಿಯಿತ್ತು, ಅವುಗಳ ಪರಿಹಾರವಾಗಬೇಕೆಂದು ಅವರು ಬೇಡಿಕೊಂಡಿದ್ದರು.

"ಆ ಪತ್ರವನ್ನು ನಿಮ್ಮ ಪಂಜಾಬ್ ಮಂತ್ರಿಯಾದ ಡಾ. ಗೋಪಿಚಂದರ ಕೈಯಲ್ಲಿರಿಸಿದ್ದೇನೆ. ಅದರಲ್ಲಿ ಕಾಣಿಸಿದ ವಿವಿಧ ವಿಷಯಗಳಲ್ಲಿ ಏನು ಕ್ರಮ ಕೈಕೊಳ್ಳುವ ವಿಚಾರವುಂಟೆಂದು ಹೇಳುವ ಕೆಲಸ ಡಾ. ಗೋಪಿಚಂದರದು. ಯಾವನೊಬ್ಬ ಸರಕಾರಿ ಅಧಿಕಾರಿ ಕೆಟ್ಟ ನಡೆ...ನ್ನು ತೋರಿಸಿದ್ದರೆ ಅವನ ವಿರುದ್ಧ ಯೋಗ್ಯ ಕ್ರಮ ತೆಗೆದುಕೊಳ್ಳಲು ಸರಕಾರವೆಂದೂ ಹಿಂಜರಿಯಲಾರದೆಂದು ನನಗೆ ಭರವಸೆಯುಂಟೆಂದಿಷ್ಟೇ ಹೇಳಬಲ್ಲೆ. ಸರಕಾರದ ಕಾರ್ಯವನ್ನು ತಾವೇ ಆಕ್ರಮಿಸಿ ಕಾನು ಹೇಳಿದಂತೆ ಸರಕಾರಿ ಅಧಿಕಾರಿಗಳು ಅದಲು ಬದಲು ನಡೆಸು ಬೇಕೆಂದು ಕೇಳುವ ಅಧಿಕಾರ ಯಾರಿಗೂ ಇಲ್ಲ. ಒಂದು ಜಾತಿಯ ... ಯನ್ನು ವಿರುದ್ಧ ಜಾತಿಗೆ ಧರ್ಮಾಂತರಿಸಿದರೆ ಅಥವಾ ... ಹಾಗಾದರೆ, ಅದು ಅವಳ ಸಮ್ಮತಿಯಿಂದಾಗಿದ್ದರೂ ನಿನ್ನ ಸ್ಪಷ್ಟ ಅಭಿಪ್ರಾಯ. ... ರಾಜ್ಯ ನಡೆಯುವಾಗ ಸಮ್ಮತಿಯಿಂದ ... ಆ ಮಾತಿನ ದುರುಪಯೋಗವೇ ಸರಿ" ಎಂದರು ಗಾಂಧೀಜಿ

"ನನ್ನ ಮಾತುಗಳಿಂದ ನಿಮಗೆ ಈ ದುಃಖ ಕಾಲದಲ್ಲಿ ಸ್ವಲ್ಪವಾದರೂ ಸಮಾಧಾನ ದೊರೆತರೆ ನಾನು ಸಂತುಷ್ಟನಾಗುವೆ" ಎಂದು ಅವರು ಮುಂದೆ ಸಾಗಿದರು. ಅಲ್ವಾರ ಮತ್ತು ಭರತಪುರ ಸಂಸ್ಥಾನಗಳಿಂದ ಹೊರದೂಡಲ್ಪಟ್ಟ ಮೇವ ಜನರ ಬಗ್ಗೆ ಮಾತಾಡುತ್ತ ಅವರೆಂದದ್ದು "ಎಲ್ಲ ... ಹೋಗಿ, ಎಲ್ಲ ಕಡೆಯ್ದ್ದು ... ತಮ್ಮ ಮನೆಮಾರುಗಳಿಂದ ಅಟ್ಟಲ್ಪಟ್ಟ ವರೆಲ್ಲರೂ ಮರಳಿ ಬಂದು ಪರಿಪೂರ್ಣ ಶಾಂತಿ ಸುರಕ್ಷಿತತೆಯಿಂದ ತಮ್ಮ ಹಿಂದಿನ ವೃತ್ತಿಗಳನ್ನು ಪ್ರಾರಂಭಿಸುವ ಆ ಸುದಿನವನ್ನು ನಾನು ಎದುರು ನೋಡುತ್ತಿದ್ದೇನೆ. ಆಗ ನನ್ನ ಹೃದಯ ಆನಂದದಿಂದ ಕುಣಿಕುಣಿದೀತು. ಆ ಆಸೆಯನ್ನು ನಾನು ಬದುಕಿರುವ ವರೆಗೂ ಬಿಟ್ಟುಕೊಡಲಾರೆ. ಆದರೂ ಇಂದು ಅದಕ್ಕೆ ಸ್ಥಿತಿಗತಿ ಸಾಕಷ್ಟು ಅನುಕೂಲವಿಲ್ಲೆಂದು ನಾನು ಒಪ್ಪಿಕೊಳ್ಳಲೇಬೇಕು. ಆ ವಿಷಯದಲ್ಲಿ ತನ್ನ ಕರ್ತವ್ಯವನ್ನು ನೆರವೇರಿಸಲು ಒಕ್ಕೂಟ ಸರಕಾರ ತಪ್ಪಲಾರದೆಂದೂ ಸಂಸ್ಥಾನಗಳು ಒಕ್ಕೂಟ ಸರಕಾರದ ಸೂಚನೆಗೆ ಕಿವಿಕೊಡಲೇ ಬೇಕಾಗುವದೆಂದೂ ನನಗೆ ಧೈರ್ಯವಿದೆ. ಸೇರ್ಪಡೆಯ ಪತ್ರವೇನೂ ಸಂಸ್ಥಾನಿಕರಿಗೆ ಪ್ರಜಾಪೀಡನೆಯ ಅಧಿಕಾರ ಕೊಟ್ಟಿಲ್ಲ. ಸಂಸ್ಥಾನಿಕರಿಗೆ ತಮ್ಮ ಸ್ಥಾನಮಾನಗಳನ್ನು ಉಳಿಸಿಕೊಳ್ಳುವ ಹಂಬಲವಿದ್ದರೆ, ಅವರು ತಮ್ಮ ಪ್ರಜೆಗಳ ಧರ್ಮದರ್ಶಿಗಳಾಗಬೇಕು- ಸೇವಕರಾಗಬೇಕು.

ಮೇವ ಜನರಿಗೆ ಕೆಲ ಉಪದೇಶಪರ ಮಾತುಗಳನ್ನಾಡಿ ಗಾಂಧೀಜಿ ಮುಗಿಸಿದರು. "ಮೇವರೆಂದರೆ ಹೆಚ್ಚು ಕಡಿಮೆ ಕಳ್ಳಕಾಕರ ಜಾತಿಯೆಂದೇ ಕೇಳುತ್ತೇನೆ. ಇದು ನಿಜವಾಗಿದ್ದರೆ ತಮ್ಮ ಚರ್ಯೆಯನ್ನು ಸುಧಾರಿಸಿಕೊಳ್ಳಲು ಅವರು ವಿಶ್ವ ಪ್ರಯತ್ನ ಮಾಡಬೇಕು. ಬೇರೆಯವರು ಬಂದು ಅವರನ್ನು ಸುಧಾರಿಸಿ ನಾಗರಿಕರಾಗಿ ಮಾಡಬೇಕೆಂದು ನಿರೀಕ್ಷಿಸಬಾರದು. ಮೇವರು ಈ ಉಪದೇಶವನ್ನು ತಪ್ಪೆಣಿಸದೆ, ಅದನ್ನು ಯಾವ ಉದ್ದೇಶದಿಂದ ಮಾಡಲಾಗಿದೆಯೋ ಅದೇ ಭಾವನೆಯಿಂದ ಸ್ವೀಕರಿಸಬೇಕೆಂದು ಹಾರೈಸುತ್ತೇನೆ. ಸರಕಾರಕ್ಕೆ ಮಾತ್ರ, ಮೇವರ ಮೇಲಿನ ಈ ಅಪವಾದ ನಿಜವಾಗಿದ್ದರೂ ಅವರನ್ನು ಪಾಕಿಸ್ತಾನಕ್ಕೆ ಓಡಿಸಿ ಬಿಡಲು ಅದು ಯೋಗ್ಯ ಕಾರಣವಾಗಲಾರದೆಂದು ಹೇಳ ಬಯಸುವೆ. ಮೇವರೂ ಒಕ್ಕೂಟ ಹಿಂದುಸ್ತಾನದ ಪ್ರಜೆಗಳೆ. ಅದರಿಂದ ಅವರಿಗೆ ಸ್ವವಿಮೋಚನೆಗೆ ಅವಶ್ಯಕವಾದ ಸಹಾಯವನ್ನಿತ್ತು, ಯೋಗ್ಯ ಶಿಕ್ಷಣವನ್ನೂ ವಸತಿ ಸೌಕರ್ಯಗಳನ್ನೂ ಒದಗಿಸಿ ಸಜ್ಜನರಂತೆ ಬಾಳುವ ಅವಕಾಶವನ್ನು ಕೊಡುವದು ಸರಕಾರದ ಕರ್ತವ್ಯ."

ನಾಲ್ಕು ಮಾತು ಹೇಳಬೇಕೆಂದು ಕೇಳಿಕೊಂಡಾಗ ಡಾ. ಗೋಪೀಚಂದರ ಮೇವರಿಗೆ ಹೀಗೆ ಹೇಳಿದರು: ಒಬ್ಬನೋ ಒಬ್ಬ ಮುಸ್ಲಿಮನನ್ನಾದರೂ ಹಿಂದೀ ಒಕ್ಕೂಟವನ್ನು ಬಿಟ್ಟು ಪಾಕಿಸ್ತಾನಕ್ಕೆ ತೊಲಗುವಂತೆ ಮಾಡುವದು ನನ್ನ ಸರಕಾರದ ಧೋರಣವಲ್ಲ. ಜನರ ಸೇವಕನಾದ ನಾನು ಜನರ ಸಾಮೂಹಿಕ ಇಚ್ಛೆಯನ್ನು ಕಾರ್ಯಕಾರಿಯಾಗಿ ಮಾಡಲು ಬದ್ಧನಾಗಿದ್ದೇನೆ. ದೇಶದ ಲ್ಲಿರುವ ಸಮಸ್ತ ಜಾತಿ ಪಂಗಡಗಳಿಗೂ ಸಮಾನವಾದ ಸಂರಕ್ಷಣೆ ಕೊಡುವದು ನನ್ನ ಕರ್ತವ್ಯ. ನೀವೆಲ್ಲರೂ ಮರಳಿ, ತಮ್ಮ ವೃತ್ತಿಯನ್ನು ಮತ್ತೆ ಪ್ರಾರಂಭಿಸಬೇಕೆಂದು ನನ್ನ ಇಚ್ಛೆ. ಬಂಜರು ಬಿದ್ದಿರುವ ಭೂಮಿಯನ್ನು ಉತ್ತು ನೀವು ಹೆಚ್ಚು ಆಹಾರ ಹುಟ್ಟಿಸಲು ನೆರವಾಗಿರಿ. ಯಾರಾದರೂ ನಿಮ್ಮನ್ನು ಪೀಡಿಸಬಂದರೆ, ಅಧಿಕಾರಿಗಳಿಗೆ ಅದನ್ನು ತಿಳಿಸಿರಿ. ಅವರು ನಿಮ್ಮ ಸಂರಕ್ಷಣೆಗೆ ಕೊಡುವರು. ಸರಕಾರಿ ಅಧಿಕಾರಿಗಳ ಮೇಲೆ ಕೊಡಬೇಕಾದ ದೂರುಗಳನ್ನು ಯೋಗ್ಯ ಮಾರ್ಗದಿಂದ ಮೇಲಿನ ಅಧಿಕಾರಿಗಳಿಗೆ ತಿಳಿಸಬೇಕೆಂದು ಸೂಚಿಸುತ್ತೇನೆ. ಒಂದುವೇಳೆ ಅಲ್ಲಿಯೂ ಸರಿಯಾದ ಪರಿಹಾರ ದೊರೆಯದೆ ಹೋದರೆ ಇನ್ನೂ ಮೇಲಿನವರಿಗೆ ಅರಿಕೆ ಮಾಡಿಕೊಳ್ಳಿರಿ. ಇಲ್ಲಿರುವ ಎಲ್ಲ ಅಧಿಕಾರಿಗಳನ್ನೂ ಒಮ್ಮೆಗೇ ವರ್ಗಾಯಿಸಿ ಅಂಥ ಅನುಭವಗಳಿದ್ದ ಅಧಿಕಾರಿಗಳನ್ನು ಆ ಸ್ಥಾನಗಳಿಗೆ ತರಬೇಕೆಂಬ ನಿಮ್ಮ ಸೂಚನೆಯನ್ನು ಒಪ್ಪಿಕೊಳ್ಳಲು ಸಾಧ್ಯವಿಲ್ಲೆಂದು ತಿಳಿಸಲು ವಿಷಾದಪಡುತ್ತೇನೆ. ಸರಕಾರದ ಧೋರಣವನ್ನು ಕಾರ್ಯರೂಪಕ್ಕೆ ತರುವ ಕರ್ತವ್ಯವನ್ನು ನಮ್ಮ ನಡೆಸುವೆನೆಂದು ಎಲ್ಲ ಅಧಿಕಾರಿಗಳೂ ಪ್ರಮಾಣ ಮಾಡಿರುವಾಗ ಯಾವುದೋ ಒಂದು ನಿಶಿಷ್ಟ ಪಂಗಡದ ಅಧಿಕಾರಿಗಳ ವಿರುದ್ಧ ಪಕ್ಷಪಾತ ... ಸಾಧ್ಯವಿಲ್ಲ. ಯಾವನೊಬ್ಬ ಅಧಿಕಾರಿ ... ನೀತಿ ... ಕ್ಷಮಾ ... ದರೆ ಅವನಿಗೆ ಸರಿಯಾದ ಶಿಕ್ಷೆ ಮಾಡಲಾಗುವದೆಂಬುದು ... ಕೊಡಬಲ್ಲೆ. ನಿಮಗೆ ... ಗಳು ... ವಿಚಾರದಲ್ಲಿ ... ನಿಮಗೆ ಸರಿಯಾದ ವ್ಯವಸ್ಥೆ ಮಾಡುವ ... ಬಯಸುತ್ತೇನೆ. ಇದಲ್ಲದೆ ... ಅಧಿಕಾರಿಗಳು ಹೇಳಿದಂತೆ ನಡೆ... ಜನರ ಪ್ರತಿನಿಧಿಗಳೊಡನೆ ಒಳ್ಳೆ ಸಹಕಾರದಿಂದ ನಡೆದುಕೊಳ್ಳಬೇಕೆಂದೂ ಮೇಲಧಿಕಾರಿಗಳಿಗೆ ಸೂಚನೆ ಕೊಟ್ಟಿದ್ದೇನೆ.

"ಇನ್ನು ಭರತಪುರ ಅಲ್ವಾರ ಸಂಸ್ಥಾನಗಳಿಂದ ಓಡಿಬಂದು ಈಗ ತಿರುಗಿ ಹೋಗಬಯಸುವ ಜನರ ವಿಚಾರದಲ್ಲಿ ಮಾತ್ರ ಇದು ಕೇಂದ್ರ ಸರಕಾರದ ಮುಖಾಂತರವೆ ನಡೆಯಬೇಕಾದ ಕೆಲಸವೆಂದು ಹೇಳುವೆ."

ಕೊನೆಗೆ ಅಹಿಂಸೆಯ ... ಯರ ವಿಷಯವಾಗಿ ಅವರನ್ನು ... ಅವರವರ ರಕ್ಷಕರಿಗೋ ಬಳಗದವರಿಗೋ ತಿರುಗಿಸಬೇಕೆಂದು ಡಾ ಭಾರ್ಗವರು ಕಳಕಳಿಯಿಂದ ಬಿನ್ನವಿಸಿಕೊಂಡರು. ಅಂಥ ಸ್ತ್ರೀಯರನ್ನು ಪಾರುಮಾಡಲು ಒಂದು ಸಮಿತಿ ಸ್ಥಾಪಿಸಲ್ಪಟ್ಟಿದ್ದು ಅದರೊಡನೆ ಸಂಪರ್ಕ ಬೆಳೆಸಲು ಅವರು ಮೇವ ನಿರಾಶ್ರಿತರನ್ನು ಕೇಳಿಕೊಂಡರು. "ಸಮ್ಮತಿಯಿಂದಾದುದೆಂದು ಹೇಳಿದರೂ ಯಾವುದೇ ಮತಾಂತರವನ್ನು ನನ್ನ ಸರಕಾರ ಸಿಂಧುವೆಂದು ಒಪ್ಪಿಕೊಳ್ಳುವದಿಲ್ಲ" ಎಂದೂ ಅವರು ಆಶ್ವಾಸನವಿತ್ತರು. "ಅಂಥ ಮತಾಂತರಗಳು ವ್ಯರ್ಥ; ಅಂತಲ್ಲ ವ್ಯರ್ಥ— ಅವು ಧರ್ಮ ಘಾತಕಗಳು."

...ಪಿ

ಉಷ್ಣ ಹವೆಯಲ್ಲಿ ಕಾಯಿಪಲ್ಲೆಯ ಕೃಷಿ

ಸೋರೆಕಾಯಿ

ಎಕರೆಗೆ ಬೇಕಾಗುವ ಬೀಜ: ೩ ಇಲ್ಲವೆ ೪ ಪೌಂಡು

ಬಿತ್ತಿಗೆ ಸಮಯ: ಮಾರ್ಚನಿಂದ ಜುಲೈ. ಬಯಲ್ಲಿ ... ಎಪ್ರಿಲ ಕೊನೆ ಮತ್ತು ಮೇ.

ಬಿತ್ತಬೇಕಾದ ಆಳ: ಅರ್ಧ ಇಂಚು

ಮೊಳೆಯುವ ಅವಧಿ: ೫ ರಿಂದ ೮ ದಿನ

ಬಿತ್ತಿದ ಮೇಲೆ ಇಲ್ಲವೆ ಕಿತ್ತುನಟ್ಟ ಮೇಲೆ ಇರಬೇಕಾದ ದೂರ : ಸಾಲಿನಿಂದ ಸಾಲಿಗೆ ೮ ಅಡಿ, ಸಸಿಯಿಂದ ಸಸಿಗೆ ೪ ಅಡಿ.

ಸುಗ್ಗಿ ಸಮಯ : ಮಾರ್ಚನಿಂದ ನವಂಬರ

ಸೂಚನೆ:- ನಡುವೆ ೨ ಅಡಿ ಹರಿಗಳನ್ನು ಬಿಟ್ಟು ೮ ಅಡಿ ಅಗಲದ ಎತ್ತರವಾದ ಮಡಿಗಳನ್ನು ಹಾಕಿ, ಬಳ್ಳಿಗಳಿಗೆ ನೀರುಣಿಸುವ ಹರಿಗಳ ಎರಡೂ ಮಗ್ಗುಲಲ್ಲಿ ಬೀಜ ಬಿತ್ತಬೇಕು. ಎತ್ತರದ ಮಡಿಗಳ ಮೇಲೆ ಬಳ್ಳಿಗಳು ಹಬ್ಬುವವು. ಮೊದಲ ಬೆಳೆಗೆ ಅಕ್ಟೋಬರದಲ್ಲಿ ಬೀಜ ಬಿತ್ತಿ ಚಳಿಗಾಲವೆಲ್ಲ ಬಳ್ಳಿಗಳನ್ನು ಹುಲ್ಲುಹಾಸ ರೊಂದು ಬಗೆಯ ಚಪ್ಪರ ಹಾಕಿ ರಕ್ಷಿಸಬೇಕು. ಮೊದಲು ಮಡಿಯೊಂದಕ್ಕೆ ನಾಲ್ಕೈದು ಬೀಜ ಬಿತ್ತಿ ಕೊನೆಗೆ ಉಳಿದವನ್ನು ಹರಿದು ಒಂದೊಂದೇ ಬಿಡಬೇಕು. ಚಿಕ್ಕ ತೋಟಗಳಿಗೆ ೩ ಅಡಿ ವ್ಯಾಸದ ದುಂಡನ್ನ ಮಡಿ ಒಳಿತು. ಮನೆಯ ಗೋಡೆಗೆ ಹತ್ತಿರ ಬಿತ್ತಿದರೆ ಬಳ್ಳಿ ಚಾವಣಿಯನ್ನೇರುವದು.

ನೊಗೆಕಾಯಿ

ಎಕರೆಗೆ ಬೀಜ: ೩—೪ ಪೌಂ.

ಬಿತ್ತಿಗೆ ಸಮಯ: ಬಯಲಲ್ಲಿ ಫೆಬ್ರುವರಿಯಿಂದ ಜುಲೈ, ಘಟ್ಟದಲ್ಲಿ ಮಾರ್ಚನಿಂದ ಜೂನ

ಬಿತ್ತುವ ಆಳ: ಅರ್ಧ ಇಂಚು

ಮೊಳೆಯುವ ಅವಧಿ: ೫—೮ ದಿನ.

ದೂರ : ಸಾಲು ಸಾಲಿಗೆ ೮ ಅಡಿ, ಸಸಿ ಸಸಿಗೆ ೪ ಅಡಿ.

ಸೂಚನೆ:- ಕೃಷಿ ವಿಧಾನ ಮೇಲಿನಂತೆಯೆ, ಆದರೆ ಸೋರೆಕಾಯಿಯಂತೆ ಎಳೆಯದಾಗಿರುವಾಗಲೆ ಕೊಯ್ಯದೆ ಹಣ್ಣಾದ ನಂತರ ತೊಟ್ಟು ಸಹಿತ ಕೊಯ್ಯುವದು. ಅದು ಬಹಳ ದಿನ ಬಾಳುತ್ತದೆ. ಇದು ಚಳಿಗಾಲವೂ ಜೂನ್ ನಂತರವೂ ಅದು ಸಿಗುವದು.

ಹೀರೇಕಾಯಿ

ಎಕರೆಗೆ ಬೀಜ: ೩—೪ ಪೌಂ.

ಬಿತ್ತಿಗೆ ಸಮಯ: ಮೈದಾನದಲ್ಲಿ ಮಾರ್ಚ ಜುಲೈ.

ಬಿತ್ತಬೇಕಾದ ಆಳ: ಅರ್ಧ ಅಂಗುಲ.

ಮೊಳೆಯುವ ಅವಧಿ: ೫—೮ ದಿನ.

ಕಿತ್ತುನಟ್ಟ ಮೇಲೆ ಇರಬೇಕಾದ ದೂರ: ಸಾಲಿಂದ ಸಾಲಿಗೆ ೬ ಅಡಿ, ಸಸಿಯಿಂದ ಸಸಿಗೆ ೬ ಅಡಿ.

ಸುಗ್ಗಿಯ ಸಮಯ: ಮೇ ಯಿಂದ ಡಿಸೆಂಬರ ವರೆಗೆ.

ಸೂಚನೆ:- ೨ ನೆಯ ಬೆಳೆ ಬೆಳೆವಾಗ ಆಧಾರಕ್ಕೆ ಕೋಲು ಕೊಡುವುದವಶ್ಯ— ಬಳ್ಳಿ ೫-೬ ಅಂಗುಲ ಎತ್ತರವಾದಾಗ.

ಹಾಗಲುಕಾಯಿ

ಎಕರೆಗೆ ಬೀಜ: ೩—೪ ಪೌಂ.

ಬಿತ್ತಿಗೆ ಸಮಯ: ಮೈದಾನದಲ್ಲಿ ಮಾರ್ಚ- ಜುಲೈ.

ಬಿತ್ತುವ ಆಳ: .೪ ಅಂಗುಲ

ಮೊಳೆಯುವ ಅವಧಿ: ೮-೧೦ ದಿನ

ದೂರ: ಸಾಲುಗಳ ಅಂತರ ೨-೫ ಅಡಿ, ಸಸಿಗಳ ಅಂತರ ೧ ಅಡಿ.

ಸುಗ್ಗಿಯ ಸಮಯ ಮೇ- ಸಪ್ಟಂಬರ

ಸೂಚನೆ : ಕಹಿಯಾದ ಅಪಕ್ವ ರೂಪದಲ್ಲಿ (ಕಾಯನ್ನು) ಇದನ್ನು ಬಳಸಲಾಗುವದು. ಹಣ್ಣಾದರೆ ಅದು ಕಿತ್ತಳೆಯ ಬಣ್ಣಕ್ಕೆ ತಿರುಗುವುದು. ಅದು ಉಪಯೋಗಕ್ಕೆ ಬರುವುದಿಲ್ಲ. ಸರಿಯಾಗಿ ಫಲ ಬರಬೇಕಾದರೆ ಕೋಲಿನ ಆಧಾರ ಕೊಡಬೇಕು. ಸಿಪ್ಪೆ ತೆಗೆದರೆ ಕಹಿ ಹೋಗುವುದು. ಅನಂತರ ಅದನ್ನು ಬೇಯಿಸಬಹುದು, ಕರಿಯಬಹುದು.

ಬೆಂಡೆಕಾಯಿ

ಎಕರೆಗೆ ಬೀಜ ೧೬-೨೦ ಪೌಂ.

ಬಿತ್ತಿಗೆ ಸಮಯ: ಮೈದಾನದಲ್ಲಿ ಮಾರ್ಚ ಜುಲೈ

ಬಿತ್ತುವ ಆಳ: ಅರ್ಧ ಅಂಗುಲ.

ಮೊಳೆಯುವ ಅವಧಿ: ೫-೬ ದಿನ

ದೂರ: ೨-೫ ಅಡಿ ಮತ್ತು ೧ ಅಡಿ

ಸುಗ್ಗಿಯಕಾಲ : ಎಪ್ರಿಲ್— ಡಿಸೆಂಬರ

ಮೊದಲ ಬೆಳೆ : ಎತ್ತರ ಸ್ಥಳದಲ್ಲಿ ಎಪ್ರಿಲ್ ನಲ್ಲಿ

೨ ನೆಯ ಬೆಳೆ: ಜೂನ ಮಧ್ಯದಲ್ಲಿ

ಸೂಚನೆ: ಎಳೆಯದಾಗಿದ್ದರೆ ಮಾತ್ರ ಬೇಯುವುವು. ೨-೩ ದಿನಕ್ಕೊಮ್ಮೆ ಕಾಯಿ ಕೊಯ್ಯಬೇಕು. ಕಾಯಿ ಬೆಳೆಯಲು ಬಿಟ್ಟರೆ ಗಿಡ ಮತ್ತೆ ಕಾಯಿ ಬಿಡುವದಿಲ್ಲ.

ಕರಬೂಜ

(ಇಬ್ಬುಡಲು ಇಲ್ಲವೆ ಕಕ್ಕರ)

ಎಕರೆಗೆ ಬೀಜ :೩-೪ ಪೌಂ.

ಬಿತ್ತಿಗೆ ಸಮಯ : ಮೈದಾನದಲ್ಲಿ ಜನವರಿ ಮಧ್ಯದಿಂದ ಮಾರ್ಚ ಅಂತ್ಯದ ವರೆಗೆ.

ಬಿತ್ತುವ ಆಳ : ಅರ್ಧ ಅಂಗುಲ.

ಮೊಳೆವ ಕಾಲ: ೫-೬ ದಿನ.

ದೂರ: ಸಾಲಿಂದ ಸಾಲಿಗೆ ೫ ಅಡಿ; ಸಸಿಯಿಂದ ಸಸಿಗೆ ೩ ಅಡಿ.

ಸುಗ್ಗಿ: ಮೇ-ಜೂನ್.

ಸೂಚನೆ: ಈ ಬೆಳೆಗೆ ಸೆಕೆ ಮತ್ತು ತೇವವಿಲ್ಲದ ಹವೆ ಬೇಕು – ಹಣ್ಣಾಗುವಾಗ ಅದರಿಂದ ಒಳ್ಳೆಯ ಪರಿಮಳವೂ ಸಿಹಿಯೂ ಉಂಟಾಗುತ್ತದೆ. ಸ್ವಲ್ಪ ಮಂಜು ಬಿದ್ದರೂ ಸಸಿ ಸಾಯುವುವು. ಒಂದೆಡೆ ನಾಲ್ಕೈದು ಬೀಜ ನಡಬಹುದು. ಪಾತಿಯ ಎರಡೂ ಕಡೆ ಏರಿಯ ಮೇಲೆ ಇವನ್ನು ಸಾಲಾಗಿ ಬಿತ್ತಬಹುದು. ಗಿಡವೂ ಹಣ್ಣೂ ಒಣ ನೆಲದ ಮೇಲಿರಬೇಕು ಹಣ್ಣುಗಳನ್ನು ಬೇಗ್ಗೆ ಕೊಯ್ಯಬೇಕು ಸಮತಟ್ಟಾದ ಜಾಗವಲ್ಲವಾದರೆ ಸಂಜೆ ನೀರು ಬಿಡುತ್ತಿರಬೇಕು.

ಬೂದುಗುಂಬಳ

ಎಕರೆಗೆ ಬೀಜ: ೩-೪ ಪೌಂ.

ಬಿತ್ತಿಗೆ ಸಮಯ: ಮೈದಾನದಲ್ಲಿ ಫೆಬ್ರುವರಿ ಎಪ್ರಿಲ್ಲಲ್ಲಿ.

ಬಿತ್ತುವ ಆಳ: ಅರ್ಧ ಅಂಗುಲ.

ಮೊಳೆವ ಕಾಲ: ೫-೬ ದಿನ.

ದೂರ: ಸಾಲಿಂದ ಸಾಲಿಗೆ ೫ ಅಡಿ; ಸಸಿಯಿಂದ ಸಸಿಗೆ ೩ ಅಡಿ.

ಸುಗ್ಗಿ: ಮೇಯಿಂದ ಜೂನಿನ ವರೆಗೆ.

ಸೂಚನೆ: ಇದು ಕರಬೂಜಕ್ಕಿಂತ ಗಟ್ಟಿ ಜಾತಿಯದು. ಕುಂಬಳದಂತೆ ಇದನ್ನು ಕಾಯಿಯಾಗಿರುವಾಗಲೆ ಬಳಸುವುದು. ಎಳೆಯದಾಗಿದ್ದಾಗ ಇದು ಮೃದುವಾಗಿಯೂ ನುಣ್ಣನೆಯ ಚುಂಗುಳ್ಳದ್ದಾಗಿಯೂ ಇರುತ್ತದೆ; ಬಣ್ಣ ಹಸಿರು.

ಕಲ್ಲಂಗಡಿ

(ತರಬೂಜ)

ಬೀಜ: ಎಕರೆಗೆ ೩-೪ ಪೌಂ.

ಬಿತ್ತಿಗೆ ಕಾಲ: ಮೈದಾನದಲ್ಲಿ ಜನವರಿ-ಮಾರ್ಚ ವರೆಗೆ.

ಬಿತ್ತುವ ಆಳ: ಅರ್ಧ ಅಂಗುಲ.

ಮೊಳೆವ ಕಾಲ: ೫-೬ ದಿನ.

ದೂರ: ಸಾಲಿಂದ ಸಾಲಿಗೆ ೫ ಅಡಿ; ಸಸಿಯಿಂದ ಸಸಿಗೆ ೩ ಅಡಿ.

ಸುಗ್ಗಿ: ಜೂನಿನಿಂದ ಜುಲೈ ವರೆಗೆ.

ಸೂಚನೆ: ಬಹುಗಳ ನದೀ ಪಾತ್ರದಲ್ಲಿ ಸಾಮಾನ್ಯವಾಗಿ ಕಲ್ಲಂಗಡಿ (ಕರಗುಂಬಳ) ಯನ್ನು ಬೆಳೆಯುತ್ತಾರೆ. ಅಂಥಲ್ಲಿ ಹಣ್ಣು ದೊಡ್ಡದಾಗಿಯೂ ರುಚಿಕರವಾಗಿಯೂ ಬೆಳೆಯುತ್ತದೆ.

—ವಿಜಾಪುರ ಬೀಜ...

ಭಾರತದ ಸೈನ್ಯಶಾಖೆಯ ರಾಷ್ಟ್ರೀಕರಣ

ಭಾರತ ಸಂರಕ್ಷಣ ಮಂತ್ರಿ ಸರದಾರ ಬಲದೇವ ಸಿಂಗರು ತಾ. ೨೫ರಂದು ಸುದ್ದಿಗಾರರ ಸಭೆಯಲ್ಲಿ ಮಾತನಾಡುತ್ತ ಈ ವರೆಗೆ ಭಾರತ ಮುಖ್ಯ ಸೇನಾಪತಿಗಳಾದ ಸರ್ ರಾಬರ್ಟ ಲಾಕ್ ಹಾರ್ಟರು ಮುಂದಿನ ತಿಂಗಳಿಂದ ಅಸ್ವಸ್ಥತೆಯ ಮೂಲಕ ನಿವೃತ್ತರಾಗುವರೆಂದೂ ಅವರ ಸ್ಥಳಕ್ಕೆ ೧೯೪೮ ರ ಏಪ್ರಿಲದ ವರೆಗೆ ಜನರಲ್ ಬುಚರ್ ಇವರನ್ನು ತಾತ್ಪೂರ್ತಿಕ ನೇಮಿಸಲಾಗುವದೆಂದೂ ಏಪ್ರಿಲ ೧ ನೇ ತಾ. ದಿಂದ ಶಾಶ್ವತನಾಗಿ ಮುಖ್ಯ ಸೇನಾಪತಿ ಪದವು ಹಿಂದಿ ಅಧಿಕಾರಿಗೆ ಕೊಡಲ್ಪಡುವದೆಂದೂ ಸಾರಿದರು. ಅವರು ಮಾತು ಮುಂದರಿಸುತ್ತ ಹೀಗೆ ನುಡಿದರು.

ಮುಖ್ಯ ಸೇನಾಪತಿಯು ಹಿಂದೀಯನಾದಾಗ ಜನರಲ್ ಬುಚರರು ಸೈನ್ಯಪಡೆಯ ಮುಖ್ಯ ಸಲಹೆಗಾರರಾಗುವರು. ಭಾರತ ನೌಕಾದಳದಲ್ಲಿಯ ದೊಡ್ಡ ದೊಡ್ಡ ಹುದ್ದೆಗಳಲ್ಲಿ ಬ್ರಿಟಿಶರನ್ನೇ ಇನ್ನೂ ಕೆಲದಿನ ಇರಿಸಲಾಗುವದು.

ಸೈನ್ಯಪಡೆಯ ಅಭಿವೃದ್ಧಿಯ ದೃಷ್ಟಿಯಿಂದ ವಿದೇಶದ ತಜ್ಞರನ್ನು ಆಮಂತ್ರಿಸುವದು ಅವಶ್ಯವೆಂದು ಭಾರತ ಸರಕಾರಕ್ಕೆ ತೋರಿದೆ. ಬ್ರಿಟನದಲ್ಲಿ ದೊರೆಯದಿದ್ದರೆ ಅಮೇರಿಕೆಯಿಂದಾದರೂ ಈ ತಜ್ಞರನ್ನು ಕರೆತರಲಾಗುವದು.

ಭಾರತದ ಶಾಂತಿಕಾಲದ ಸೇನೆ ಎಷ್ಟೆಂದು ಇನ್ನೂ ನಿರ್ಧಾರವಾಗಿಲ್ಲ. ಭಾರತ ಒಕ್ಕೂಟದಲ್ಲಿ ಸೇರುವ ಸಂಸ್ಥಾನಗಳ ಸೇನೆಯನ್ನು ಈ ಮೊದಲು ಯಾವ ದೃಷ್ಟಿಯಿಂದ ನೋಡಲಾಗುತ್ತಿತ್ತೋ ಅದೇ ಬಗೆಯಾಗಿ ನೋಡಿಕೊಳ್ಳಲಾಗುವದು. ಸೈನ್ಯಪಡೆಯ ಪುನರ್ಘಟನೆಯ ಕಾಲಕ್ಕೆ ಅವರೊಡನೆ ವಿಚಾರ ವಿನಿಮಯ ಮಾಡದೆ ಮುಂದಡಿ ಇಡುವದಿಲ್ಲ.

ನೌಕಾಪಡೆಯಲ್ಲಿ ಆಧುನಿಕ ಶಸ್ತ್ರಾಸ್ತ್ರಗಳನ್ನು ತುಂಬಲಾಗುವದು. ಹೊಸ ಮಾದರಿಯ ಹಡಗು, ಕ್ರೂಜರ, ವಿನಾಶಿಕೆ ಮೊದಲಾದವನ್ನು ಕೊಳ್ಳಲಾಗುವದು.

ಶಾಂತಿಕಾಲದಲ್ಲಿ ಸ್ವಲ್ಪೇ ಸಮಯದಲ್ಲಿ ನಮ್ಮ ರಾಷ್ಟ್ರದ ಸೈನ್ಯ ಎದುರಿಸಿದ ಕಷ್ಟ ನಷ್ಟ ಇನ್ನಾವ ರಾಷ್ಟ್ರಕ್ಕೂ ಬಂದಿರಲಿಕ್ಕಿಲ್ಲ. ವಿಭಜನಾ ನಂತರ ನಿರಾಶ್ರಿತರ ಸಾಗಾಟದ ಹೊಣೆಯನ್ನು ಸೈನ್ಯ ಹೊರಬೇಕಾಯಿತು. ೫೦ ಲಕ್ಷ ಮುಸಲ್ಮಾನರು ಪಾಕಿಸ್ತಾನಕ್ಕೆ ೪೦ ಲಕ್ಷದಷ್ಟು ಹಿಂದು ಸೀಖರು ಭಾರತಕ್ಕೆ ಇದುವರೆಗೆ ಸಾಗಿಸಲ್ಪಟ್ಟಿರುವರು. ಈ ಕೆಲಸ ಪೂರೈಸುತ್ತಿರುವಷ್ಟರಲ್ಲಿ ಕಾಶ್ಮೀರದ ಹೋರಾಟ ಪ್ರಾರಂಭವಾಯಿತು. ನಮ್ಮ ಸೈನಿಕರು ತಮ್ಮ ಪ್ರಾಣಕೊಟ್ಟು ಕಾಶ್ಮೀರದ ಗಂಡಾಂತರ ನಿವಾರಿಸಿದರು. ಇಷ್ಟು ಆತಂಕಗಳಿದ್ದರೂ ಸೈನ್ಯ ಪುನರ್ಘಟನೆಯು ಕಾರ್ಯಕುಂಠಿತವಾಗಿಲ್ಲ. ಅದು ಇಮ್ಮಡಿ ಭರದಿಂದ ಸಾಗಿದೆ. ಇನ್ನು ಕೆಲವೇ ದಿನಗಳಲ್ಲಿ ಉಚ್ಚ ಹುದ್ದೆಗಳಲ್ಲಿ ಹಿಂದೀಯರು ವಿರಾಜಿಸುವರು.

ಅಗಸ್ಟ ೧೫ರ ಮೊದಲು ನಮ್ಮ ಸೈನ್ಯಪಡೆಯಲ್ಲಿ ೧೦ ಸಾವಿರ ಬ್ರಿಟಿಶ ಅಧಿಕಾರಿಗಳಿದ್ದರು. ಅಗಸ್ಟ ತಾ ೧೫ರ ನಂತರ ಈ ಸಂಖ್ಯೆ ೧೫೦೦ಕ್ಕೆ ಇಳಿಯಿತು. ೧೯೪೮ರ ಜಾನೆವರಿಯ ನಂತರ ೩೦೦ಕ್ಕಿಂತ ಕಡಿಮೆ ಬ್ರಿಟಿಶ್ ಅಧಿಕಾರಿಗಳು ಉಳಿಯುವರು. ಇದರಿಂದ ಸೈನ್ಯ ಶಾಖೆಯ ರಾಷ್ಟ್ರೀಕರಣವು ಕೂಡಲೇ ಆಗುವದೆಂದು ತಿಳಿಯಬಾರದಿರದು.

ನೌಕಾಪಡೆ

ಇಂದು ಭಾರತೀಯ ನೌಕಾಪಡೆಯಲ್ಲಿ ೧೦ ವರ್ಷಕ್ಕೆ ಮಿಕ್ಕಿ ಅನುಭವವುಳ್ಳ ಅಧಿಕಾರಿಗಳು ೬೦ರಲ್ಲಿ [illegible]ಕ್ಕಿಂತ ಹೆಚ್ಚಿಲ್ಲ. ನೌಕಾಶಿಕ್ಷಣವೇ ಮುಖ್ಯಾಂಶ ಅದಕ್ಕೆ ಸಮಯವೂ ಬಹಳಬೇಕು. ಆದರೂ ರಾಷ್ಟ್ರೀಕರಣ ಭರದಿಂದ ಸಾಗಿದೆ. ಅಗಸ್ಟ ೧೫ರಂದು [illegible] ಅಧಿಕಾರಿಗಳಲ್ಲಿ ಕೇವಲ [illegible] ಜನ ಬ್ರಿಟಿಶರಿದ್ದರು. ನೌಕಾಪಡೆಯಲ್ಲಿ ಮುಂದೆ ೩೦ ಬ್ರಿಟಿಶರನ್ನು ಮಾತ್ರ ಉಳಿಸಿಕೊಳ್ಳಲಾಗುವದು. ಈಗ [illegible] ಹಡಗಗಳ [illegible] [illegible].

ವೈಮಾನಿಕ ಪಡೆ

ಅಗಸ್ಟ ೧೫ರ ಪೂರ್ವದಲ್ಲಿ ಆರ್. ಎ. ಎಫ್. ಹಾಗು ಆರ್. ಆಯ್. ಎ. ಎಫ್. ಪಡೆಗಳು ಸಮಾವೇಶವಾಗಿದ್ದವು. ಆರ್. ಆಯ್. ಎ. ಎಫ್ [illegible] ಪಡೆಗಳಲ್ಲಿ ೬೦೦ ಬ್ರಿಟಿಶ ಅಧಿಕಾರಿಗಳು ಕೆಲಸ ಮಾಡುತ್ತಿದ್ದರು. [illegible] ಬ್ರಿಟಿಶರು [illegible]. ತಜ್ಞರ ಅವಶ್ಯಕತೆ ಇರುವದರಿಂದ [illegible] ಬ್ರಿಟಿಶ ಅಧಿಕಾರಿಗಳನ್ನು [illegible]ಲಾಗುವದು.

ಕೇಂದ್ರ ಶಿಕ್ಷಣ ಸಂಸ್ಥೆ

ನಾಡಿನ ಶಿಕ್ಷಣದ ಮಟ್ಟವನ್ನು ಏರಿಸಲೋಸುಗ ಆದರ್ಶ ಶಿಕ್ಷಕರನ್ನು [illegible] [illegible] ಕೇಂದ್ರ ಶಿಕ್ಷಣ ಸಂಸ್ಥೆಯೊಂದನ್ನು ಸರಕಾರ [illegible] [illegible] [illegible] ಉದ್ಘಾಟನೆಯು [illegible] [illegible] ಮಾಡಲ್ಪಟ್ಟಿತು. [illegible] ಸ್ವಾಗತಿಸುತ್ತ ಡಾ. ಆಝಾದರು [illegible] ದರು.

ಸದ್ಯಕ್ಕೆ ಭಾರತದಲ್ಲಿ [illegible] ೧೦೦ ಕ್ಕೆ ೧೪.೭ ರಷ್ಟಿದೆ. ವಿಭಜನಾನಂತರ ಭಾರತದ ಜನ ಸಂಖ್ಯೆ ೩೪ ಕೋಟಿಯಷ್ಟಾಗಿದೆ. ಇದರಲ್ಲಿ ೧೧ ವರ್ಷದೊಳಗಿನ ಬಾಲ [illegible] ೫ ಕೋಟಿಯಷ್ಟಿದ್ದಾರೆ. ಇವರ ಶಿಕ್ಷಣವ್ಯವಸ್ಥೆ [illegible] ಆಗಬೇಕಾಗಿದೆ. ಈ ಕಾರ್ಯಕ್ಕೆ ಸರಿಯಾದ ತರಬೇತಿಯಾದ ಶಿಕ್ಷಕರ ಅಭಾವವಿದೆ. [illegible] ೧೦೦ ವಿದ್ಯಾರ್ಥಿಗಳಿಗೆ ಸರಾಸರಿ [illegible] [illegible] ೯ ಲಕ್ಷ ಶಿಕ್ಷಕರು ತರಬೇತಿ ಹೊಂದಿದವರು ಬೇಕು. ಇಷ್ಟು ಜನ ಶಿಕ್ಷಕರನ್ನು ಸಿದ್ಧಗೊಳಿಸಲು ಕೇಂದ್ರ ಮತ್ತು ಪ್ರಾಂತಿಕ ಸರಕಾರಗಳು ಸಂಸ್ಥೆಗಳನ್ನು ಸ್ಥಾಪಿಸಬೇಕೆಂದು ಕೇಂದ್ರ ಶಿಕ್ಷಣ ಸಲಹಾ ಸಮಿತಿಯು ಮಾಡಿದ ಸೂಚನೆಗಳನ್ನು ಗಮನಿಸಿಯೆ ಕೇಂದ್ರ ಮತ್ತು ಪ್ರಾಂತಿಕ ಸರಕಾರಗಳು ಯುದ್ಧೋತ್ತರ ಪಂಚ ವಾರ್ಷಿಕ ಯೋಜನೆಗಳನ್ನು ಸಿದ್ಧಪಡಿಸಿರುವರು. ಶಿಕ್ಷಕರಿಗಾಗಿ ಇಂಥ ಸಂಸ್ಥೆಗಳು ಕೆಲವಲ್ಲಿ ಸ್ಥಾಪಿತವಾಗಿದ್ದು ಇನ್ನು ಆಗುವದರಲ್ಲಿವೆ.

ಕೇಂದ್ರ ಸರಕಾರದ ಯೋಜನೆ

ದಿಲ್ಲಿಯಲ್ಲಿ ಇಂತಹದೊಂದು ಸಂಸ್ಥೆಯನ್ನು ತೆರೆಯಲು ಕೇಂದ್ರ ಸರಕಾರ ಬಯಸಿತ್ತು. ಇದಕ್ಕಾಗಿ ೧೯೪೬ರಲ್ಲಿ ಕಟ್ಟಡಕ್ಕಾಗಿ ೧೫ ಲಕ್ಷ ರೂ. ಇತರ ಉಪಕರಣಗಳಿಗಾಗಿ ೨॥ ಲಕ್ಷದಷ್ಟು ರೂ. ತೆಗೆದಿಡಲಾಗಿತ್ತು. ದಿಲ್ಲಿ ವಿಶ್ವವಿದ್ಯಾಲಯದ ಅಂಗವಾಗಿ ಈ ಸಂಸ್ಥೆಯನ್ನು ಕಟ್ಟಿಸಲಾಗಿದೆ. ಈ ಯೋಜನೆಗೆ ೨ ಲಕ್ಷ ರೂ. ವಾರ್ಷಿಕ ವೆಚ್ಚ ತಗಲಬಹುದು. ಈ ಶಿಕ್ಷಣ ಸಂಸ್ಥೆಯಲ್ಲಿ ತರಬೇತಿಯಾದ ಶಿಕ್ಷಕರನ್ನು ಕೇಂದ್ರ ಸರಕಾರದ ಆಡಳಿತಕ್ಕೊಳಪಟ್ಟ ಪ್ರದೇಶದಲ್ಲಿ ನೇಮಿಸಿಕೊಳ್ಳಲಾಗುವದು. ಆದರ್ಶ ಶಿಕ್ಷಕರನ್ನು ಒದಗಿಸುವದೇ ಈ ಸಂಸ್ಥೆಯ ಗುರಿ. ಮೂಲ ಶಿಕ್ಷಣದ ವಿವಿಧ ಪದ್ಧತಿಗಳಲ್ಲಿ ಯಾವ ಬಗೆಯ ಸಂಬಂಧವಿರಬೇಕು, ಸದ್ಯದ ಪರೀಕ್ಷಾ ಪದ್ಧತಿಯನ್ನು ಹೇಗೆ ಸುಧಾರಿಸಬೇಕು ವ್ಯಕ್ತಿ ವಿಕಾಸಕ್ಕೆ ಹೇಗೆ ಅವಕಾಶ ಕಲ್ಪಿಸಬೇಕು ಎಂಬ ಇವೇ ಮೊದಲಾದ ಮಹತ್ವದ ಅಂಶಗಳನ್ನು ಈ ಸಂಸ್ಥೆ ಚರ್ಚಿಸಿ ಹೊಸ ಹಾದಿ ಹಾಕಿ ಕೊಡುವದು.

ಸತಿ ಮೌಂಟ ಬ್ಯಾಟನ್ನರೆ ನಾನು ನಿಮಗೆ ಸ್ವಾಗತವೀಯುತ್ತೇನೆ ಮಿಂಚಿನ ಗುಂಡಿಯನ್ನು ಅಮುಕಿ ನೀವು ಈ ಸಂಸ್ಥೆಯ ಬಾಗಿಲನ್ನು ತೆರೆದು ನಮ್ಮ ದೇಶದ ಕೋಟ್ಯಾವಧಿ ಜನರ ಹೃದಯದಲ್ಲಿ ಜ್ಞಾನದ ಬೆಳಕು ಬೀಳುವಂತೆ ಮಾಡಬೇಕೆಂದು ಬೇಡುತ್ತೇನೆ.

ಸತಿ ಮೌಂಟ ಬ್ಯಾಟನ್ನರ ಭಾಷಣ

ಈ ಮೂರು ತಿಂಗಳಿಂದ ನಾವು ನಿರಾಶ್ರಿತರ ರಕ್ಷಣೆಯ ಕಾರ್ಯದಲ್ಲಿ ನಿರತರಾಗಿದ್ದೇವೆ. ಆದರೂ ಕೇಂದ್ರ ಸರಕಾರ ಇತರ ವಿಷಯಗಳನ್ನು ಮರೆತು ಕುಳಿತಿಲ್ಲ. ಈ ಬಗೆಯ ಸಂಸ್ಥೆ ಭಾವೀ ಪೀಳಿಗೆಯ ಏಳಿಗೆಗೆ ಅತ್ಯಗತ್ಯ. ಇದನ್ನು ನಾನು ಬಹಳ ಆನಂದದಿಂದ ಉದ್ಘಾಟಿಸುತ್ತೇನೆ.

ಭಾರತದ ಶಿಕ್ಷಣಾಭಿವೃದ್ಧಿಯ ಬಗ್ಗೆ ನನಗೆ ತುಂಬ ಅಭಿಮಾನವಿದೆ ಕಳಕಳಿಯಿದೆ. ಡಾ. ಆಝಾದರಂತಹ ನೇತಾರರುಗಳು ಶಿಕ್ಷಣ ಖಾತೆ ವಹಿಸಿದ್ದು ದೇಶದ ಸುದೈವ.

ಭಾರತವು ಸ್ವತಂತ್ರವಾಯಿತು [illegible] ರವಾಗಿದೆ. [illegible] ವವಷ್ಟೇ ಸಾಲದು. ಸ್ವತಂತ್ರ [illegible] ನವೀನ ವಿಧಾಯಕ ಶಕ್ತಿಯಾಗಿದೆ. [illegible]

[illegible]

ಭಾರತದ ಅರ್ಥಸಚಿವರ ಪರೀಕ್ಷೆ

[illegible] ಯಾಗುವದಿಲ್ಲ. ಈ ಬಗ್ಗೆ [illegible] ಮಾಡಿಕೊಳ್ಳಬೇಕು ಎಂದು ಹೇಳಿದರು. [illegible]

[illegible] ಹೇಗೆ [illegible]

[illegible] ಈ ಪರಭಾರ [illegible] ಪ್ರಾಂತೀಯ ಮಂತ್ರಿ ಮಂಡಲದ ಧೋರಣೆ [illegible] ಕಾಣಲಿಲ್ಲ. ಅವರು ಕೇಂದ್ರದೊಡನೆ ಸಹಕಾರ ಭಾವದಿಂದ ಸಾಗಲಿ.

ಕೇಂದ್ರ ಸರಕಾರವು ಬಲಿಷ್ಠವಾಗಿರಬೇಕೆಂದು ನಾನು ಸದಾ ಹೇಳುತ್ತ ಬಂದಿದ್ದೇನೆ. ದೇಶವಿಘಟನೆ ದುರ್ದೈವದ ಸಂಗತಿಯಾಗಿದ್ದರೂ ಈ ವಿಘಟನೆಯು ಕೇಂದ್ರವನ್ನು ಬಲಗೊಳಿಸಲು ಅನುವು ಮಾಡಿಕೊಟ್ಟಿತು. [illegible] ಸರಕಾರದೊಡನೆ ಸಹಕರಿಸಿ ನಡೆಯಬೇಕೆಂದು ಬೇಡುತ್ತೇನೆ.

ಕೇಂದ್ರ ಸರಕಾರಕ್ಕೆ [illegible] [illegible] ಗಿಲ್ಲ. ರಾಷ್ಟ್ರೀಯ ಸರಕಾರಕ್ಕೆ ಬರುವ [illegible] ಯನ್ನು ಕೇಳುವ ಅಧಿಕಾರವಿಲ್ಲವೆ? ಕೊಡುವದನ್ನು [illegible] ಸರಕಾರದೊಡನೆ ಸಹಕರಿಸಬೇಕು.

ಸರಕಾರದ ವೆಚ್ಚವನ್ನು ಹೇಗೆ ತಗ್ಗಿಸಲು ಬರಬಹುದೆಂಬುದನ್ನು ವಿಚಾರಿಸಲು ಬೇಗ ಒಂದು ಸಮಿತಿಯನ್ನು ಸರಕಾರ ನೇಮಿಸಲಿದೆ. ಈ ಸಮಿತಿಯಲ್ಲಿ ಅಧಿಕಾರೇತರರೇ [illegible].

ಈ ಸಂದರ್ಭದಲ್ಲಿ ಸಂಪಿನ ಬಗ್ಗೆ ಒಂದು ಮಾತು ಹೇಳಬಯಸುವೆ. ಅದರಲ್ಲೂ ಮದ್ರಾಸದ ಸರಕಾರೀ ನೌಕರರ [illegible] [illegible] ಸರಕಾರೀ ನೌಕರರ ಈ ವರ್ತನೆಯನ್ನು ಯಾವ ಆಧುನಿಕ ಸರಕಾರವೂ ಸಹಿಸದು. ಸರಕಾರೀ ನೌಕರರಿಗೆ ಸಂಪು ಹೂಡಲು ಸ್ವತಂತ್ರ ಭಾರತದಲ್ಲಿ ಅಧಿಕಾರವಿಲ್ಲ. [illegible] ಈಗ ಗಳಿಸಿಕೊಂಡ ನಮ್ಮ ಸ್ವಾತಂತ್ರ್ಯ ಬಹು ದಿನ ಬಾಳಲಾರದು.

ವಿಲೀನೀಕರಣಕ್ಕೆ ಒಪ್ಪಿಗೆ
ಸಂ. ದ. ಸಂಸ್ಥಾನ ಘಟನಾ ಸಮಿತಿಯ ಪ್ರಜಾಪಕ್ಷದ ನಿರ್ಧಾರ

ಸಂಯುಕ್ತ ದಕ್ಷಿಣ ಸಂಸ್ಥಾನ ಘಟನಾ ಸಮಿತಿಯ ಪ್ರಜಾಪಕ್ಷದವರು ತಾ. [illegible] ದಿನ ಸಾಂಗಲಿಯಲ್ಲಿ ಕೂಡಿ ಕೆಳಗಿನ ಗೊತ್ತುವಳಿಯನ್ನು ಸ್ವೀಕರಿಸಿತು.

ಸಂಯುಕ್ತ ದಕ್ಷಿಣ ಸಂಸ್ಥಾನದ ರಾಜ ಮಹಾರಾಜರು ಸಂಸ್ಥಾನದ ಲೋಕಮತದ ಪ್ರಭಾವವನ್ನು ಮತ್ತು ಆ ಸಂಬಂಧದಲ್ಲಿ ದೇಶದಲ್ಲಿ ಉಂಟಾಗುತ್ತಿರುವ ಘಟನೆಗಳನ್ನು ಅನುಲಕ್ಷಿಸಿ [illegible] ಅದವನ್ನು ಅಭಿನಂದಿಸುತ್ತೇವೆ.

[illegible] ಅವರೂ ಈ ವಿಷಯದಲ್ಲಿ ಕೊನೆಯ ನಿರ್ಣಯ [illegible]

[illegible] ಮುಂಬಯಿ ಲೋಕಲ ಬೋರ್ಡಿನ [illegible]

ಹೈದರಾಬಾದದ ರಾಜಕಾರಣ

[illegible]

[illegible]

[illegible]

ಜ್ಯೋತಿಷಿ— ಕೃಷ್ಣಶಾಸ್ತ್ರಿ ಭಿಡೆ ಭವಿಷ್ಯ ಕಥನ ಆಫೀಸ ಖಡೇಬಜಾರ ಬೆಳಗಾವಿ.

ಡಿಸೆಂಬರ ೨೯ ರಿಂದ ಜನೆವರಿ ೪ ವರೆಗೆ

ಮೇಷ

ಎಲ್ಲರೆ ಪ್ರಕೃತಿ ಉತ್ತಮ ಆದರೆ ಪತಿ ಪತ್ನಿಯರಲ್ಲಿ ಐಕ್ಯ ಕಡಿಮೆ. ಕೌಟುಂಬಿಕ ಉಳಿದ ಸಂಗತಿಗಳು ಬಹಳ ಸುಖದ್ದು ಸ್ಥಾವರದಲ್ಲಿ ಹೆಚ್ಚಳ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಬಹಳ ಉತ್ತಮ. ಕಲಾವಂತರ ಸಹವಾಸ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಒಳ್ಳೆ ಅನುಕೂಲತೆ [illegible] ಉತ್ಕರ್ಷ ಆದರೆ ಅವರು ನಿಮ್ಮ ಗೂಢ [illegible] ಸಿಕೆ. ಪ್ರವಾಸಕ್ಕಿಂತ ಭೆಟ್ಟಿ ಮತ್ತು ಪತ್ರ ವ್ಯವಹಾರ ಹೆಚ್ಚು ಅನುಕೂಲ. [illegible] ಮತ್ತು ಭರಣಿಯು ಮೊದಲನೆ [illegible] ಚರಣಗಳಿಗೆ ತೊಂದರೆ ಕಡಿಮೆ. ತಾ. [illegible] ಅನುಕೂಲ

ವೃಷಭ

[illegible] ಉತ್ತಮ ಹೆಂಡತಿಯ ತಂತ್ರದಂತೆ [illegible] ಕೆಲ ಸೂಕ್ಷ್ಮ [illegible] ಬಹಳ ಬೌದ್ಧಿಕ [illegible] ವಿಷಯಗಳಲ್ಲಿ ಪ್ರಾಪಂಚಿಕ ಸುಖ, ಅನುಕೂಲ. ಉದ್ಯೋಗದಲ್ಲಿ [illegible] ಕೆಲವರಿಂದ ವಿಶೇಷ [illegible] ಕೆಲ ಸಂಗತಿಗಳು. ವಾದದಲ್ಲಿ ಮತ್ತು [illegible] ಉತ್ತಮ ಯಶಸ್ಸು. ಪತ್ರ ವ್ಯವಹಾರ [illegible] ಪ್ರವಾಸ ಮತ್ತು ಭೆಟ್ಟಿ ಅನುಕೂಲ. [illegible] ಮತ್ತು [illegible] ಚರಣಗಳಿಗೆ ಹೆಚ್ಚು ತೊಂದರೆ. ತಾ. [illegible] ಅನುಕೂಲ.

ಮಿಥುನ

[illegible] ಉತ್ತಮ ಆದರೆ ನಿಮ್ಮ ಸಂಪತ್ತಿ [illegible] ಕ್ಲೇಶ. ಉಳಿದ ವಿಷ[illegible] ಪ್ರಾಪಂಚಿಕ ಸುಖ [illegible] ಅನು[illegible] ಪ್ರಗತಿ ಮತ್ತು ಪ್ರತಿಷ್ಠೆ ಸಾಮಾನ್ಯ. ಆದರೆ ಲಾಭ ಉತ್ತಮ. ಮನಸ್ಸು [illegible] ವಿಚಾರದಲ್ಲಿ ಮಗ್ನವಾಗುವದು. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಪ್ರತಿಪಕ್ಷಗಳದೇ ಹೆಚ್ಚು ಜೋರು ಉಳಿಯುವದು. ಆದರೆ ಯಶಸ್ಸಿನ ಒಲವು ನಿಮ್ಮ ಕಡೆಗೆಯೇ. ಮಿತ್ರ ಸುಖ ಉತ್ತಮ ಶತ್ರುಗಳಲ್ಲಿ ಕೆಲ ಜನರು ಅನುಕೂಲ. ಪ್ರವಾಸ ಮತ್ತು ಭೆಟ್ಟಿಗಿಂತ ಪತ್ರವ್ಯವಹಾರ ಹೆಚ್ಚು ಅನುಕೂಲ. ಮೃಗಾದ ೪ನೇ ಮತ್ತು ಆರಿದ್ರಾದ ಮೊದಲನೆ ೩ ಚರಣಗಳಿಗೆ ತೊಂದರೆ ಕಡಮೆ. ತಾ. ೨೯, ೩೦, ೧ ಅನುಕೂಲ.

ಕರ್ಕ

ಪ್ರಕೃತಿ ಮತ್ತು ಸ್ತ್ರೀಸುಖ ಉತ್ತಮ ಮಕ್ಕಳಲ್ಲಿ ಉನ್ನತಿ. ತೊಂದರೆ ಹೆಚ್ಚು ಸಂಭವಿಸಿದರೂ ಅನೇಕ ಮಹತ್ವದ ಪ್ರಾಪಂಚಿಕ ಘಟನೆಗಳು [illegible] ಸಂಭವ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭವೂ ಉತ್ತಮ. ಮಿತ್ರರಲ್ಲಿ ಒಬ್ಬಿಬ್ಬರ ವಿಶೇಷ ಉನ್ನತಿ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಉಭಯ ಪಕ್ಷಗಳಲ್ಲಿ ಸಮಾನಸ್ಥಿತಿ. ಪ್ರವಾಸ ಮತ್ತು ಭೆಟ್ಟಿ. ಪತ್ರವ್ಯವಹಾರ [illegible]ಕ್ಕಿಂತ ಅನುಕೂಲ. ಪುಷ್ಯದ ೪ನೇ ಮತ್ತು ಆಶ್ಲೇಷಾದ ಮೊದಲನೆ ೩ ಚರಣಗಳಿಗೆ ತೊಂದರೆ ಕಡಮೆ. ತಾ. ೨೯, ೧, ೨, ೩ ಅನುಕೂಲ.

ಸಿಂಹ

ಪ್ರಕೃತಿ ಮತ್ತು ಪ್ರಾಪಂಚಿಕ ಸುಖ ಅನುಕೂಲ. ಆದರೆ ಹೆಂಡತಿ ಗೂಡ ಮೇಲಿಂದಮೇಲೆ [illegible] ಬರುವದರಿಂದ ಮನಸ್ಸು ಉದಾಸೀನ [illegible] ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ. ಮತ್ತು ಲಾಭ ಬಹಳ ಉತ್ತಮ. ಆದರೆ ವೆಚ್ಚದ [illegible] ಮಿತ್ರಸುಖ ಉತ್ತಮ. [illegible] ದ್ವೇಷಮಾಡುವ ಯೋಗ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಮಾತ್ರ ಪೂರ್ಣ ಪರಾಭವ. [illegible] ಭೆಟ್ಟಿಗಿಂತ ಪ್ರವಾಸ ಮತ್ತು ಪತ್ರವ್ಯವಹಾರವೂ ಅನುಕೂಲ. ಮಘಾದ ೪ನೇ ಮತ್ತು ಪೂರ್ವಾದ ಮೊದಲನೆ ೩ ಚರಣಗಳಿಗೆ ತೊಂದರೆ ಕಡಮೆ. [illegible] ಅನುಕೂಲ.

ಕನ್ಯಾ

ಪ್ರಕೃತಿ ಮತ್ತು ಪ್ರಾಪಂಚಿಕ ಸುಖ ಉತ್ತಮ. ಆದರೆ ಅತ್ತೆಯ ಮನೆಯ ಜನರು ಮತ್ತು ಬಂಧುವರ್ಗದವರಿಂದ ಕೆಲ ಅಪಮಾನ ಇಲ್ಲವೆ ಮನಸ್ತಾಪವಾಗದಂತೆ ವರ್ತನೆ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಬಹಳ ಉತ್ತಮ. ಆದರೆ ಮನಸ್ಸಿನ ವಿರುದ್ಧ ವೆಚ್ಚದ ಪ್ರಸಂಗ ಹೆಚ್ಚು. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಉಭಯ ಪಕ್ಷಗಳಲ್ಲಿ ಸಮಾನ ಸ್ಥಿತಿ. ಪ್ರವಾಸದ ಕೆಲಸ ಸುಖಕರ. ಉತ್ತರಾದ ೪ನೇ ಮತ್ತು ಹಸ್ತಾದ ಮೊದಲನೆ ೩ ಚರಣಗಳಿಗೆ ತೊಂದರೆ ಕಡಮೆ. ತಾ. ೨೯, ೩೦, ೩, ೪ ಅನುಕೂಲ.

ತುಲಾ

ಪ್ರಕೃತಿ ಮತ್ತು ಪ್ರಾಪಂಚಿಕ ಸುಖ ಉತ್ತಮ. ಆದರೆ ಹೆಂಡತಿ ಮತ್ತು ಮಕ್ಕಳು ನಿಮಗೆ ಬೇಡಾದಂತಹ ಕೆಲ ಸಂಗತಿಗಳನ್ನು ಬೇಕಂತಲೆ ಮಾಡುವ ಸಂಭವ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ. ಮತ್ತು ಲಾಭ ಬಹಳ ಉತ್ತಮ. ಸ್ಥಾವರದಲ್ಲಿ ಸ್ವಲ್ಪ ಹೆಚ್ಚಳ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಒಳ್ಳೇ ಯಶಸ್ಸು. ಪ್ರವಾಸಾದಿ ಕೆಲಸ ಸುಖಕರ. ಚಿತ್ರಾದ ೪ನೇ ಮತ್ತು ಸ್ವಾತಿಯ ಮೊದಲನೆ ೩ ಚರಣಗಳಿಗೆ ತೊಂದರೆ ಕಡಮೆ. ತಾ. ೩೦, ೧, ೨ ಅನುಕೂಲ.

ವೃಶ್ಚಿಕ

ಪ್ರಕೃತಿ ಉತ್ತಮ. ರತಿ ಸುಖ ಮನಸ್ಸಿನಂತೆ. ಆದರೆ ಉಳಿದ ವಿಷಯಗಳಲ್ಲಿ ಹೆಂಡತಿ ಗೂಡ ಮೇಲಿಂದಮೇಲೆ ವಿರೋಧ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಬಹಳ ಉತ್ತಮ. ಮಿತ್ರ ಸುಖ ಅನುಕೂಲ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಯಶಸ್ಸು. ಮಕ್ಕಳಲ್ಲಿ ಉನ್ನತಿ. ಪ್ರವಾಸಾದಿ ಕೆಲಸ ಸುಖಕರ. ಅನುರಾಧೆಯ ೪ನೇ ಮತ್ತು ಜ್ಯೇಷ್ಠಾದ ಮೊದಲನೆ ೩ ಚರಣಗಳಿಗೆ ತೊಂದರೆ ಕಡಮೆ. ತಾ ೩೦, ೩೧, ೧, ೨, ೩ ಅನುಕೂಲ.

ಧನು

ಪ್ರಕೃತಿಗೆ ಕಿರುಕುಳ ಕ್ಲೇಶ. ಆದರೆ ಸ್ತ್ರೀ ಸುಖ ಅನುಕೂಲ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ. ಮತ್ತು ಲಾಭ ಬಹಳ ಉತ್ತಮ. ಆದರೆ ವೆಚ್ಚ [illegible] ಆ ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಅನುಕೂಲತೆ. ಆಪ್ತರು ನಿಮ್ಮ ಬಗ್ಗೆ ಸುಳ್ಳುಸುಳ್ಳೇ ತಪ್ಪು ತಿಳುವಳಿಕೆ [illegible] ಪ್ರಯತ್ನ ಮಾಡುವರು. ಗುಪ್ತ ಶತ್ರುಗಳ ಹೆಚ್ಚಳ. ಪ್ರವಾಸಾದಿ ಕೆಲಸ ಬಹಳ [illegible]. ಮೂಲಾದ ೪ನೇ ಮತ್ತು ಪೂರ್ವಾಷಾಢಾದ ಮೊದಲನೆ ೩ ಚರಣಗಳಿಗೆ ತೊಂದರೆ ಕಡಮೆ. ತಾ. ೧, ೨, ೩, ೪ ಅನುಕೂಲ.

ಮಕರ

ಹಿರಿಯ ಮಂಡಳಿಯವರಿಗೆ ಸ್ವಲ್ಪ ಕಾಯಿಲೆ. ಆದರೆ ಉಳಿದವರಿಗೆ ಒಳ್ಳೆ ಆರೋಗ್ಯ. ಎಲ್ಲ ವಿಷಯಗಳಲ್ಲಿ ಪ್ರಾಪಂಚಿಕ ಸುಖ ಉತ್ತಮ. ಉದ್ಯೋಗದಲ್ಲಿ ಪ್ರಗತಿ ಕಡಮೆ. ಆದರೆ ಪ್ರತಿಷ್ಠೆ. ಮತ್ತು ಲಾಭ ಉತ್ತಮ. ಅವಚಿತ ಲಾಭದ ಪ್ರಬಲ ಯೋಗ. ವಾದದಲ್ಲಿ ಹಿಮ್ಮೆಟ್ಟುವದು. ಆದರೆ ಉಳಿದ ಸ್ಪರ್ಧೆಯಲ್ಲಿ ವಿಜಯ. ಪ್ರವಾಸ ಮತ್ತು ಪತ್ರವ್ಯವಹಾರ ತೊಂದರೆಯದು. ಆದರೆ ಭೆಟ್ಟಿಯ ಕೆಲಸ ಉತ್ತಮ. ಉತ್ತರಾಷಾಢಾದ ೪ನೇ ಮತ್ತು ಶ್ರವಣದ ಮೊದಲನೆ ೩ ಚರಣಗಳಿಗೆ ತೊಂದರೆ ಕಡಮೆ. ತಾ. ೨೯, ೩೦, ೩, ೪ ಅನುಕೂಲ.

ಕುಂಭ

ನಿಮ್ಮಕಿಂತ ಹೆಂಡತಿ ಮತ್ತು ಮಕ್ಕಳ ಆರೋಗ್ಯ ಉತ್ತಮ. ಆದರೆ ಹೆಂಡತಿ ಗೂಡ ಮೇಲಿಂದಮೇಲೆ ವಿರೋಧ, ಉಳಿದ ಪ್ರಾಪಂಚಿಕ ಸುಖ [illegible] ಮಸ್ತರ ಆದಾಗ. ಆದರೆ ಅ ಮಾನದಿಂದ ಲಾಭ ಮತ್ತು ಪ್ರತಿಷ್ಠೆ ಅನುಕೂಲ ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ [illegible]. ಆದರೆ ಶತ್ರುಗಳ [illegible] ಮಿತ್ರಸುಖ ಅನುಕೂಲ. ಪ್ರವಾಸಕ್ಕಿಂತ ಭೆಟ್ಟಿ ಮತ್ತು ಪತ್ರವ್ಯವಹಾರವೂ ಅನುಕೂಲ. ಧನಿಷ್ಠಾದ ೪ನೇ ಮತ್ತು ಶತತಾರಿಕೆಯ ಮೊದಲನೆ ೩ ಚರಣಗಳಿಗೆ ತೊಂದರೆ ಕಡಮೆ. ತಾ. ೩೧, ೧, ೨ ಅನುಕೂಲ.

ಮೀನ

ಪ್ರಕೃತಿ ಮತ್ತು ಸ್ತ್ರೀ ಸುಖ ಉತ್ತಮ, ಆದರೆ ಅ ಮಾನದಿಂದ ಪ್ರಾಪಂಚಿಕ ಸುಖ ಕಡಮೆ. ಉದ್ಯೋಗದಲ್ಲಿ ಪ್ರಗತಿ ಹೆಚ್ಚು ಪ್ರತಿಷ್ಠೆ. ಅಪೂರ್ವ ಮತ್ತು ಲಾಭ ತುಂಬಾ. ಮಿತ್ರಸುಖ ಅನುಕೂಲ ಸ್ತ್ರೀಯರಲ್ಲಿ ಹೆಚ್ಚು ಆದರ. ಅಕಲ್ಪಿತ ಲಾಭದ ಸಂಭವ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಒಳ್ಳೆ ಯಶಸ್ಸು. ಪ್ರವಾಸಾದಿ ಕೆಲಸ ಮನಸ್ಸಿನಂತೆ. ಉತ್ತರಾ ಭಾದ್ರಪದದ ೪ನೇ ಮತ್ತು ರೇವತಿಯ ಮೊದಲನೆ ೩ ಚರಣಗಳಿಗೆ ಹೆಚ್ಚು ಅನುಕೂಲ. ತಾ. ೨೯, ೩೦, ೩, ೪ ಅನುಕೂಲ.

ಕಾಶ್ಮೀರದ ಮಾತುಕತೆ ಮುರಿದವು

ದಾಳಿಗಾರರನ್ನು ದಮನಿಸಲು ಅತ್ಯುಗ್ರ ಉಪಾಯ

ಭಾರತ ಸರಕಾರದ ಮುಖ್ಯ ಮಂತ್ರಿ ಪಂ. ಜವಾಹರಲಾಲ ನೆಹರೂ ಅವರು ಮತ್ತು ಪಾಕಿಸ್ತಾನ ಮುಖ್ಯ ಮಂತ್ರಿ ಲಿಯಾಖತ ಅಲ್ಲಿಯವರು ಕಾಶ್ಮೀರದ ಬಗ್ಗೆ ವಿಚಾರ ವಿನಿಮಯ ನಡೆಸಿದರು. ಆದರೆ ಈ ವಿಷಯದಲ್ಲಿ ಒಮ್ಮತವಾಗಲಿಲ್ಲ.

ಈ ಮುರುಗಡೆಯಿಂದ ಪಾಕಿಸ್ತಾನ ಮತ್ತು ಹಿಂದುಸ್ತಾನಗಳ ಪರಸ್ಪರ ಸಂಬಂಧದಲ್ಲಿ ವ್ಯತಿರೇಕ ಉಂಟಾಗುವ ಸಂಭವವಿದೆ ಎಂದು ಹೇಳಬಹುದಾಗಿದೆ. ಇದರಿಂದ ಇನ್ನುಳಿದ ಮಹತ್ವದ ವಿಷಯಗಳ ಬಗ್ಗೆ ಮತ್ತೂ ಆರ್ಥಿಕ ಒಪ್ಪಂದದ ಬಗ್ಗೆ ತೊಡಕುಂಟಾಗಬಹುದಲ್ಲದೆ. ಕಾಶ್ಮೀರದಲ್ಲಿಯ ಯುದ್ಧ ಹೆಚ್ಚು ಉಗ್ರಸ್ಥಿತಿಗೆ ಬರಬಹುದಾಗಿದೆ. ಪಾಕಿಸ್ತಾನ ಗಡಿಯಿಂದ ಜಮ್ಮುದಲ್ಲಿನ ಹಳ್ಳಿಗಳಲ್ಲಿ ದಾಳಿ ನಡೆದದ್ದನ್ನು ಹಿಂದುಸ್ತಾನ ಸರಕಾರವು ಉಗ್ರ ಉಪಾಯಗಳಿಂದ ಹತ್ತಿಕ್ಕಲು ನಿರ್ಧರಿಸುವದಾಗಿ ತೋರುತ್ತದೆ. ರಾಜಕೀಯ ರಂಗದಲ್ಲಿ ಈ ಬಗ್ಗೆ ಚರ್ಚೆ ನಡೆದು ಉಗ್ರ ಉಪಾಯ ಅನಿವಾರ್ಯವೆಂಬ ಅಭಿಪ್ರಾಯಕ್ಕೆ ಪ್ರಾಶಸ್ತ್ಯದೊರೆಯ ತೊಡಗಿದೆ.

ಪಾಕಿಸ್ತಾನದ ತಟಸ್ಥ ಸೀಮೆಗಳಿಂದ ಹೀಗೆ ದಾಳಿಯಾಗುವದನ್ನು ಪಾಕಿಸ್ತಾನ ಸರಕಾರವು ತಡೆಯಲು ಅಸಮರ್ಥವಾಗಿದ್ದರೆ ಅಥವಾ ಒಪ್ಪದಿದ್ದರೆ ಹಿಂದುಸ್ತಾನ ಸರಕಾರವು ಅನಿವಾರ್ಯವಾಗಿ ಅಂತರ್ರಾಷ್ಟ್ರೀಯ ಅನುಶಾಸನವನ್ನು ಅನ್ವಯಿಸಿ ಕಾಶ್ಮೀರದ ಸಮಸ್ಯೆಯನ್ನು ಬಿಡಿಸಬೇಕಾಗುವದು. ಕಾಶ್ಮೀರದ ಭವಿತವ್ಯವನ್ನು ರೂಪಗೊಳಿಸುವ ಅಧಿಕಾರ ಭಾರತಕ್ಕಿರುವದೆಂಬುದರಲ್ಲಿ ಯಾವ ಸಂದೇಹವೂ ಇಲ್ಲ. ಕೆಲವರಂತೂ ಈ ಮಾತನ್ನು ಸಂಯುಕ್ತ ರಾಷ್ಟ್ರ ಸಂಘದೆದುರು ಮಂಡಿಸಬೇಕೆನ್ನುತ್ತಾರೆ.

ಕಾಶ್ಮೀರದ ದಾಳಿಯಲ್ಲಿ ಪಾಕಿಸ್ತಾನದ ಅಂಗವಿದ್ದೇ ಇರುವದೆಂಬ ಬಗ್ಗೆ ಭಾರತ ಸರಕಾರಕ್ಕೆ ಮನದಟ್ಟಾಗಿ ಹೋಗಿದೆ. ಈ ಬಗ್ಗೆ ಸಾಕಷ್ಟು ಆಧಾರಗಳೂ ಸಿಕ್ಕಿವೆ. ದಾಳಿಗಾರರಲ್ಲಿ ಅನೇಕರು ಪಾಕಿಸ್ತಾನ ಪ್ರಜೆಗಳಾಗಿದ್ದಾರಲ್ಲದೆ ಅತ್ಯಾಧುನಿಕ ಶಸ್ತ್ರಗಳಿಂದ ಸನ್ನದ್ಧರಾಗಿದ್ದಾರೆ. ಇದರಿಂದ ಪಾಕಿಸ್ತಾನವು ಹಿಂದುಸ್ತಾನದ ಬಗ್ಗೆ ದ್ರೋಹವನ್ನು ಬಗೆದಿದೆ ಎಂದು ಧಾರಾಳವಾಗಿ ಹೇಳಬಹುದು.

ಲಿಯಾಖತ ಅಲ್ಲಿಯವರು ಕಾಶ್ಮೀರ ಸಮಸ್ಯೆಯ ವಿಷಯದಲ್ಲಿ ಮಧ್ಯಸ್ಥಿಕೆ ಪಾತ್ರವಹಿಸಿದ್ದರು. ದಾಳಿಗಾರರು ಕಾಶ್ಮೀರ ಬಿಟ್ಟು ಹೊರಗೆ ಹೋಗುವವರೆಗೆ ಹೊಣೆಗಾರ ಸರಕಾರ ಅಲ್ಲಿ ಸ್ಥಾಪಿಸುವದು ಸಾಧ್ಯವಿಲ್ಲೆಂದು ಪಂ. ನೆಹರೂ ಹೇಳಿದರು. ಕಾಶ್ಮೀರದಲ್ಲಿ ಜನ ಮತಗಣನೆಯ ಬಗ್ಗೆ ಲಿಯಾಖತರು ಕೆಲವು ವಿಕ್ಷಿಪ್ತ ಕರಾರು ಹಾಕಿದರೆಂದು ತಿಳಿದು ಬರುತ್ತದೆ.

ಈ ಜನ ಮತ ಗಣನೆಯನ್ನು ಯಾರು ಹೇಗೆ ಮಾಡತಕ್ಕದ್ದೆಂಬ ಬಗೆಗೆ ಲಿಯಾಖತರಿಂದ ಸ್ಪಷ್ಟ ಯೋಜನೆಗಳೇ ಬರಲಿಲ್ಲವಂತೆ ಒಟ್ಟಿನ ಮೇಲೆ, ನಿಷ್ಪಕ್ಷಪಾತ ಅಧಿಕಾರಿಗಳ ನೇತೃತ್ವದಲ್ಲಿ ಕಾಶ್ಮೀರದ ಜನ ಮತ ಗಣನೆ ನಡೆಯಲಿದೆ ಎಂದು ಗ್ರಹಿಸಬಹುದಾಗಿದೆ.

ಶ್ರೀ ಕೆ. ಎಂ. ಮುನಶಿ

ಹಿಂದುಸ್ತಾನದ ಸರಕಾರದವರು ಶ್ರೀ ಕೆ ಎಂ. ಮುನಶಿಯವರನ್ನು ಹೈದರಾಬಾದ (ಡೆಕ್ಕನ್ನ) ದಲ್ಲಿ ಹಿಂದುಸ್ತಾನ ಏಜಂಟ ಜನರಲ್‌ರನ್ನಾಗಿ ನೇಮಿಸಿದ್ದಾರೆಂದು ಸರಕಾರೀ ಪ್ರಕಟನೆ ಹೊರಟಿದೆ. ಅವರು ಜಾನೇವರಿ ಮೊದಲನೇ ವಾರದಲ್ಲಿ ಅಧಿಕಾರ ಸ್ವೀಕರಿಸಿರುವರು.

ವ್ಯಾಪಾರ ಪ್ರಪಂಚ

ಮುಂಬಯಿ ಪೇಟೆ ಧಾರಣೆ

ಮುಂಬಯಿ ತಾ. ೨೫

ಬೆಳ್ಳಿ

ತಯಾರಿ ೧೬೮-೬-೦ ವಾಯದೆ ೧೬೭-೮-೦
ತುಕಡಾ ೧೬೮—೪—೦ ಚೆಂಬರ ೧೬೮—೮—೦

ಬಂಗಾರ

ತಯಾರಿ ೧೦೫-೩-೦ ವಾಯದಾ ೧೦೪-೧೩-೦
ಸಾವರಿನ ೬೭—೧೨—೦ (೨೪ ರಲ್ಲಿ)

ಎಣ್ಣೆ ಕಾಳುಗಳು

ಶೇಂಗಾ	೧೬೦—೮—೦
ಶೇಂಗಾ ಹೊಸದು	೫೧೩—೦—೦
ಅಗಸಿ	೫೧೬—೦—೦
ಎಂಡಿ	೧೪—೮—೦

ಅರಳೆ

ತಾ. ೨೪

ಜನೆವರಿ ೫೨೦-೮-೦ ಮಾರ್ಚ ೫೧೩-೮-೦
ಮೇ ೫೧೬—೦—೦ ಜುಲೈ ೫೦೦—೦—೦
ಸೆಪ್ಟೆಂಬರ ೫೨೨—೮—೦ ಹೆಚ್ಚು ೫೨೪—೦—೦
ರಿಂದ ೫೨೪-೮-೦ ಕಡಿಮೆ ೫೨೦-೮-೦

ಸರಕಾರವು ಸಟ್ಟಾವಿರುದ್ಧ ಉಗ್ರ ಉಪಾಯ ಕೈಕೊಳ್ಳಬಹುದೆಂಬ ನಂಬಿಗೆಯಿಂದ ಇಂದು ಅರಳೆ ಪೇಟೆಯು ಅಸ್ಥಿರವಾಗಿಯೇ ಮುಚ್ಚಿತು.

ತಾತಾ ಸ್ಟೀಲ್ ಡೆಫರ್ಡ್ ರೂ ೨೦೭೫ ಮತ್ತು ಬಾಂಬೆ ಡಾಯಿಂಗ್ಸ್ ರೂ ೧೨೭೦ರ ಸುತ್ತ ಇತ್ತು.

ಹುಬ್ಬಳ್ಳಿ

ಹೊಸ ಜಯವಂತ ಹತ್ತಿ ನಂ.	೧	೩೨೫-೩೭೦
"	೨	೩೧೫-೩೨೦
"	೩	೩೦೦-೩೧೦
ಹಳೇ ಜಯವಂತ ಹತ್ತಿ		೩೫೦-೩೫೮
ಜಿನ ಹಳೆದು		೨೩೦-೨೪೦
ಜಿನ ಹೊಸದು		೨೧೦-೨೨೫
ಅಪಲಂಡ ಡಬಲರೋಲ		೨೦೫-೨೧೫
ಸಾಜಿನ		೨೦೦-೨೧೦
ಅಪಲಂಡ ಹತ್ತಿಕಾಳು		೮॥-೯
ಜ ಹತ್ತಿಕಾಳು		೮।-೮॥

ಕನ್ನಡ ಸಾಹಿತ್ಯದ ಪ್ರಗತಿಯ ಒಳನೋಟ

[೬ನೇ ಪುಟದಿಂದ]

ಯಕ್ಕೆ ಸಹಜವಾದ ಗುಣಗಳು. ಅವನ್ನೆ ಪ್ರಾಮಾಣಿಕವಾಗಿ ಸಾಹಿತ್ಯದಲ್ಲಿ ಮೂಡಿಸಿದರೆ ಸಾಕಲ್ಲವೆ? ಇಂದು ಸಾಹಿತಿಯು ತಾನು ಸೃಷ್ಟಿಯಲ್ಲಿ ಹೃದಯದಿಂದ ಜೀವಿಸುವ ಪ್ರಾಣಿ ಎಂಬುದನ್ನು ಮರೆತಿದ್ದಾನೆ, ಅದಕ್ಕಾಗಿಯೆ ನಮ್ಮ ಸಾಹಿತ್ಯದಲ್ಲಿ ಹೆಚ್ಚಾಗಿ ಬಾಹ್ಯ ಆಡಂಬರ ಇಲ್ಲವೆ ಬುದ್ಧಿಯ ಬೆಡಗು ಕಂಡುಬರುತ್ತಿವೆಯಲ್ಲದೆ ಸುತ್ತಲಿನ ಸಮಾಜವನ್ನು ಮೈಗೂಡಿಸಿಕೊಂಡು ಅದಕ್ಕೆ ಭಾವನೆಯಿಂದ ಚೈತನ್ಯಗೊಳಿಸಿ ಕಲ್ಪನೆಯಿಂದ ಮೂರ್ತಿಗೊಳಿಸುವ ಕವಿತ್ವ ಇಲ್ಲವೇ ಇಲ್ಲ. ಸಾಹಿತಿಯಲ್ಲಿ ಜೀವಿಸುವ ಸತ್ವವಿದ್ದರೆ ಸಮಕಾಲೀನ ಸಮಾಜ-ಜೀವನದಲ್ಲಿ ಅವನ ಬೆರಕೆಯಾಗುವುದು; ಹಾಗೆ ಒಂದುಗೂಡದ ಸಾಹಿತಿ ಸಾಹಿತಿಯಲ್ಲ "ಸೋಗಿತಿ" ಎಂದು ಧೈರ್ಯವಾಗಿ ಹೇಳಬಹುದು.

ಇಂದು ಪಂಡಿತ — ಪಾಮರ ರಂಜನೆಯದೊಂದು ವಾದವೆದ್ದಿದೆ. ಇಂದಿನ ಸಾಹಿತಿ ಪಾಮರ ರಂಜನೆಗಾಗಿ ಬರೆಯಬೇಕು ಎಂದು ಅನೇಕರ ವಾದ. ಅದನ್ನು ಕೇಳಿದಾಗ ನಮ್ಮ ಸಾಹಿತಿಗಳೆ ಹೆಚ್ಚಾಗಿ ಪಾಮರರಾಗಿರಬಹುದೆ ಎಂದು ನನಗೆ ಸಂದೇಹ. ನಮ್ಮ ಸಮಾಜದ ಪಾಮರರು ಪಾಮರರಾಗಿಯೇ ಉಳಿಯುವರೆ? ಉಳಿಯಬೇಕೆ? ಅವರ ರಂಜನೆಗಾಗಿಯೇ ಬರೆಯುತ್ತ ಹೋದರೆ ಅವರನ್ನು ಪಾಮರರಾಗಿಯೆ ಉಳಿಯಲು ಉತ್ತೇಜಿಸಿದಂತಾಗುವುದಿಲ್ಲವೆ? ಪಂಡಿತ—ಪಾಮರ ವಾದದ ಅರ್ಥ ಹಾಗಲ್ಲ. ಕಾವ್ಯದ ಅಭ್ಯಾಸ ಮಾಡಿ, ಅಲಂಕಾರಗಳ ಅರ್ಭಟೆಯಲ್ಲಿ, ಕಲ್ಪನೆಯನ್ನು ಮನಬಂದಂತೆ ಕುಣಿಸಿ, ಬುದ್ಧಿಯ ಬೆಡಗನ್ನು ಪ್ರದರ್ಶಿಸಲು ಮಾತ್ರ ಬರೆದರೆ ಅದು ಪಂಡಿತ-ಸಾಹಿತ್ಯ. ದಿನನಿತ್ಯ ಜೀವನದ, ಸಾಮಾನ್ಯನ ಅನುಭವಗಳನ್ನು ಶುದ್ಧ ಹೃದಯದ ಆವೇಶದಲ್ಲಿ ಪ್ರಾಮಾಣಿಕವಾಗಿ ಬರೆದರೆ ಅದು ಪಾಮರ ಸಾಹಿತ್ಯ ಎಂದು ನನ್ನ ಅರ್ಥ. ಅದಲ್ಲವಾದರೆ, ೧೦೦ ಕ್ಕೆ ೯೦ ರಷ್ಟು ನಿರಕ್ಷರಿಗಳಿದ್ದ ನಮ್ಮ ದೇಶದಲ್ಲಿ, ೧೦೦ ಕ್ಕೆ ೯೮ ರಷ್ಟು ಜನ ಶಿಕ್ಷಣದ ಸಂಸ್ಕಾರವಿಲ್ಲದಲ್ಲಿ ಯಾವ ಗ್ರಂಥವನ್ನೂ ಬರೆಯಲು ಶಕ್ಯವಾಗಲಿಕ್ಕಿಲ್ಲ!

ಗೆಳೆಯರೆ, ನನ್ನ ಮಾತನ್ನು ಇನ್ನು ಮುಗಿಸುತ್ತೇನೆ. ದೇಶವು ಒಂದು ಎಂಬ ನಾಗರಿಕತೆ ಹುಟ್ಟಿ ಭಾರತದಲ್ಲಿ ಸುಖ — ಶಾಂತಿ — ಸಮೃದ್ಧಿಗಳು ಬೆಳೆಯುವಂತಾಗಲು, ಆ ದೇಶದಲ್ಲಿ ಕರ್ನಾಟಕವೂ ಒಂದಾಗಿ ತಲೆ ಎತ್ತಿ ನಿಲ್ಲಲು ನಮ್ಮ ಸಾಹಿತಿಗಳಿಂದ ಸೇವೆಯಾಗಲಿ, ಸ್ಫೂರ್ತಿ ದೊರೆಯಲಿ ಎಂದು ಹಾರೈಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಧಾರವಾಡ

ಗದಗಿನಲ್ಲಿ ಕಳೆದ ತಿಂಗಳ ಕೂಡಿದ ನೇಕಾರ ಪರಿಷತ್ತಿನಲ್ಲಿ ಗೊತ್ತಾದಂತೆ ನೇಕಾರ ಸಂಘಗಳ ಪರಿಷತ್ತಿನ ಶಿಷ್ಟಮಂಡಳವು ಶ್ರೀ. ರಾ. ಶ್ರೀ. ಹುಕ್ಕೇರಿಕರರ ನೇತೃತ್ವದಲ್ಲಿ ಮಾನ್ಯ ದಿನಕರರಾವ ದೇಸಾಯಿ ಮತ್ತು ಮಾನ್ಯ ವೈಕುಂಠಲಾಲ ಮೆಹತಾ ಇವರನ್ನು ಕಂಡು ಕೈಮಗ್ಗದ ಬಟ್ಟೆ ಮಾರುವ ನೇಕಾರರಿಗಿತ್ತ ಲಾಯಸೆನ್ಸ ಪಡೆದುಕೊಳ್ಳಬೇಕೆಂಬ ನಿರ್ಬಂಧವನ್ನು ತೆಗೆದುಹಾಕಬೇಕೆಂಬ ಬಗ್ಗೆ ಕೇಳಿಕೊಂಡರು. ಅವಶ್ಯ ಏರ್ಪಾಡು ಮಾಡುವದಾಗಿ ಮಂತ್ರಿಗಳು ಆಶ್ವಾಸಿಸಿದರು.

ಹುಬ್ಬಳ್ಳಿಯಲ್ಲಿ ನಿರಾಶ್ರಿತರ ಸಹಾಯಾರ್ಥವಾಗಿ ಹಾಯಸ್ಕೂಲ ಕಾಲೇಜ ವಿಧ್ಯಾರ್ಥಿಗಳು ನಡಸಿದ ವಿವಿಧ ವಿನೋದಾವಳಿಗಳಿಂದ ೬೫೦ ರೂ. ನಿಧಿ ಸಂಗ್ರಹಿತವಾಯಿತು.

ಹುಬ್ಬಳ್ಳಿಯ ಗರ್ಲ್ಸ ಇಂಗ್ಲಿಷ ಸ್ಕೂಲಿನಲ್ಲಿ ಓದುತಿದ್ದ ೧೪ ವರ್ಷದ ಓರ್ವ ವಿದ್ಯಾರ್ಥಿನಿಯು ಕಣ್ಮರೆಯಾಗಿರುವಳು. ೨೨ ನೇ ತಾರೀಕು ಅವಳು ಶಾಲೆಗೆ ಹೋದವಳು ತಿರುಗಿ ಮನೆಗೆ ಬಾರದ್ದರಿಂದ ಪಾಲಕರು ಪೋಲೀಸರಿಗೆ ವರದಿ ಕೊಟ್ಟರು. ಶಾಲೆಯಲ್ಲಿ ಇದ್ದಾಗ ಯಾವನೋ ಒಬ್ಬನು ಅವಳನ್ನು ಮನೆಯವನಂತೆ ನಟಿಸಿ ಕರೆದುಕೊಂಡು ಹೋದನೆಂದು ಹೇಳಲಾಗುತ್ತದೆ.

ಹುಬ್ಬಳ್ಳಿ ನಗರ ಸಭೆಯ ಸದಸ್ಯರೂ ಪ್ರಮುಖ ವ್ಯಾಪಾರಿಗಳೂ ಆಗಿರುವ ಶ್ರೀ. ಹಜರತಸಾಹೇಬ ಮುನಶಿಯವರನ್ನು ಬಾಲಿಕೆಯೋರ್ವಳ ಅಪಹಾರದ ಪ್ರಕರಣದಲ್ಲಿ ಸೆರೆಹಿಡಿದು ಜಾಮೀನ ಮೇಲೆ ಬಿಡುಗಡೆ ಮಾಡಲಾಗಿದೆ ಗೋವೆಗೆ ಒಯ್ಯಲ್ಪಟ್ಟ ಈ ಬಾಲಿಕೆಯನ್ನು ಇಲ್ಲಿಯ ಫೌಜದಾರ ಶ್ರೀ. ಕರಡಿಯವರು ಈ ಮೊದಲು ಬಿಡುಗಡೆ ಮಾಡಿಕೊಂಡು ತಂದಿರುವರು.

ಹುಬ್ಬಳ್ಳಿಯಲ್ಲಿ ಸೋಶಲ್ ಕ್ಲಬ್ಬಿನೆದುರಿಗಿರುವ ಭೀಮಸದನದಲ್ಲಿ ಶ್ರೀಮತಿ ಸುಲೋಚನಾಬಾಯಿ ಸೋಂದೆ ಇವರ ಮನೆಯ ಕೀಲೀ ಮುರಿದು ಸುಮಾರು ಸಾವಿರ ರೂಪಾಯಿಗಳ ಸೀರೆಗಳನ್ನು ಬೆಳ್ಳಿ ಬಂಗಾರ ಸಾಮಾನಗಳನ್ನು ಸುಮಾರು ೨೦-೨೫ ಸಾವಿರ ರೂಪಾಯಿಗಳ ಶೇರ ಸರ್ಟಿಫಿಕೇಟಗಳನ್ನು ಕಳವು ಮಾಡಿಕೊಂಡು ಹೋಗಿರುವರಲ್ಲದೆ ಅವರ ಗಂಡ ಮಿಲಿಟರಿಯಲ್ಲಿ ಇದ್ದಾಗ ನಡೆದ ಪತ್ರವ್ಯವಹಾರದ ಪತ್ರಗಳನ್ನು ಒಯ್ದಿರುವರು. ಪೋಲೀಸರು ರೀತಿ ಪ್ರಕಾರ ಪಂಚನಾಮೆ ಮಾಡಿದರು.

ಸೂಡಿಯಲ್ಲಿ ಕಳೆದ ಮಂಗಳವಾರ ರಾತ್ರಿ ಭಾವಸಾರ ಕ್ಷತ್ರಿಯ ಸಮಾಜದ ಶ್ರೀ. ತುಳಜಾರಾಮ ಜಾಧವ ಇವರು ಮರಣ ಹೊಂದಲು ಅವರ ಸಹಧರ್ಮಿಣಿ ದೇವಕಿಬಾಯಿಯವರು ಮುಂದೆ ಸ್ವಲ್ಪೇ ಹೊತ್ತಿನಲ್ಲಿ ಭಾವಿಯಲ್ಲಿ ಧುಮುಕಿ ಸಹಗಮನ ಮಾಡಿದರು. ದಂಪತಿಗಳಿಬ್ಬರ ಶವಗಳನ್ನು ಒಂದೇ ಸಿದಗಿಯಲ್ಲಿರಿಸಿ ಅಂತ್ಯಸಂಸ್ಕಾರ ಮಾಡಿದರು.

ಕರ್ನಾಟಕದಲ್ಲಿ ಒಟ್ಟಿಗೆ ೨ಲಕ್ಷ ಕಾಂಗ್ರೆಸ ಸದಸ್ಯರಾಗಿರುವರೆಂದು ಪ್ರಾಂತಿಕ ಕಾಂಗ್ರೆಸ ಸಮಿತಿಯವರು ಪ್ರಸಿದ್ಧಿಸಿದ್ದಾರೆ. ಮೈಸೂರು ಸಂಸ್ಥಾನದಲ್ಲಿ ಸತ್ಯಾಗ್ರಹದ ಮೂಲಕ ಸದಸ್ಯರನ್ನು ಮಾಡುವದಾಗಿಲ್ಲ.

ಮುಂಬಯಿ ಸರಕಾರದ ಉಪಮಂತ್ರಿಗಳಾದ ಕುಂಟೆಯವರು ಹುಬ್ಬಳ್ಳಿಗೆ ಬಂದಿದ್ದರು ಇಲ್ಲಿಯ ಮತ್ತು ಧಾರವಾಡದ ಗೃಹರಕ್ಷಕದಳಗಳನ್ನು ಸಂದರ್ಶಿಸಿ ಸೂಕ್ತವಾದ ಸಲಹೆಯನ್ನು ಕೊಟ್ಟರು. ಗಾಂಧೀ ಚೌಕಿನಲ್ಲಿ ಸಾರ್ವಜನಿಕ ಭಾಷಣ ಮಾಡುತ್ತ ಸ್ವತಂತ್ರ ಹಿಂದುಸ್ತಾನದಲ್ಲಿ ಪ್ರತಿಯೊಬ್ಬ ನಾಗರಿಕನ ಹೊಣೆ ಹೆಚ್ಚಿಗಿದ್ದು ಎಲ್ಲರೂ ಅದನ್ನು ನಿರ್ವಹಿಸಲು ಮನಸಾ ಪ್ರಯತ್ನಿಸಬೇಕೆಂದು ಹೇಳಿದರು.

ಕರ್ನಾಟಕ

ಬೆಳಗಾವಿ

ಮುಂಬಯಿ ಸರಕಾರದ ಗೃಹಮಂತ್ರಿಗಳಾದ ಮಾನ್ಯ ಮುರಾರಜಿ ದೇಸಾಯಿಯವರು ಬೆಳಗಾವಿಯಲ್ಲಿ ಪತ್ರಿಕಾ ಪ್ರತಿನಿಧಿಗಳ ಸಭೆಯಲ್ಲಿ ಭಾಷಣ ಮಾಡುತ್ತ ಕರ್ನಾಟಕ ಏಕೀಕರಣಕ್ಕೆ ತಾವು ಮೊದಲೆ ಬೆಂಬಲಕೊಟ್ಟಿರುವದಾಗಿಯೂ ಅಹಮದಾಬಾದದಲ್ಲಿಯ ತಮ್ಮ ಭಾಷಣವು ವಿಕೃತವಾಗಿ ಪ್ರಸಿದ್ಧವಾಗಿರುವದಾಗಿಯೂ ಹೇಳಿದರು. ಮೊದಲು ತಾವು ಭಾಷಾನ್ವಯ ಪ್ರಾಂತರಚನೆಗೆ ವಿರುದ್ಧವಿದ್ದವೆಂದೂ ಆದರೆ ಹಿಂದುಗಡೆ ಮತ ತಿರುಗಿಸಿಕೊಂಡೆನೆಂದೂ ಹೇಳಿದರು.

ಬೆಳಗಾವಿ ಜಿಲ್ಹಾ ಪೂರೈಕೆ ಅಧಿಕಾರಿ ಹಾಗು ಸಂಬಂಧಿಸಿದ ಮಾಮಲೇದಾರರನ್ನು ಸಸ್ಪೆಂಡ ಮಾಡಿ ಅವರ ಮೇಲೆ ಹಾಗು ಆಗಿನ ಕಲೆಕ್ಟರರು ಮತ್ತು ಗೋಡೌನಕೀಪರರ ಮೇಲೆ ಖಟ್ಲೆ ಹಾಕಬೇಕೆಂದು ಮುಂಬಯಿ ಸರಕಾರದವರು ದಕ್ಷಿಣ ಭಾಗದ ಕಮೀಶನರಿಗೆ ವಿಧಿಸಿದ್ದಾರೆ.

ವಿಜಾಪುರ

ಬಾಗಲಕೋಟೆಯಲ್ಲಿ ಶ್ರೀಮನ್ನಿರಂಜನ ನವಲಗುಂದ ಸ್ವಾಮಿಗಳ ಅಧ್ಯಕ್ಷತೆಯಲ್ಲಿ ಶ್ರೀ ಶಕ್ತಿ ಟಾಕೀಜ ಸಿನೇಮಾ ಮಂದಿರದ ಉದ್ಘಾಟನೆ ಸಮಾರಂಭವು ಜರುಗಿತು. ಇಲ್ಲಿಯ ಪ್ರಸಿದ್ಧ ಸಾವುಕಾರರಾದ ಶ್ರೀಮಂತ ಸಕ್ರಿ ವೆಂಕಪ್ಪನವರು ಈ ಸಿನೇಮಾ ಮಂದಿರವನ್ನು ಆಧುನಿಕ ಸಕಲ ಸೌಕರ್ಯಗಳೊಡನೆ ಭವ್ಯವಾಗಿ ಕಟ್ಟಿಸಿದ್ದು ಸಿನೇಮಾ ಮಂದಿರಗಳ ಕೊರತೆಯನ್ನು ಹೋಗಲಾಡಿಸದಂತಾಗಿದೆ. ಉದ್ಘಾಟನ ಸಮಾರಂಭದ ಕಾಲಕ್ಕೆ ಶ್ರೀ ಕಳ್ಳಿ ತಿಪ್ಪಣ್ಣಶಾಸ್ತ್ರಿಗಳು ಮತ್ತು ಸುಬುದ್ಧಿ ಹಿರೇಮಠರು ಭಾಷಣ ಮಾಡಿದರು.

ಸಿಂದಗಿ ತಾಲೂಕ ಕಲಕೇರಿಯಲ್ಲಿ ಗುದಾಮು ಕೀಪರರಾಗಿದ್ದ ಶ್ರೀ. ರಾಮರಾವ ಚೌಧರಿಯವರ ಮೇಲೆ ಸುಮಾರು ೩೦೦೦ ರೂ. ಗಳ ಜೋಳ ಗೋದಿ ಸಜ್ಜೆ ಮೊದಲಾದ ಧಾನ್ಯಗಳ ಮತ್ತು ೩೦೦೦ ರೂ. ರೋಖ ಅಪರಾತಫರ ಮಾಡಿದ ಬಗ್ಗೆ ಖಟ್ಲೆ ನಡೆದು ಆ್ಯಡಿಶನಲ್ ಜಜ್ಜರು ೩ ವರ್ಷ ಕಠಿನ ಶಿಕ್ಷೆ ಮತ್ತು ೧೦೦೦ ರೂ. ದಂಡ ವಿಧಿಸಿದರು. ದಂಡ ಕೊಡದಿದ್ದರೆ ಮತ್ತೆ ಒಂದು ವರ್ಷ ಶಿಕ್ಷೆಯನ್ನು ಅನುಭವಿಸಬೇಕು.

ವಿಜಾಪುರದ ಪ್ರಸಿದ್ಧ ವ್ಯಾಪಾರಿಗಳಾದ ಚನಮಲ್ಲಪ್ಪ ಕುರ್ಲೆಯವರು ೮೦ನೇ ವಯಸ್ಸಿನಲ್ಲಿ ೧೮ ನೇ ತಾರೀಕು ಕೈಲಾಸವಾಸಿಗಳಾದರು. ಇವರ ಮರಣದ ನಿಮಿತ್ತ ಸಿದ್ಧೇಶ್ವರ ಹಾಯಸ್ಕೂಲ, ವಿಜಯಾ ಕಾಲೇಜ ಮತ್ತು ಅಂಗಡಿಗಳು ಮುಚ್ಚಿದ್ದವು. ಸ್ಮಶಾನ ಯಾತ್ರೆಗೆ ಸಾವಿರಾರು ಜನ ನೆರೆದಿದ್ದರು.

ಬಳ್ಳಾರಿ

ಹಿಂದುಸ್ತಾನ ಸರಕಾರದ ಮಂತ್ರಿಗಳಾದ ಶ್ರೀ ಎನ್. ವಿ. ಗಾಡಗೀಳರು ಮದ್ರಾಸ ಮಂತ್ರಿಗಳಾದ ಶ್ರೀ ಭಕ್ತವತ್ಸಲಂ, ಸೀತಾ ರಾಮರೆಡ್ಡಿ, ಮಾಧವ ಮೆನನ್, ಗೋಪಾಲ ರೆಡ್ಡಿ ಇವರೊಡನೆ ೨೨ ನೇ ತಾರೀಕು ಮಧ್ಯಾನ್ಹ ಹೊಸಪೇಟೆಗೆ ಹೋದರು. ಕಾಂಗ್ರೆಸ ಪ್ರಮುಖರು ಸರಕಾರೀ ಉದ್ಯೋಗಸ್ಥರು ಅವರನ್ನು ಸ್ವಾಗತಿಸಿದರು. ತುಂಗಭದ್ರಾ ಆಣೆಕಟ್ಟಿನ ಯೋಜನೆಯನ್ನು ಕಾರ್ಯರೂಪದಲ್ಲಿ ತರಬೇಕೆಂದು ಮುಂತಾಗಿ ಬಿನ್ನವತ್ತಳೆಯಲ್ಲಿ ಕೇಳಿಕೊಳ್ಳಲಾಗಿದೆ.

ಹೊಸಪೇಟೆ ತಾಲೂಕಿನಲ್ಲಿ ಒಂದಾದರೂ ಖಾದಿ ಉತ್ಪತ್ತಿ ಕೇಂದ್ರವಿಲ್ಲದ್ದರಿಂದ ಖಾದೀ ಧಾರಿಗಳಿಗೆ ಖಾದಿ ಸಿಕ್ಕುವದು ಕಠಿನವಾಗಿದೆ. ಈ ಕೊರತೆಯನ್ನು ಹೋಗಲಾಡಿಸಲು ಚರಖಾ ಸಂಘದ ಅಪ್ಪಣೆಯನ್ನು ಪಡೆದು ಶುದ್ಧ ಖಾದಿ ಅಂಗಡಿಯ ಏಜನ್ಸಿಯನ್ನು ತೆರೆಯಲಾಗಿದೆ ಇದರ ಲಾಭವನ್ನು ಎಲ್ಲರೂ ಪಡೆಯಬೇಕೆಂದು ಮರಿಸ್ವಾಮಯ್ಯ ಮಠದ ಪಾಟೀಲ ನಾರಾಯಣ ದೇವರಕೆರೆ ಇವರು ತಿಳಿಸುತ್ತಾರೆ.

ಕನ್ನಡ ಸಂಸ್ಥಾನ

ಚಿತ್ರದುರ್ಗದ ಗೊಲ್ಲಾಲಯ್ಯನ ಹಟ್ಟಿಯಲ್ಲಿ [illegible] ಗೋವಿಂದನು ಎಂಬಾತನು ಗಂಗವ್ವ ಎಂಬಾಕೆಯನ್ನು ಹೆಚ್ಚು ಹಣ ಕೊಡುತ್ತೇನೆಂದು ಹೇಳಿ ಕರೆದುಕೊಂಡು ಹೋಗಿ ಒಡವೆ ಸೀರೆ ಮುಂತಾದವುಗಳನ್ನು ಅಪಹರಣ ಮಾಡಿದನೆಂಬ ಆಪಾದನೆಯ ಮೇಲೆ ಪೋಲೀಸರು ಖಟ್ಲೆ ಹೂಡಿದ್ದರು. ಅದರ ವಿಚಾರಣೆಯಾಗಿ ಪ್ರಥಮ ನ್ಯಾಯಾಧೀಶರು ಗೋವಿಂದನು ಇವನಿಗೆ ೬ ತಿಂಗಳ ಕಠಿನ ಶಿಕ್ಷೆ ವಿಧಿಸಿದರು.

ಚಿತ್ರದುರ್ಗದ ನಂಜುಂಡೇಶ್ವರ ಜಿನ್ನಿಂಗ್ ಫ್ಯಾಕ್ಟರಿಯಲ್ಲಿ ಇರುವ ನಂಬರ ೨ನೇ ಸರಕಾರಿ ಗೋದಾಮಿನಿಂದ ೨ ಚೀಲ ತೊಗರಿ ಕಳವಾಗಿ ಮಹಮ್ಮದ ಯೂಸುಫಖಾನ ಎಂಬವನು ಗಾಡಿಯಲ್ಲಿ ಸಾಗಿಸುತ್ತಿದ್ದಾಗ ಪೋಲೀಸರು ಅವನನ್ನು ಹಿಡಿದರು. ಆಸಾಮಿಯು ಫರಾರಿಯಾಗಿದ್ದಾನೆಂದು ತಿಳಿಯುತ್ತದೆ.

ಸಾಂಗಲಿಯ ವಿಲಿಂಗ್ಡನ ಕಾಲೇಜಿಗೆ ಇಚಲಕರಂಜಿಯ ಜಾಗೀರದಾರರು ೮೦ ಸಾವಿರ ರೂಪಾಯಿಗಳನ್ನು ಕೊಟ್ಟಿರುವರಲ್ಲದೆ ಸೊಸಾಯಿಟಿಯ ಉಪಾಧ್ಯಕ್ಷರಾಗಿರುವರು.

ಉತ್ತರ ಕನ್ನಡ

ಪೂರೈಕೆ ಶಾಖೆಯ ಕಾರ್ಯಕರ್ತರಿಗೆ ಮನೆಗೆ ಅಪ್ಪಣೆ ಕೊಡುವದು ಫೆಬ್ರುವರಿಯ ಕೊನೆಯಲ್ಲಿ ಪ್ರಾರಂಭವಾಗುವದೆಂದು ಜಿಲ್ಹಾ ಕಲೆಕ್ಟರರು ಒಂದು ಸಂದರ್ಶನದಲ್ಲಿ ಹೇಳಿದರು. ಅಲ್ಲಿಯ ಜನರಲ್ಲಿ ನೂರಕ್ಕೆ ೬೦ರಷ್ಟು ಜನರನ್ನು ಮನೆಗೆ ಕಳಿಸಲಾಗುವದು. ಸೀಮಾ ಕಚೇರಿಗಳ ನೋಕರರ ಸಂಪೂರ್ಣ ವಿಸರ್ಜನ ಜೂನ ೩೦ಕ್ಕೆ ಆಗುವದೆಂದು ಅವರು ಹೇಳಿದರು.

ಉತ್ತರ ಕನ್ನಡ ಜಿಲ್ಹೆಯಿಂದ ಗೋವೆಗೆ ಅಕ್ಕಿ ಸಾಗಿ ಹೋಗದಂತೆ ನೋಡಿಕೊಳ್ಳಲು ೧೦೦ ಪೋಲೀಸರ ಒಂದು ವಿಶೇಷ ಪಡೆಯನ್ನು ಗಡಿಯಲ್ಲಿ ಇಡಲಾಗುವದೆಂದೂ ಜಿಲ್ಹಾ ಕಲೆಕ್ಟರರು ಹೇಳಿದರು.

ಕರ್ನಾಟಕದ ಹೆಡ್ ಮಾಸ್ತರ ಬೋರ್ಡಿನ ಸಭೆಯು ಕಳೆದವಾರ ಕುಮಟೆಯಲ್ಲಿ ಸೇರಿ ಹಲವು ಅಪರಿಹಾರ್ಯ ಕಾರಣಗಳ ಮೂಲಕ ಹೆಡ ಮಾಸ್ತರರ ಪರಿಷತ್ತನ್ನು ಜಾನೇವರಿ ೩೧ ಹಾಗು ಫೆಬ್ರುಆರಿ ೧ಕ್ಕೆ ಮುಂದರಸಬೇಕೆಂದು ನಿರ್ಣಯಿಸಲಾಯಿತು. ಸ್ಥಾಪಿತ ಸಮಿತಿಯು ಸೂಚಿಸಿದ ಸಹಾಯ ಧನ ಹಾಗು ಸಂಬಳ ಪ್ರಮಾಣದ ಅಸಮಾಧಾನಕರವೆಂದೂ ಸರಕಾರಕ್ಕೆ ತಿಳಿಸಲಾಯಿತು. ಒಪ್ಪಿದ ವೆಚ್ಚದಲ್ಲಿ ನೂರಕ್ಕೆ ೪೦ ಮತ್ತು ಶಾರೀರಿಕ ಶಿಕ್ಷಣದ ವೆಚ್ಚದಲ್ಲಿ ನೂರಕ್ಕೆ ೫೦ ಕೊಡಬೇಕೆಂದೂ ಸಂಬಳ ಪ್ರಮಾಣ ನುರಿತ ಪದವೀಧರರಿಗೆ ೧೦೦ರಿಂದ ೨೪೦ ಮ್ಯಾಟ್ರಿಕ್ ಎಸ್. ಟಿ. ಸಿ. ೬೦ ೧೫೦ ಇರಬೇಕೆಂದು ಕೇಳಿಕೊಳ್ಳಲಾಯಿತು.

ಸಿದ್ದಾಪುರ ತಾಲೂಕು ಹೇರೂರಲ್ಲಿಯ ಟ್ರಾನ್ಸಪೋರ್ಟ ಪರಮಿಟ್ ಫಾರ್ಮು ಕೊಡುವ ಅಧಿಕಾರಿಗಳು ಜನರಿಗೆ ಬಹಳ ತೊಂದರೆ ಕೊಡುತ್ತಾರೆಂಬುದಾಗಿಯೂ ಅಷ್ಟಾದರೂ ಮೇಲಧಿಕಾರಿಗಳು ಅತ್ತ ಲಕ್ಷ್ಯ ಕೊಡುವುದಿಲ್ಲವೆಂಬುದಾಗಿಯೂ ರೈತನೊಬ್ಬನು ದೂರು ಕೊಡುತ್ತಾನೆ.

ರಾಮಶೇಟ ಎಂಬುವವನು ಎರಡನೆ ಮದುವೆಯನ್ನು ಮಾಡಿಕೊಂಡ ಬಗ್ಗೆ ಕಾರವಾರ ಜಿಲ್ಹಾ ನ್ಯಾಯಾಧೀಶರು ೨೦೦ ರೂ ಗಳ ದಂಡ ಮತ್ತು ೨ ತಿಂಗಳ ಸಕ್ತ ಮಶಿಕ್ಷೆಯನ್ನು ವಿಧಿಸಿದರು ಮಗಳು ಅವಳ ಸಹೋದರ ಮತ್ತು ಮದುಮಗನ ತಾಯಿಗೆ ಅನುಕ್ರಮವಾಗಿ ೨೫ ರೂ, ೧೨೫ ರೂ. ಮತ್ತು ೧೦೦ ರೂಪಾಯಿಗಳ ದಂಡ ವಿಧಿಸಲಾಯಿತು.

ಬೆಂಗಳೂರಿನಲ್ಲಿ ಧೂಮಕೇತು

೧೮ನೇ ತಾರೀಕು ಸಾಯಂಕಾಲ ಬೆಂಗಳೂರಿನಲ್ಲಿ ರಾತಿ ಶುಕ್ರನ ಎಡಗಡೆಗೆ ಕೆಲವು ಅಂಶ ಮೇಲ್ಗಡೆ ಚುಕ್ಕೆಯಂತೆ ಹೊಸ ಧೂಮಕೇತು ಕಾಣಿಸಿತೆಂದು ಮೈಸೂರು ಸಂಸ್ಥಾನದ ಭೂಗರ್ಭ ಶಾಸ್ತ್ರದ ಮುಖ್ಯಾಧಿಕಾರಿಗಳು ತಿಳಿಸಿದರು.

ಮೈಸೂರ ಸರಕಾರದ ಮುಂಗಡ ಪತ್ರ

ಮದ್ಯಪಾನದ ಉಚ್ಚಾಟನೆಗಾಗಿ ಪಂಚವಾರ್ಷಿಕ ಯೋಜನೆ

ಮೈಸೂರು ಪ್ರಜಾಪ್ರತಿನಿಧಿ ಸಭೆಯು [illegible] ದಿನದ ಕಾರ್ಯಕಲಾಪ [illegible] ನೇ ತಾರೀಖಿನ ದಿವಸ [illegible] ರಾಮಸ್ವಾಮಿ ಮುದಲಿಯಾರರ ಅಧ್ಯಕ್ಷತೆಯಲ್ಲಿ ನಡೆಯಿತು. ಹಣಕಾಸಿನ ಮಂತ್ರಿಗಳಾದ ಶ್ರೀ ಕೆ. ಟಿ. ಭಾಷ್ಯಂರು ಮೈಸೂರ [illegible] ಮುಂಗಡ ಪತ್ರವನ್ನು ಮಂಡಿಸಿದರು. [illegible] ಚರ್ಚೆಯಿಲ್ಲದೆ ಅದು ಸ್ವೀಕೃತವಾಯಿತು. ಅಂಗಡಿ, [illegible] ಗೃಹಕೈಗಾರಿಕೆ [illegible] ವುಗಳಲ್ಲಿ [illegible] ಮಾಡುವದೆ [illegible] ಅದು. [illegible] ರಿಂದ [illegible] ಗಂಟೆಗಳ ಕೆಲಸ, [illegible] ಕೆಲಸಗಾರರಿಗೆ [illegible] ವೇತನ [illegible] ಸೌಲಭ್ಯಗಳು ದೊರೆವುವು.

ಅರಣ್ಯಗಳಲ್ಲಿ [illegible] ಮಾಡುವದನ್ನು ನಿಲ್ಲಿಸಬೇಕು. ಗ್ರಾಮೋದ್ಯೋಗ [illegible] ವನ್ನು ಸಮಾಧಾನಕರವಾಗಿ [illegible] ಹೋಗಲು ತಾಲೂಕ ಜಿಲ್ಹಾ ಮಧ್ಯವರ್ತಿ ಸಮಿತಿಗಳನ್ನು ಸ್ಥಾಪಿಸಬೇಕೆಂಬ ಗೊತ್ತುವಳಿಗಳು ಸ್ವೀಕೃತವಾದವು. [illegible] ಶ್ರೀ. ಚಂದ್ರಶೇಖರಯ್ಯನವರು ರಾಜೀನಾಮೆ ಕೊಟ್ಟಿದ್ದರಿಂದ ಕೆ. ಎಸ್. [illegible] ಅಸ್ಥಾನಕ್ಕೆ ಆರಿಸಲ್ಪಟ್ಟರು ಅವರಿಗೆ [illegible] ಮತಗಳು ಪ್ರತಿಸ್ಪರ್ಧಿಗಳಾದ ಎಂ. [illegible] ಗೌಡರಿಗೆ ೬೬ ಮತಗಳು ಬಿದ್ದವು.

ಅನವಶ್ಯಕ ಸ್ಥಾನಗಳನ್ನು ರದ್ದುಪಡಿಸಿ ಸರಕಾರೀ ವೆಚ್ಚದ [illegible] ಬಗ್ಗೆ ವರದಿ ಮಾಡಲು ಮತ್ತು ಸಂಬಳಗಳನ್ನು [illegible] ತಿರ್ಗಿಸಲು ಸಮಿತಿಯೊಂದನ್ನು ನೇಮಿಸಬೇಕೆಂದು ಶ್ರೀ ಪನ. ಮಂಚಯ್ಯನವರು ತಂದ ಗೊತ್ತುವಳಿ ಸರ್ವಾನುಮತದಿಂದ ಸ್ವೀಕೃತವಾಯಿತು. ಕೊನೆಯಲ್ಲಿ ಸಧ್ಯದ ಅಧಿವೇಶನದಲ್ಲಿಯ ಕಾರ್ಯದ ಸಿಂಹಾವಲೋಕನವಾಗಿ ಸಭೆಯು ಅನಿಯಮಿತ ಅವಧಿವರೆಗೆ ಮುಂದರಿಯಿತು.

ಆಹಾರ ಪರಿಸ್ಥಿತಿ

ಮುಖ್ಯಮಂತ್ರಿಗಳಾದ ಶ್ರೀ ಕೆ. ಸಿ. ರೆಡ್ಡಿಯವರು ಕಾರ್ಯಕಲಾಪದ ಸಿಂಹಾವಲೋಕನ ಮಾಡುತ್ತ ಮಾಪನ್ನದ ಮಸೂದೆಗಳನ್ನು ಸ್ವೀಕರಿಸಿದ ಬಗ್ಗೆ ಸಭೆಯ ಅಭಿನಂದನ ಮಾಡಿ ಸಧ್ಯದ ಸರಕಾರವು ತಾತ್ಪುರ್ತಿಕ [illegible] ರಿಂದ ಮುಂದಿನ ಧೋರಣ ಹೇಳುವದು ಅಕಾಲಿಕವಾಗುವದೆಂದು ಹೇಳಿದರು. ಆಹಾರ ವಿಷಯದಲ್ಲಿ ಸರಕಾರವು ಕ್ರಮಶಃ ವಿನಿಯಂತ್ರಣದ ಧೋರಣವನ್ನು ಅನುಸರಿಸಲಿದ್ದು [illegible] ಎಲ್ಲ ನಿಯಂತ್ರಣಗಳು ಹೋಗುವವೆಂಬತಿ ಮಧ್ಯ ಪ್ರತಿಬಂಧದಲ್ಲಿ ಪಂಚವಾರ್ಷಿಕ ಯೋಜನೆ ಕೈಕೊಳ್ಳಲಾಗುವದೆಂದೂ ಹೇಳಿದರು. ಆಹಾರ ಸಮಸ್ಯೆಯನ್ನು ವಿಮರ್ಶಿಸುತ್ತ ಸಂಸ್ಥಾನದ ಜನಸಂಖ್ಯೆ ಮಿತಿಮೀರಿ ಹೆಚ್ಚಿದ್ದು ಆಹಾರ ಹೆಚ್ಚು ಬೆಳೆಯಬೇಕು. ಇಲ್ಲವೆ [illegible] ಎಂಬ ಪರಿಸ್ಥಿತಿ ಬಂದಿದೆಯೆಂದೂ [illegible] ಐದು ವರುಷಗಳಲ್ಲಿ ಸಂಸ್ಥಾನವನ್ನು ಆಹಾರ ಸಂಬಂಧದಲ್ಲಿ ಸ್ವಾವಲಂಬಿಯನ್ನಾಗಿ ಮಾಡಲಾಗುವದೆಂದೂ ಹೇಳಿದರು. ಕೈಗಾರಿಕ [illegible] ಗಿಕ ಶಾಂತಿಯನ್ನು ಸ್ಥಾಪಿಸಲು ಸರಕಾರವು ಸಂಸ್ಥಾನದಲ್ಲಿಯ ಉದ್ದಿಮೆದಾರರ ಹಾಗೂ ಕೂಲಿಕಾರರ ಪ್ರತಿನಿಧಿಗಳ ಪರಿಷತ್ತು ಕರೆಯಲು ಯೋಜಿಸಿರುವರೆಂದೂ ಅವರು ಹೇಳಿದರು.

ಹರಿಜನ ಮಂದಿರ ಪ್ರವೇಶ

೨೧ ನೇ ತಾರೀಖಿನ ದಿವಸ ಸ್ಥಾನಿಕ ಸ್ವರಾಜ್ಯ ಮಂತ್ರಿಗಳಾದ ಮಾನ್ಯ [illegible] ಹರಿಜನರಿಗೆ ದೇವಾಲಯಗಳಲ್ಲಿ ಪ್ರವೇಶ ಕೊಡುವ ಮಸೂದೆಯನ್ನು ಮಂಡಿಸಿದರು. [illegible] ರಿಗೆ ಸಮಾನ [illegible] ಭೂಪಾಳಂರವರು [illegible] ಮಂಡಿಸಿದರು. ಶ್ರೀ ದೇವರಾಜ ಅರಸು [illegible] ಯನ್ನು ವಿರೋಧಿಸಿ ಸರಕಾರವು [illegible] ಸ್ಥಾನಿಕ [illegible] [illegible]

[illegible] ಹೇಳಿದರು. [illegible] ಮಾನ್ಯ [illegible] ಸ್ವೀಕೃತವಾಯಿತು. [illegible] ಮಸೂದೆಗಳು ಸ್ವೀಕೃತವಾದವು.

ಮುಂಬಯಿ

ಮುಂಬಯಿ ಗೌರ್ನರರಾದ ಸರ ಜಾನ ಕಾಲವಿಲ್ಲರು ಜಾನೇವಾರಿ ೬ ತಾ. ಗೆ ತಮ್ಮ ಅಧಿಕಾರ ತ್ಯಜಿಸುವರು. ತಮ್ಮ ಸ್ಥಾನದಲ್ಲಿ ಗವರ್ನರ ಜನರಲ್ಲರು ತಮ್ಮ ಸರಕಾರದ ಸಲಹೆಯ ಮೇರೆಗೆ ರಾಜಾ ಸರ್ ಮಹಾರಾಜ ಸಿಂಗರನ್ನು ಮುಂಬಯಿ ಗವರ್ನರರನ್ನಾಗಿ ನೇಮಿಸಿದ್ದಾರೆ.

ಮುಂಬಯಿ ಮುಖ್ಯಮಂತ್ರಿಗಳಾದ ಶ್ರೀ. ಬಿ. ಜಿ ಖೇರರು ತಾ. ೨೩ ರಂದು ಸ್ವೀಡನ್ ಡೆನ್ಮಾರ್ಕ, ಪೋರ್ತುಗಾಲ ಮತ್ತು ಲಕ್ಸೆಂಬುಗರ ಮೊದಲಾದ ದೇಶಗಳ ಪ್ರತಿನಿಧಿಗಳ ಗೌರವಾರ್ಥವಾಗಿ ಒಂದು ಸಂತೋಷ ಕೂಟವನ್ನು ಏರ್ಪಡಿಸಿದ್ದರು ಈ ಸಮಾರಂಭಕ್ಕೆ ಮುಂಬಯಿ ಆರೋಗ್ಯ ಮಂತ್ರಿ ಡಾ. ಗಿಲ್ಡರ ಮತ್ತು ಭಾರತ ಸರಕಾರದ ಆರೋಗ್ಯ ಶಾಖೆಯ ಕಾರ್ಯದರ್ಶಿ ಡಾ. ಜೀವರಾಜ ಮೆಹತಾ ಇವರು ಆಗಮಿಸಿದ್ದರು.

ಮುಂಬಯಿ ಸರಕಾರದವರು ತಾ. ೨೩ ರಂದು ಹೊಸ ಆಜ್ಞೆ ಹೊರಡಿಸಿ ಕಡ್ಡಿ ಪೆಟ್ಟಿಗೆಗಳ ಧಾರಣೆ ಹಾಗು ಸಾಗಾಟ ಸಂಬಂಧದಲ್ಲಿ ಈಗಿದ್ದ ಹತೋಟಿಯನ್ನು ರದ್ದು ಪಡಿಸಿದ್ದಾರೆ.

ಜೋಳದ ಬೆಳೆ ಇನ್ನೂ ಕೈಗೆ ಬಾರದ್ದರಿಂದ ಇನ್ನೂ ೧ ತಿಂಗಳ ನಿಯಂತ್ರಣ ಸಾಗಿಸಿಕೊಂಡು ಹೋಗಬೇಕೆಂದು ಸುರತ ನಗರ ಕಾಂಗ್ರೆಸ ಕಮಿಟಿಯವರು ತಾ. ೨೧ ರಂದು ಠರಾವು ಪಾಸು ಮಾಡಿ ಹಾಗೆ ಸರಕಾರಕ್ಕೆ ತಿಳಿಸಿದರು.

ಮುಂಬಯಿ ಸರಕಾರವು ಪೋಲೀಸ ಇನ್‌ಸ್ಪೆಕ್ಟರ ಜನರಲ್ಲರಿಗೆ ಮುಂಬಯಿ ಪೋಲೀಸ ಪಡೆಯ ಮೇಲೂ ಅಧಿಕಾರ ಕೊಟ್ಟಿದೆ. ಇಷ್ಟು ದಿನಗಳ ವರೆಗೆ ಇವರಿಗೆ ಕೇವಲ ಪ್ರಾಂತದ ಜಿಲ್ಲಾ ಪೋಲೀಸ ಪಡೆಗಳ ಮೇಲಷ್ಟೇ ಅಧಿಕಾರವಿದ್ದಿತು ಮತ್ತು ಮುಂಬಯಿ ಪೋಲೀಸ ಪಡೆಯ ಅಧಿಕಾರವು ಮುಂಬಯಿ ಪೋಲೀಸ ಕಮಿಶನರರ ಕೈಯಲ್ಲಿದ್ದಿತು.

ಔದ್ಯೋಗಿಕ ತಂಟೆಗಳನ್ನು ಬಗೆಹರಿಸಲು ಮುಂಬಯಿ ಸರಕಾರವು ಏರ್ಪಡಿಸಿದ ನ್ಯಾಯಮಂಡಲದ ವ್ಯವಸ್ಥೆಯು ಪರೀಕ್ಷಿತವಾಗಿಯೂ ಸಮಾಧಾನಕರವಾಗಿಯೂ ಕಾರ್ಯ ನಡೆಸಿದೆಯೆಂದು ಕೂಲಿಕಾರ ಮಂತ್ರಿ ಶ್ರೀ ಗುಲಝಾರಿಲಾಲ ನಂದಾರವರು ತಾವು ಹೊರಡಿಸಿದ ಪ್ರಕಟಣೆಯಲ್ಲಿ ಒತ್ತಿ ಹೇಳಿದ್ದಾರೆ.

ಸ್ವಾತಂತ್ರ್ಯ ಸಂಪಾದನೆಗೆ ಗೋವೆಯವರಿಗೆ ಹಿಂದುಸ್ಥಾನವು ಶಕ್ತಿ ಮೀರಿ ಸಹಾಯ ನೀಡುವದೆಂದು ಗೋವಾ ಮರಾಠಿ ಸಾಹಿತ್ಯ ಪರಿಷತ್ತಿನಲ್ಲಿ ಮುಖ್ಯ ಮಂತ್ರಿ ಖೇರರು ಹೇಳಿದರು.

ಮುಂಬಯಿ ಶಾಸನಸಭಾ ಸದಸ್ಯರಾದ ಶ್ರೀ ಕೆ. ಡಿ. ಪಾಟೀಲರ ಮರಣದಿಂದ ತೆರವಾದ ಸ್ಥಳಕ್ಕೆ ಸಾತಾರಾ ಜಿಲ್ಲೆಯ ದಕ್ಷಿಣ ಭಾಗದಿಂದ ಶ್ರೀ ವಿನಾಯಕರಾವ ಘೋರಪಡೆ (ಕಾಂಗ್ರೆಸ) ಇವರೊಬ್ಬರದೇ ಅರ್ಜಿ ಸ್ವೀಕೃತವಾಗಿದ್ದು ಅವರು ಅವಿರೋಧವಾಗಿ ಆರಿಸಿಬರಲಿರುವರೆಂದು ತಿಳಿದು ಬರುತ್ತದೆ.

ದಕ್ಷಿಣ ಸಂಸ್ಥಾನದ ಒಕ್ಕೂಟ ಪಾರ್ಲಿಮೆಂಟರಿ ಬೋರ್ಡಿನ ಚೇರಮನ್ನರಾದ ಶ್ರೀ ಕಮಲನಯನ ಬಜಾಜರು, ಈಗ ವಿಲೀನೀಕರಣದ ಸಂಧಂಬದಲ್ಲಿ ಜನರ ಇಚ್ಛೆ ತಿಳಿದುಕೊಳ್ಳುವ ರೀತಿಯ ಬಗ್ಗೆ ದಕ್ಷಿಣ ಸಂಸ್ಥಾನದ ಪ್ರಜಾಪರಿಷತ್ತು ಕೇಂದ್ರಸರಕಾರದ ಸಂಸ್ಥಾನಿಕ ಶಾಖೆ ಹಾಗು ಮುಂಬಯಿ ಸರಕಾರದೊಡನೆ ಪತ್ರ ವ್ಯವಹಾರ ನಡೆಸುವದೆಂದು ತಿಳಿಸಿದರು.

ತಾ ೨೦ ರಂದು ಸುಮಾರು ೨೦೦ ಹರಿಜನರು ಸ್ಥಾನಿಕ ಸಮಾಜವಾದಿಗಳ ನೇತೃತ್ವದಲ್ಲಿ ಪಾತುಂಗಾ ವಿಠೋಬ ದೇವರ ಗುಡಿಯಲ್ಲಿ ಪ್ರವೇಶಿಸಿದರು.

ಮದ್ರಾಸ

ಸಾಕ್‌ರೆಟೇರಿಯಟ್ ಅಧಿಕಾರಿಗಳ ಸಂಘವು ... ಸಂಘವನ್ನು ಹಿಂತೆಗೆದುಕೊಂಡಿರುವದಾಗಿ ತಿಂಗಳ ... ತಾ. ಸಂಜೆ ಹೇಳಿಕೆ ಹೊರಡಿಸಿದ್ದರಿಂದ ... ಮದ್ರಾಸದಲ್ಲಿಯ ಎಲ್ಲ ಕಚೇರಿಗಳು ಎಂದಿನಂತೆ ಕೆಲಸದಲ್ಲಿ ತೊಡಗಿದ್ದವು

ಹಿಂದುಸ್ಥಾನ ಸರಕಾರದ ಮಂತ್ರಿಗಳಾದ ಶ್ರೀ. ಎನ್. ವಿ ಗಾಡಗೀಳರು ಮದ್ರಾಸದಲ್ಲಿ ಆಂಧ್ರ ... ಶಿಷ್ಟಮಂಡಳಕ್ಕೆ ಉತ್ತರ ಕೊಡುತ್ತ ಹಿಂದುಸ್ಥಾನ ಸರಕಾರವು ಬೇರೆ ಬೇರೆ ಪ್ರಾಂತಗಳಲ್ಲಿ ದೊಡ್ಡ ದೊಡ್ಡ ನೀರಾವರಿ ಯೋಜನೆಗಳನ್ನು ಕಾರ್ಯರೂಪಕ್ಕಿಳಿಸಲು ನಿರ್ಧರಿಸಿ ... ದವಲೇಶ್ವರ ಸ್ವಾಗತಿಸುವ ವಿಚಾರ ನಡೆಸುವದಾಗಿ ಹೇಳಿದರು.

... ಘಟನೆಗಳ ಬಗ್ಗೆ ಚರ್ಚೆ ... ಜಾನೇವಾರಿ ಮಧ್ಯದ ... ಅವಕಾಶವಿಲ್ಲವೆಂದು ಮದ್ರಾಸ ... ಹೈದರಾಬಾದ ಸರಕಾರಕ್ಕೆ ...

ಹಿಂದುಸ್ಥಾನ

ಜಮೀನದಾರಿ ಭೂಮಿಗಳ ಲಾವಣಿ ಹಣ ಇಳಿಸುವ ಮಸೂದೆಗೆ ಒಪ್ಪಿಗೆಕೊಟ್ಟ ನಂತರ ಮದ್ರಾಸ ವಿಧಿಮಂಡಲವು ತಾ. ೨೦ ರಂದು ಅನಿಶ್ಚಿತ ಅವಧಿವರೆಗೆ ಮುಂದುವರಿಯಿತು.

ಸಿಂಹಳದ ಹಿಂದಿ ಕಾಂಗ್ರೆಸಿನ ಪರವಾಗಿ ಶ್ರೀ ಗಳಾದ ಪೆರಿಸುಂದರಂ ಹೊಂಡ್‌ಯಮನ್ ಏ ಅಝೀಜು ಹಾಗು ಡಿ. ರಾಮಾನುಜಂ ಮೊದಲಾದವರ ಶಿಷ್ಟಮಂಡಳವು ಸಿಂಹಳದಲ್ಲಿಯ ಹಿಂದೀಯರ ಹಿತ ಸಂಬಂಧಗಳನ್ನು ಹಿಂದುಸ್ಥಾನ ಹಾಗು ಸಿಂಹಳದ ಮುಖ್ಯಮಂತ್ರಿಗಳಲ್ಲಿ ನಡೆಯಲಿರುವ ಚರ್ಚೆಯ ಕಾಲಕ್ಕೆ ಮಂಡಿಸಲು ದಿಲ್ಲಿಗೆ ಬರಲಿರುವರು.

ಮದ್ರಾಸ ವಿಧಿಮಂಡಳದಲ್ಲಿ ತಾ. ೧೮ ರಂದು ಶ್ರೀ. ಮಾಧವ ಮೆನನ್ನರು ಮದ್ರಾಸ ತೆರಿಗೆ ಮಸೂದೆಯನ್ನು ಮಂಡಿಸಲು ಪ್ರಾರಂಭಿಸಿದಾಗ ಲೀಗಿನ ನಾಲ್ವರು ಸದಸ್ಯರು ಈ ಮಸೂದೆಯ ಚರ್ಚೆಯಲ್ಲಿ ಭಾಗವಹಿಸುವದಿಲ್ಲವೆಂದು ಹೇಳಿ ಸಭಾತ್ಯಾಗಮಾಡಿದರು.

ಮದ್ರಾಸ ಶಾಸನ ಸಭೆಯಲ್ಲಿ ತಾ. ೧೯ ರಂದು ಒಕ್ಕಲುತನ ಮಂತ್ರಿಗಳಾದ ಜಿ. ಕೆ. ಮಾಧವ ಮೆನನ್ನರು ಸಂಗಮೇಶ್ವರ ಆಣೆಕಟ್ಟಿನ ವಿವರಗಳನ್ನು ತಿಳಿಸುತ್ತ ೩೫ ಲಕ್ಷ ಎಕರೆಗಳಿಗೆ ಅದರಿಂದ ನೀರ ದೊರೆವುದೆಂದೂ ೭೮ ಕೋಟಿ ಅದಕ್ಕೆ ವೆಚ್ಚ ತಗಲುವದೆಂದೂ ಆಣೆಕಟ್ಟಿನ ಯೋಜನೆ ಮುಗಿಯಬೇಕಾದರೆ ೭ ವರ್ಷ ಹತ್ತಬಹುದೆಂದೂ ತಿಳಿಸಿದರು.

ಓಡಿಸಾ

ಓಡಿಸಾ ಪ್ರಾಂತದಲ್ಲಿ ೨೫ ಸಂಸ್ಥಾನಗಳು ವಿಲೀನವಾಗಿರುವದರಿಂದ ಮುಂದಿನ ಜಾನೇವರಿ ತಿಂಗಳಿಂದ ಆರು ಹೊಸ ಜಿಲ್ಲೆಗಳು ತಲೆ ಎತ್ತುವವು. ತತ್ಪರಿಣಾಮವಾಗಿ ಓಡಿಸಾದಲ್ಲಿ ಇನ್ನು ೧೩ ಜಿಲ್ಲೆಗಳು ಅಸ್ತಿತ್ವದಲ್ಲಿ ಬಂದಂತಾಗುವದು. ಈ ೨೫ ಸಂಸ್ಥಾನಗಳಿಗಾಗಿ ಒಬ್ಬ ಮುಖ್ಯ ಆಡಳಿತಗಾರರನ್ನು ನೇಮಿಸಲಾಗಿದೆ. ಇವರ ಆಧೀನದಲ್ಲಿ ಪ್ರತಿ ಸಂಸ್ಥಾನದಲ್ಲಿ ಒಬ್ಬೊಬ್ಬ ಆಡಳಿತಗಾರನು ಕೆಲಸ ನಡೆಸುವನು.

ಓಡಿಸಾ ಸರಕಾರದ ಪ್ರಕಟನೆಯೊಂದು ಎಲ್ಲ ಓಡಿಸಾ ಸಂಸ್ಥಾನಗಳ ಆಡಳಿತವು ಜಾನೇವರಿ ೧ ರಿಂದ ಓಡಿಸಾ ಸರಕಾರಕ್ಕೆ ವರ್ಗಾಯಿಸಲ್ಪಡುವ ನಿರೀಕ್ಷೆಯಿರುವದಾಗಿ ಹೇಳುತ್ತದೆ.

ಯುಕ್ತಪ್ರಾಂತ

ಅಲಹಾಬಾದ ವಿಶ್ವವಿದ್ಯಾಲಯದ ಉಪಕುಲಪತಿಗಳಾದ ಡಾ. ತಾರಾಚಂದರನ್ನು ಅಫಗಾನಿಸ್ಥಾನದಲ್ಲಿ ಭಾರತದ ರಾಯಭಾರಿಯನ್ನಾಗಿ ನೇಮಿಸಲಾಗಿದೆ. ಅಫಗಾನಿಸ್ಥಾನಕ್ಕೆ ತೆರಳಲು ತಾರಾಚಂದರಿಗೆ ಅನಕೂಲವಾಗಲೆಂದು ವಿಶ್ವವಿದ್ಯಾಲಯದವರು ಒಂದು ವರ್ಷದ ರಜೆ ಕೊಟ್ಟಿದ್ದಾರೆ.

ಪಶ್ಚಿಮ ಬಂಗಾಲ

ಗಡಿಯಲ್ಲಿದ್ದ ಚಾರದಾನಪುರ ವಿಭಾಗವು ಪೂರ್ವ ಬಂಗಾಲಕ್ಕೆ ಸೇರಿರುವದೋ ಅಥವಾ ಪಶ್ಚಿಮ ಬಂಗಾಲಕ್ಕೋ ಎಂಬ ವಿಷಯದಲ್ಲಿ ಎರಡು ಪ್ರಾಂತಗಳ ಸರಕಾರಗಳ ನಡುವೆ ವಾದ ಉದ್ಭವಿಸಿದೆ. ಪ. ಬಂಗಾಲವು ಈ ಬಗ್ಗೆ ಹಿಂದುಸ್ಥಾನಕ್ಕೆ ಬರೆದುಕೊಂಡಿದೆಯಲ್ಲದೆ ಅಲ್ಲಿರಿಸಿದ ಸಶಸ್ತ್ರ ಪೋಲೀಸರನ್ನು ಹಿಂತೆಗೆದುಕೊಳ್ಳಬೇಕೆಂದೂ ಪೂ. ಬಂಗಾಲ ಸರಕಾರಕ್ಕೆ ತಿಳಿಸಿದೆ

ತಮ್ಮ ಸ್ವಾತಂತ್ರ್ಯಕ್ಕೆ ಗಳಿಸಿದ್ದ ಸುರಕ್ಷತೆಯ ಮಸೂದೆಯನ್ನು ಸದೆಬಡಿಯಲು ಪಶ್ಚಿಮ ಬಂಗಾಲದ ಪ್ರತೀಯು ಕೂಡಲೆ ಎಚ್ಚರಗೊಳ್ಳಬೇಕೆಂದು ತಾ. ೧೯ ರಂದು ಶ್ರೀ ಶರಚ್ಚಂದ್ರ ಬೋಸರು ಕೇಳಿಕೊಂಡರು.

ಪೂರ್ವ ಪಂಜಾಬ

ನಿರಾಶ್ರಿತರ ಪುನರ್ವಸತಿಯ ಸಂಬಂಧ ವಿವರಗಳನ್ನು ಸಾರ್ವಜನಿಕರಿಗೆ ತಿಳಿಸುವ ಉದ್ದೇಶದಿಂದ “ಪೂರ್ವ ಪಂಜಾಬ” ಎಂಬ ಹೆಸರಿನ ದ್ವಿವಾರಪತ್ರಿಕೆಯನ್ನು ಪ್ರಾರಂಭಿಸಿದ್ದಾರೆ. ಇದು ಇಂಗ್ಲೀಷ, ಹಿಂದಿ, ಉರ್ದು ಮತ್ತು ಗುರುಮುಖಿ ಈ ನಾಲ್ಕು ಭಾಷೆಗಳಲ್ಲಿ ಪ್ರಸಿದ್ಧವಾಗುವದು.

ಹೊಸದಿಲ್ಲಿ

ಭಾರತವು ಕೇವಲ ಜಾತೀಯ ರಾಷ್ಟ್ರವಾಗಬಾರದು. ಸಂಕುಚಿತ ರಾಷ್ಟ್ರೀಯತ್ವಕ್ಕೆ ಅವಕಾಶವೀಯಬಾರದು. ಜಾತೀಯತೆಗೂ ಫ್ಯಾಸಿಸ್ಟವಾದಕ್ಕೂ ಯಾವ ಭೇದವೂ ಇಲ್ಲ. ಪ್ರಾರಂಭದಲ್ಲಿ ಇದರಿಂದ ಜಯತೋರಿದರೂ ಕೊನೆಯಲ್ಲಿ ಅಳಿಗಾಲ ನಿಶ್ಚಿತ ಎಂದು ಪಂ. ಜವಾಹರಲಾಲರು ಒಂದು ಭಾಷಣದಲ್ಲಿ ನುಡಿದರು.

ತಾ ೨೧ರಂದು ಪತ್ರಿಕಾಕರ್ತರ ಪರಿಷತ್ತಿನಲ್ಲಿ, ಘಟನಾಸಮಿತಿಯ ಸಲಹೆಗಾರರಾದ ಸರ ಬೆನಗಲ್ಲ ನರಸಿಂಗರಾಯರು, ತಾವು ಅಮೇರಿಕಾ, ಇಂಗ್ಲಂಡ ಮತ್ತು ಆಯರ್ಲಂಡ ದೇಶಗಳಲ್ಲಿ ಮೊನ್ನೆ ಮೊನ್ನೆ ಮಾಡಿದ ಚರ್ಚೆಯ ಫಲವಾಗಿ ಹಿಂದುಸ್ಥಾನದ ಘಟನೆಯ ಕರಡಿನಲ್ಲಿ ಅನೇಕ ತಿದ್ದುಪಡಿಗಳು ಸೂಚಿತವಾಗಿವೆಯೆಂದು ಹೇಳಿದರು.

ಜಗತ್ತಿನ ಎಲ್ಲ ವಿಮಾನ ಮಾರ್ಗಗಳೂ ಹಿಂದುಸ್ಥಾನದ ಮೇಲಿಂದ ಹಾಯ್ದು ಹೋಗುವದರಿಂದ ಬೇಗನೆ ಇಲ್ಲಿ ದೊಡ್ಡ ಮತ್ತು ಉತ್ತಮ ವಿಮಾನ ನಿಲ್ದಾಣಗಳು ಕಟ್ಟಲ್ಪಡುವವು. ಸ್ಥಾಯಿ ಆರ್ಥಿಕ ಸಮಿತಿಯವರು ೧೨ ನಿಲ್ದಾಣಗಳಿಗಾಗಿ ೨ ಕೋಟಿ ರೂ. ವೆಚ್ಚಮಾಡಲು ಒಪ್ಪಿದ್ದಾರೆ.

ಘಟನಾಸಮಿತಿಯು ಘಟನಾ ಉಪಸಮಿತಿಯು ಹಿಂದುಸ್ಥಾನದ ಹೊಸ ಘಟನೆಯ ಸುಮಾರು ೨೪೦ ಕಲಮುಗಳಲ್ಲಿ ೧೭೦ ಕಲಮುಗಳನ್ನು ಬರೆದು ಮುಗಿಸಿರುತ್ತದೆ. ಫೆಬ್ರುವರಿ ಮಧ್ಯದೊಳಗಾಗಿ ಘಟನೆಯ ಕರಡು ಸಿದ್ಧವಾಗುವದು.

ಕೇಂದ್ರ ಶಾಸನಸಭೆಯ ಮುಂಗಡ ಪತ್ರಿಕೆಯ ಅಧಿವೇಶನವು ೧೯೪೮ ಜನೇವರಿ ೨೮ಕ್ಕೆ ಹೊಸದಿಲ್ಲಿಯಲ್ಲಿ ಸೇರಿ ಈಗಾಗಲೇ ಗೊತ್ತಾದಂತೆ ಎಪ್ರಿಲ ಮೂರನೇ ದಿನಾಂಕದವರೆಗೆ ನಡೆಯುವದೆಂದು ಪ್ರಕಟಿಸಲಾಗಿದೆ

ಪೂರ್ವಪಂಜಾಬ ಮತ್ತು ಹಿಂದೀ ಸಂಸ್ಥಾನಗಳಲ್ಲಿ ಕೂಡಿ ಈಗಾಗಲೇ ೨೦ ಲಕ್ಷಕ್ಕಿಂತ ಹೆಚ್ಚು ನಿರಾಶ್ರಿತರ ಪುನರ್ನಿವೇಶನ ಮಾಡಲಾಗಿದೆ ಇವರಲ್ಲಿ ೧೫ ಲಕ್ಷ ನಿರಾಶ್ರಿತರಿಗೆ ೨೦ ಲಕ್ಷ ಎಕರೆ ಭೂಮಿಕೊಟ್ಟಿದೆ.

ಉದ್ಯೋಗವಿನಿಮಯ ಕಚೇರಿಯು ಮುಖಾಂತರ ೧೫೦೦೦ ನಿರಾಶ್ರಿತರಿಗೆ ನೌಕರಿ ಹಚ್ಚಿಕೊಡಲಾಗಿದೆ ಒಂದು ಕುಟುಂಬದಲ್ಲಿ ಸರಾಸರಿ ೫ ಜನರೆಂದು ಲೆಕ್ಕ ಮಾಡಿದರೂ ೭೫೦೦೦ ನಿರಾಶ್ರಿತರ ಉಪಜೀವನದ ವ್ಯವಸ್ಥೆ ಮಾಡಿದಂತಾಯಿತು.

೧೯೪೮ರ ಏಪ್ರಿಲ ತಿಂಗಳಿಂದ ಭಾರತದ ಪ್ರಥಮ ಹಿಂದೀ ಸೇನಾಪತಿಯನ್ನು ನೇಮಿಸಲಾಗುವದೆಂದು ಸಂರಕ್ಷಣ ಮಂತ್ರಿ ಸರದಾರ ಬಲದೇವ ಸಿಂಗರು ಹೇಳಿದರು.

ಹಿಂದೀ ಸೈನಿಕರು ಪೂಂಛಭಾಗದಲ್ಲಿ ದಾಳಿಗಾರರ ಎರಡು ಶಿಬಿರಗಳಮೇಲೆ ನುಗ್ಗಿ ನೂರು ಜನರನ್ನು ಕೊಂದು ಒಂದು ದಿನ್ನೆಯನ್ನು ವಶಪಡಿಸಿಕೊಂಡರು. ಝಂಗಾರ ಭಾಗದಲ್ಲಿಯೂ ೪೦ ಜನ ದಾಳಿಗಾರರು ಸಂಹರಿಸಲ್ಪಟ್ಟಿರುವರು.

ಪುದುಕೊಟ್ಟಾ ಸಂಸ್ಥಾನದ ಘಟನಾತ್ಮಕ ಸುಧಾರಣೆಗಳ ಸಂಬಂಧದಲ್ಲಿ ದಿಲ್ಲಿಯಲ್ಲಿ ಆದ ಒಡಂಬಡಿಕೆಯ ಕರಾರುಗಳನ್ನು ಪುದುಕೊಟ್ಟಾ ರಾಜರು ತಾ. ೧೯ ರಂದು ಒಂದು ವಿಶೇಷ ಗ್ಯಾಜಿಟ ಹೊರಡಿಸಿ ಪ್ರಸಿದ್ಧಿಸಿರುವರು.

ಹಿಂದೀ ಸಂಸ್ಥಾನ

ಶೇಖಅಬ್ದುಲ್ಲಾ ಮತ್ತು ಗುಲಾಮ ಮಹಮ್ಮದ ಬಕ್ಷಿಯವರು ಮಹಾತ್ಮರನ್ನು ಕಂಡು ಕಾಶ್ಮೀರದ ಪರಸ್ಥಿತಿಯಬಗ್ಗೆ ವಿಚಾರವಿನಿಮಯ ಮಾಡಿದರು. ಶೇಖ ಅಬ್ದುಲ್ಲಾರು ಕಾಶ್ಮೀರದಲ್ಲಿ ನಡುಗಾಲ ಸರಕಾರ ರಚಿಸಲು ಪಂ. ನೆಹರೂ ಮತ್ತು ಸರದಾರ ಪಟೇಲರೊಡನೆ ಚರ್ಚಿಸಿದರು

ಜಾನೇವರಿಯಿಂದ ಛತ್ತಿಸಗಡ ಸಂಸ್ಥಾನಗಳಲ್ಲಿ ಬಹುತರ ಎಲ್ಲವೂ ಮಧ್ಯಪ್ರಾಂತದಲ್ಲಿ ವಿಲೀನವಾಗಲು ನಿರ್ಧರಿಸಿವೆ. ಇದನ್ನು ನೋಡಿಕೊಂಡು ಬುಂದೇಲಖಂಡ ಭಾಗದ ಸಂಸ್ಥಾನಗಳೂ ಮತ್ತು ಜಹಗೀರುಗಳೂ ವಿಲೀನೀಕರಣಕ್ಕೆ ಒಪ್ಪಿವೆಯೆಂದು ತಿಳಿಯುತ್ತದೆ. ಸಂಸ್ಥಾನ ಶಾಖೆಯವರು ಮುಂದಿನ ವಿಚಾರ ವಿವರಗಳಲ್ಲಿ ಮಗ್ನರಾಗಿದ್ದಾಗಿ ಸುದ್ದಿಯಿದೆ.

ಹೈದರಾಬಾದ

ಹೈದರಾಬಾದ ಸಂಸ್ಥಾನದ ಪ್ರಜೆಗಳು ಸಂಸ್ಥಾನದಲ್ಲೆಲ್ಲ ತಮ್ಮ ಲೋಕ ವ್ಯವಹಾರದಲ್ಲಿ ಉಸ್ಮಾನಿಯಾ ನಾಣ್ಯ ಬಳಸಬೇಕೆಂದು ವಿದೇಶದ ನಾಣ್ಯಗಳನ್ನು ಬಳಸುವದು ಅಕ್ರಮವಾಗುವದೆಂದೂ ಒಂದು ಸುಗ್ರೀವಾಜ್ಞೆ ಹೊರಡಿಸಿದ್ದಾರೆ. ಈ ಆಜ್ಞೆ ಡಿಸೆಂಬರ ೨೨ ನೇ ತಾ. ದಿಂದ ಅಮಲಿನಲ್ಲಿ ಬಂದಿದೆ.

ಹೈದರಾಬಾದ ಹೋರಾಟಕ್ಕೆ ಧನಸಹಾಯ ನೀಡ ಬೇಕೆಂದು ಸ್ವಾಮಿ ರಮಾನಂದ ತೀರ್ಥರು ಬಿನ್ನವಿಸಿ ಪ್ರಕಟನೆ ಹೊರಡಿಸಿದ್ದಾರೆ.

ಹೈದರಾಬಾದ ಮುಖ್ಯ ಪ್ರಧಾನರಾದ ಲಾಯಕ ಅಲ್ಲಿಯವರು ತಾ. ೨೨ ರಂದು ಸಾರ್ವಜನಿಕ ಹಾಗು ರಾಜಕೀಯ ಸಂಸ್ಥೆಗಳನ್ನು ಉದ್ದೇಶಿಸಿ ಒಂದು ಬಿನ್ನಹ ಹೊರಡಿಸಿ ಶಾಲೆ ಕಾಲೇಜುಗಳಿಗೆ ಶರಣು ಹೊಡೆದ ವಿದ್ಯಾರ್ಥಿಗಳಿಗೆ ಪುನಃ ಶಾಲೆ ಕಾಲೇಜುಗಳಿಗೆ ಬರಲು ವಿನಂತಿಸಿದ್ದಾರೆ.

ನಿಜಾಮ ಸರಕಾರವು ರಚಿಸಿದ ನಡುಗಾಲ ಸರಕಾರದ ಮಂತ್ರಿ ಮಂಡಲದಲ್ಲಿ ಲಿಂಗಾಯತ ಪ್ರತಿನಿಧಿಯೆಂದು ಶ್ರೀ ಮಲ್ಲಿಕಾರ್ಜುನಪ್ಪನೆಂಬವರನ್ನು ಸೇರಿಸಿಕೊಂಡಿರುವದನ್ನು ಖಂಡಿಸಿ ಸಂಸ್ಥಾನೀ ವೀರಶೈವ ವಿದ್ಯಾರ್ಥಿಗಳು ಪ್ರಕಟನೆ ಹೊರಡಿಸಿದ್ದಾರೆ.

ಪಾಕಿಸ್ಥಾನ

ಲಾಹೋರದಲ್ಲಿ ಮರಣಗಳ ಸಂಖ್ಯೆ ಹೆಚ್ಚಾಗುತ್ತಿದೆ. ದಿನಾಲು ಸರಾಸರಿ ೪೦ ಜನರು ಸಾಯುತ್ತಿದ್ದಾರೆ. ಇವರಲ್ಲಿ ಚಳಿಯಿಂದ ಅಲ್ಲವೆ ಹೊಟ್ಟೆಗಿಲ್ಲದೆ ಸಾಯುವವರ ಸಂಖ್ಯೆಯೇ ಹೆಚ್ಚು ಎಂದು ಲಾಹೋರದ ಆರೋಗ್ಯ ಶಾಖೆಯ ಅಧಿಕಾರಿಗಳು ಸಂದರ್ಶನದಲ್ಲಿ ಹೇಳಿದರು.

ಸಿಂಧ ಪ್ರಾಂತದಲ್ಲಿಯ ಮುಸಲ್ಮಾನ ರೈತರು ಹಿಂದೂ ಜಮೀನದಾರರ ಹೊಲಗಳ ಬೆಳೆಯನ್ನು ಒತ್ತಾಯದಿಂದ ವಶಪಡಿಸಿಕೊಳ್ಳುತ್ತಿದ್ದಾರೆಂಬ ದೂರುಗಳು ಪ್ರಾಂತದ ಎಲ್ಲ ಭಾಗಗಳಿಂದಲೂ ಬರಹತ್ತಿವೆ. ಸಿಂಧದಲ್ಲಿಯ ಹಿಂದೂ ಜಮೀನದಾರರಿಗೆ ಇದೊಂದು ಬಿಡಿಸಲಾರದ ಸಮಸ್ಯೆಯಾಗಿದೆ.

ಹಿಂದುಸ್ಥಾನದಲ್ಲಿ ರಶಿಯಾದ ರಾಯಭಾರಿಗಳಾಗಿ ನೇಮಕರಾದ ಎಂ. ನೋವಿಕೊ ಅವರು ತಾ. ೨೦ಕ್ಕೆ ಕರಾಚಿಗೆ ಬಂದು ಇಳಿದರು.

ಪಶ್ಚಿಮ ಪಂಜಾಬದಲ್ಲಿ ಬೆಂಕಿ ಪೆಟ್ಟಿಗೆಗಳು ದೊರೆಯದ್ದರಿಂದ ಮನೆಗಳಲ್ಲಿ ಬೆಂಕಿ ಹೊತ್ತಿಸುವದು ಸ್ತ್ರೀಯರಿಗೆ ಹೆಚ್ಚಿನ ಚಿಂತೆಯಾಗಿದೆ ಬೀಡಿ ಸಿಗರೇಟು ಸೇದುವವರು ಚಕಮಕಿ ಕಲ್ಲನ್ನು ಹುಡುಕುತ್ತಿರುತ್ತಾರೆ. ಒಂದೊಂದು ಬೆಂಕಿ ಪೆಟ್ಟಿಗೆಯ ಬೆಲೆಯು ಆರಾಣೆಯ ವರೆಗೆ ಏರಿತ್ತು.

ಇಂಗ್ಲಂಡ ಮತ್ತು ಪಾಕಿಸ್ಥಾನ ಹಿಂದುಸ್ಥಾನಗಳ ನಡುವೆ ೧೯೪೭ ಅಗಸ್ಟ ೧೪ರ ಒಪ್ಪಂದದ ಪ್ರಕಾರ ಆದ ಆರ್ಥಿಕ ವ್ಯವಸ್ಥೆಯನ್ನು ದುಂಡು ಮೇಜಿನ ಪರಿಷತ್ತಿನಲ್ಲಿ ಚರ್ಚಿಸುವದಕ್ಕಾಗಿ ಹಿಂದುಸ್ಥಾನ ಸರಕಾರದ ಆಮಂತ್ರಣದ ಮೇರೆಗೆ ಪಾಕಿಸ್ಥಾನ ಮತ್ತು ಇಂಗ್ಲಂಡ ಪ್ರತಿನಿಧಿಗಳು ಬೇಗ ದಿಲ್ಲಿಯಲ್ಲಿ ಕೂಡಲಿರುವರೆಂದು ಪಾಕಿಸ್ಥಾನ ಆರ್ಥಿಕ ಶಾಖೆಯ ಒಂದು ಪ್ರಕಟನೆ ಹೊರಟಿದೆ.

ಅಸಮಾಂತರ ಕತೆಗಳೆರಡು

ತುಳಸಿ ಮದುವೆ

ಲೇ:— ಶ್ರೀ ಬಿ. ಜಿ. ಕುಲಕರ್ಣಿ

ಮದುವೆಯಾದ ಮೇಲೆ ಹೊಸ ಆಯುಷ್ಯವೇ ಪ್ರಾರಂಭವಾಗುತ್ತದೆಂದು ಹೇಳಲಾಗುತ್ತದೆ. ಆಗ ಬರುವ ಹಬ್ಬ ಹುಣ್ಣಿವೆಗಳ ಬಣ್ಣವೇ ಬೇರೆ ಕಾಣುವದುಂಟು. ಅದಕ್ಕಾಗಿಯೇ ಏನೋ ನವ ದಂಪತಿಗಳು ಅವುಗಳನ್ನು ಅಷ್ಟು ವಿಜೃಂಭಣೆಯಿಂದ ಆಚರಿಸುವರು.

ದೇಶಪಾಂಡೆ ಶ್ಯಾಮುನೆಂಬ ೨೫ ವರ್ಷದ ತರುಣನು ವಿಮಲೆಯನ್ನು ಆದೇ ಆಗಿದ್ದನು. ಮದುವೆ ಅರಿಷಣ ಇನ್ನು ಮೈಮೇಲೆ ಕಾಣುತ್ತಿತ್ತು. ಹುರುಪಿನ ಅವರ ಹೊಸ ಆಯುಷ್ಯದಲ್ಲಿಯ ಮೊದಲಿನ ಹಬ್ಬವೆಂದರೆ ಅದೇ — ತುಳಸಿ ಮದುವೆ!

ದೇಶಪಾಂಡೆ ಶ್ಯಾಮುನು ತನ್ನ ಪ್ರಾಂತದವರಂತೆ ನೌಕರಿಗಾಗಿ ಕರ್ನಾಟಕದಿಂದ ಮುಂಬಯಿಗೆ ಬಂದವ. ಅವನಿಗೆ ಅಲ್ಲಿಯ ವೃತ್ತ ಪತ್ರಗಳ ಕಚೇರಿಯಲ್ಲಿ ಕೆಲಸವಿದ್ದಿತು. ತಿಂಗಳದ ವೆಚ್ಚ ಸಾಗಿ ಕೈಯಲ್ಲಿ ಐದು ರೂಪಾಯಿ ಉಳಿಯುವಷ್ಟು ಅವನ ಸಂಬಳ.

ಶ್ಯಾಮನು ತುಳಸಿ ಮದುವೆಯನ್ನು ಅತ್ಯಂತ ವಿಜೃಂಭಣೆಯಿಂದ, ಅದು ಚಿರಸ್ಮರಣೀಯವಾಗುವಂತೆ, ಆಚರಿಸಬೇಕೆಂದು ನಿಶ್ಚಯಿಸಿದ. ವಿಮಲೆಯು ಅವನಿಗೆ ಬೆಂಬಲವನ್ನಷ್ಟೇ ಅಲ್ಲದೆ ಸಹಾಯದ ಆಶ್ವಾಸನವನ್ನು ಕೊಟ್ಟಳು.

ಸರಕಾರವು ಬಹುತರ ಎಲ್ಲ ಪದಾರ್ಥಗಳ ಮೇಲೆ ನಿಯಂತ್ರಣ ಹೇರಿದ್ದರಿಂದ ಶ್ಯಾಮುನ ಕೈ ಕಟ್ಟಿದಂತಾಗಿತ್ತು. ಆದರೂ ಅವನು ಬೆದರಲಿಲ್ಲ.

ಕಳ್ಳಪೇಟೆಯನ್ನೆಲ್ಲ ಸುತ್ತಾಡಿ ಶ್ಯಾಮುನು ಸಕ್ಕರೆ ಗೋದಿಗಳನ್ನು ದೊರಕಿಸಿದ. ಕಳ್ಳಪೇಟೆ, ಅದರಲ್ಲಿಯೂ ಮುಂಬಯಿಯ ಕಳ್ಳಪೇಟೆ ಕೇಳುವದೇನು? ಆದರೂ ಅವನು ಹಿಂಜರಿಯಲಿಲ್ಲ. ಬೇಡಿದಷ್ಟು ಹಣತೆತ್ತು ಒಂದು ತುಳಸಿ ಸಸಿಯನ್ನು ಕೊಂಡ. ತುಳಸಿ ಮದುವೆಯು ಅತ್ಯಂತ ವಿಜೃಂಭಣೆಯಿಂದ ಸಾಂಗವಾಯಿತು. ಉಂಡು ತೇಗಿ ಅವನ ಮಿತ್ರ ಪರಿವಾರವು ಅವನನ್ನು ಕೊಂಡಾಡಿತು.

ಆ ದಿನ ಶ್ಯಾಮುನಿಗೂ ವಿಮಲೆಗೂ ಆನಂದವೇ ಆನಂದ. ರಾತ್ರಿ ಮಾತ್ರ ಈರ್ವರಿಗೂ ನಿದ್ರೆ ಬರಲಿಲ್ಲ; ತುಳಸಿ ಮದುವೆಯ ನಿಮಿತ್ತ ಆದ ಸಾಲವನ್ನು ಹೇಗೆ ತೀರಿಸಬೇಕೆಂದುದೆ ಅವರಿಗೆ ಚಿಂತೆ.

ಮದುವೆಯಾದ ಮೇಲೆ ಹೊಸ ಆಯುಷ್ಯವೇ ಪ್ರಾರಂಭವಾಗುತ್ತದೆಂದು ಹೇಳಲಾಗುತ್ತದೆ. ಆಗ ಬರುವ ಹಬ್ಬ ಹುಣ್ಣಿವೆಗಳ ಬಣ್ಣವೇ ಬೇರೆ ಕಾಣುವದುಂಟು. ಅದಕ್ಕಾಗಿಯೇ ಏನೋ ನವ ದಂಪತಿಗಳು ಅವುಗಳನ್ನು ಅಷ್ಟು ವಿಜೃಂಭಣೆಯಿಂದ ಆಚರಿಸುವರು.

ನಾಥೂಭಾಯಿ ಜಠಾರಮಲ್ಲನೆಂಬ ೨೫ ವರ್ಷದ ತರುಣನು ಮೃದುಲಾಬೆಹನಳನ್ನು ಆದೇ ಆಗಿದ್ದನು. ಮದುವೆಯ ಅರಿಷಣ ಇನ್ನೂ ಮೈಮೇಲೆ ಕಾಣುತ್ತಿತ್ತು. ಹುರುಪಿನ ಅವರ ಹೊಸ ಆಯುಷ್ಯದಲ್ಲಿ ಮೊದಲಿನ ಹಬ್ಬವೆಂದರೆ ಅದೇ— ತುಳಸಿ ಮದುವೆ!

ನಾಥೂಭಾಯಿ ಜಠಾರಮಲ್ಲನು ತನ್ನ ಪ್ರಾಂತದವರಂತೆ ಗುಜರಾತದಿಂದ ಮುಂಬಯಿಗೆ ವ್ಯಾಪಾರಕ್ಕಾಗಿ ಬಂದವ. ದಾದರದಲ್ಲಿ ಅವನದೊಂದು ಚಿಕ್ಕ ತಕ್ಕಡಿಯ ಅಂಗಡಿ. ತಿಂಗಳದ ವೆಚ್ಚ ಸಾಗಿ ಕೈಯಲ್ಲಿ ಐದು ರೂಪಾಯಿ ಉಳಿಯುವಷ್ಟು ಅವನಿಗೆ ವ್ಯಾಪಾರದಿಂದ ಬರುವ ಲಾಭ.

ನಾಥೂಭಾಯಿ ತುಳಸಿ ಮದುವೆಯನ್ನು ಅತ್ಯಂತ ವಿಜೃಂಭಣೆಯಿಂದ, ಅದು ಚಿರಸ್ಮರಣೀಯವಾಗುವಂತೆ, ಆಚರಿಸಬೇಕೆಂದು ನಿಶ್ಚಯಿಸಿದ. ಮೃದುಲಾಬೆಹನಳು ಅವನಿಗೆ ಬೆಂಬಲವನ್ನಷ್ಟೇ ಅಲ್ಲದೆ ಸಹಾಯದ ಆಶ್ವಾಸನವನ್ನೂ ಕೊಟ್ಟಳು.

ಸರಕಾರವು ಬಹುತರ ಎಲ್ಲ ಪದಾರ್ಥಗಳ ಮೇಲೆ ನಿಯಂತ್ರಣ ಹೇರಿದ್ದರಿಂದ ನಾಥೂಭಾಯಿಯ ಕೈಕಟ್ಟಿದಂತಾಗಿತ್ತು. ಆದರೂ ಅವನು ಹೆದರಲಿಲ್ಲ.

ಸುತ್ತಲಿನ ಹಳ್ಳಿಗಳನ್ನೆಲ್ಲ ಸುತ್ತಾಡಿ ನಾಥೂಭಾಯಿ ಐನೂರು ತುಳಸಿ ಸಸಿಗಳನ್ನು ಕಲೆ ಹಾಕಿದ. ಮಸರೆಯ ದಿವಸ ಬನ್ನಿಗಿದ್ದಷ್ಟೆ ತುಳಸಿ ಮದುವೆಯ ದಿನ ತುಳಸಿ ಸಸಿಗಳಿಗೆ ಬೆಲೆ. ಅದರಲ್ಲಿ ಹೇಳಿ ಕೇಳಿ ಮುಂಬಯಿ. ಕೇಳುವದೇನು? ಅವನು ಹೇಳಿದುದೆ ದರ. ಎಲ್ಲ ಸಸಿಗಳು ನೋಡ ನೋಡುವಷ್ಟರಲ್ಲಿ ಮಾರಾಟವಾದವು.

ಆ ದಿನ ನಾಥೂಭಾಯಿಗೂ ಮೃದುಲಾಬೆಹನಳಿಗೂ ಆನಂದವೇ ಆನಂದ. ರಾತ್ರಿ ಈರ್ವರೂ ರೂಪಾಯಿಯ ಗಂಟಿನ ಕಡೆಗೆ ನೋಡುತ್ತ ಸುಖವಾಗಿ ನಿದ್ರೆ ಹೋದರು.

ವಿಚಾರ ಪ್ರಚೋದನ

ಲೇ— ಶ್ರೀ ವಿ. ಎಸ್. ಶ್ರೀಧರ, ಎಂ. ಎ.

ವಿವೇಕವುಳ್ಳದಿರುವುದೆಂದು ಮನುಷ್ಯನನ್ನು ಮನುಷ್ಯನೆಂದು ಕರೆಯಲಾಗುತ್ತಿದೆ. ಮನುಷ್ಯನು ಪ್ರಾಣಿಯಾದರೂ ವಿವೇಕ ವಿಶಿಷ್ಟನು. (Man is a rational animal) ವಿಚಾರದ ಜ್ಯೋತಿಯು ಒಂದು ನಾಡಿನಲ್ಲಿ ಮಸುಕಾದರೆ ಜನಜೀವನದಲ್ಲಿ ಯಾವ ಉನ್ನತಿಯೂ ಸಾಧಿಸದು.

ಒಂದು ನಾಡಿನ ನಾಗರಿಕತೆಯನ್ನು ವರ್ಣಿಸುವಾಗ ಅಲ್ಲಿ 'ಮೈದಗ್ಧೀ ಮಧುರ ಪ್ರಬಂಧಗಳಿ' [illegible] ಒಬ್ಬ ಕವಿ ವರ್ಣಿಸುತ್ತಾನೆ. ಮಧುರ ಪ್ರಬಂಧ ಬರೆವ ವಿದಗ್ಧತೆ (ವಿದ್ವತ್ತೆ) ಇರದೇ ಹೋದರೆ ಅಲ್ಲಿಯ ನಾಡಿಗರು ಎಂತಹ ವಿಚಾರವಂತರಿರಬೇಕು? ಹಿಂದೂಸ್ತಾನದಲ್ಲಿ ಸಾಹಿತ್ಯ, ಕಲೆ, ಸಾಮಾಜಿಕ ವಿನೋದ ಸುಖ ಸಂಸ್ಥೆಗಳು ಪ್ರಾಚೀನತೆಯ ಕಾಲದಿಂದ ಅಧುನಿಕತೆಯ ಭೂಮಿಗೆ ಇನ್ನೂ ಬಂದು ಮುಟ್ಟಿಲ್ಲ. ಇಷ್ಟು ದಿನದಿಂದ ನಮ್ಮ ವಿದ್ಯಾವಂತರು ಪಾಶ್ಚಾತ್ಯ ನಾಗರಿಕತೆಯ ಸಂಪರ್ಕದಿಂದ ಅಧುನಿಕತೆಯೆಂದರೇನೆಂಬುವನ್ನು ಅರ್ಥಮಾಡಿಕೊಳ್ಳುವುದರಲ್ಲೇ ಕಳೆಯಬೇಕಾಯಿತು. ಹಾಗೂ ಅವರು ತಮ್ಮ ದೇಶದ ರೀತಿಯಿಂದ ನಮ್ಮ ಸಂಸ್ಕೃತಿಯ ಕಳಂಕಗಳನ್ನು ತೊಡೆಸಿ, ತೊಳೆದು ಬೆಳಗಿಸಿ ಅವನ್ನು ಅಧುನಿಕತೆಯ ಮೆರುಗುಕೊಟ್ಟು ಹೆಚ್ಚಿಸುವುದರಲ್ಲಿ ತಕ್ಕಮಟ್ಟಿಗೆ ಶ್ರಮಿಸುತ್ತ ಬಂದಿದ್ದಾರೆ.

ಜಗತ್ತಿನಲ್ಲಿ ಹಿಂದೂಸ್ತಾನವಿಂದು ಒಂದು ಹಿಂದುಳಿದ ರಾಷ್ಟ್ರವೆನಿಸಿದರೆ, ಕರ್ನಾಟಕವು ಸದ್ಯದ ಪರಿಸ್ಥಿತಿಯಲ್ಲಿ, ಉಳಿದ ಪ್ರಾಂತದಲ್ಲಾದ ಸಾಮಾಜಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳನ್ನವಲೋಕಿಸಿದರೆ, ಇಂದು ಮತ್ತೂ ಹಿಂದುಳಿದಿದೆಯೆನ್ನಬೇಕಾಗುತ್ತದೆ. Pen is mightier than the sword- ಲೆಕ್ಕಣಿಕೆ ಕರವಾಳಿಗಿಂತ ಬಲಿಷ್ಠ ಎಂಬ ಮಾತಿನ ಸತ್ಯತೆಯನ್ನು ಹಿಟ್ಲರ, ಸ್ಟಾಲಿನ, ಟ್ರೂಮನ ಮುಂತಾದ ಮುತ್ಸದ್ದಿಗಳು ತಮ್ಮ ನಾಡಿಗರ ರಾಜಕೀಯ ಭಾವಗಳನ್ನು ರೂಪಿಸುವುದಕ್ಕೆ ಕೈಕೊಂಡ ಪ್ರಚಾರಕಾರ್ಯ ಕ್ರಮಗಳೇ ಸಾರುತ್ತವೆ- ಇಂತಹ ಪರೀಕ್ಷಿತ ಸಾಮರ್ಥ್ಯವುಳ್ಳ ಲೆಕ್ಕಣಿಕೆಯನ್ನು ಬಳಸಿ ಇಂದು ಜಾಡ್ಯದಿಂದ ಮಲಗಿರುವ ಕನ್ನಡ ಉದ್ಯೋಗಿಗಳನ್ನು, ವ್ಯಾಪಾರಿಗಳನ್ನು, ಕಲಾವಿದರನ್ನು, ರಸಿಕರನ್ನು, ಸಮಾಜ ಸುಧಾರಕರನ್ನು, ಬಡಿದೆಬ್ಬಿಸಿ ನಾಗರಿಕ ನವ ಸಂದೇಶದಿಂದ ಮುನ್ನಡೆಯ ಹಚ್ಚುವ ಕಾರ್ಯ ಸಾಗಬೇಕಾಗಿದೆ. ಈ ಹಾದಿಯಲ್ಲಿ ಶ್ರೀಗಳಾದ ಕೋ. ಶಿವರಾಮ ಕಾರಂತ ಶ್ರೀರಂಗ, ಅ. ನ. ಕೃ, ಮಾ. ಕಸ್ತೂರಿ, ಬೇಂದ್ರೆ, ಗೋಕಾಕ, ಕೈಲಾಸಂ, ತಾರಾನಾಥ, ಕೆ. ವಿ. ಪುಟ್ಟಪ್ಪ, ಗೊರೂರು ರಾಮಸ್ವಾಮಿ ಅಯ್ಯಂಗಾರ ಮುಂತಾದ ಉದ್ದಾಮ ಸಾಹಿತಿಗಳು ಕೆಲಮಟ್ಟಿಗೆ ನವೆಮ ಯಶಸ್ವಿಗಳಾಗಿದ್ದಾರೆ. ಇಂದಿನ ತರುಣ ಸಾಹಿತಿಗಳಾದರೂ ಇದೇ ದೃಷ್ಟಿಯಿಂದ ಮುನ್ನಡೆಯಲು ಪ್ರಯತ್ನಿಸುತ್ತಿರುವುದು ಸ್ತುತ್ಯವಾಗಿದೆ.

ಆದರೆ ನಮ್ಮ ನಾಡಿಗರಿಗೆ ಇನ್ನೂ ಹೆಚ್ಚು ಪರಿಣಾಮಕಾರಿಯಾದ ಔಷಧ ಬೇಕೆಂದು ತೋರುತ್ತದೆ. ಅವರಿನ್ನೂ ಕುಂಭಕರ್ಣ ನಿದ್ರೆಯನ್ನೇ ಹಿಡಿದಿರುವುದು, ಪತ್ತೆ ದಾರಿ ಕಾದಂಬರಿಯ ರಸಿಕರಾಗಿರುವುದು, ಕನ್ನಡದ ಯಾವ ವಿಚಾರಪೂರ್ಣ ಪ್ರಬಂಧ ಓದಿದರೂ ಅರ್ಥವಾಗುವದಿಲ್ಲವೆಂದು ಬರೆದವರ ಮೇಲೆ ಹರಿಹಾಯುವ ಜನದಗ್ಗಿಗಳಾಗಿರುವುದು ಕೆಲಮಟ್ಟಿಗೆ ಇಂದಿನ ನಾಯಿಕೊಡೆಯಂತೆ ಬೆಳೆಯುತ್ತಿರುವ ಕಥಾದಿ ಜೊಳ್ಳು ಸಾಹಿತ್ಯದ ಉದ್ವೇಜಕತ್ವದಿಂದ ವಿದ್ಯಾಪ್ರಸಾರ ಚೆನ್ನಾಗಿ ಆಗದುದರಿಂದ ಮತ್ತು ಕನ್ನಡದಲ್ಲಿ ಸರಿಯಾದ ವಿಡಂಬನ ಸಾಹಿತ್ಯ ಬೆಳೆದು ಬರದಿರುವುದರಿಂದ ಎನ್ನಬಹುದು. ಕುಂಭಕರ್ಣರನ್ನು ಎಚ್ಚರಿಸಲು ವಿಡಂಬನದ ನಾನಾ ಅಲಗುಗಳಾದ ವ್ಯಂಗ್ಯ, ವಿರೋಧ, ಉಪಹಾಸ, ಅಪಹಾಸ, ಅಣಕ, ಮೂದಲಿಕೆ, ಅತಿಶಯೋಕ್ತಿ, ಅಪ್ರಸ್ತುತ ಪ್ರಸಂಶೆ, ಆಕ್ಷೇಪ, ವಕ್ರೋಕ್ತಿ ಮುಂತಾದವುಗಳಿಂದು ಮುಂದೆ ಬರಬೇಕಾಗಿದೆ. ಈ ನವ ನಾಗರಿಕ ಮಾರ್ಗದಲ್ಲಿ ಕಾಲಿಟ್ಟು ಸಿದ್ಧ ಹಸ್ತರೆನಿಸಿದವರಲ್ಲಿ ಶ್ರೀಗಳಾದ ಕಾರಂತ, ಶ್ರೀರಂಗ, ಕೈಲಾಸಂ, ಕಸ್ತೂರಿ ಮೊದಲಾದವರು ಪ್ರಮುಖರು. ಈ ಸಾಹಿತ್ಯದ ಪರಿಚಯವನ್ನು ಜನರಿಗಿನ್ನೂ ಹೆಚ್ಚು ಚೆನ್ನಾಗಿ ಮಾಡಿಕೊಡಬೇಕಾಗಿದೆ. ವಿಚಾರ ಪ್ರಚೋದನ ಸದ್ಯಃಪರಿವರ್ತಿಗಳು [illegible] ಪರಿಣಾಮಿಯಾಗಿ ಸಾಧಿಸುವುದು— [illegible] ರನ್ನು ಉಚ್ಚ್ರಸಗೊಳಿಸಲಿದು [illegible] ಹೊಸ್ಲೆ [illegible] ಒಬ್ಬನು ವಿಮರ್ಶೆಯನ್ನು [illegible] ಅರ್ಥ ಸ್ವಾರಸ್ಯ [illegible] ಉದ್ರೇಕ, ಸದ್ಯಃ [illegible]

ಅದರ ಸಂಬಂಧ ಇದನ್ನು [illegible] ಒಬ್ಬ ಸುಧಿಗಾರರು [illegible] ಅದರ [illegible] ದಿಂದು ಬರೆದರು. [illegible] ನಮ್ಮ ಸಾಮಾಜಿಕದಲ್ಲಿ [illegible] ವಿಚಾರ, ಸ್ವಾರಸ್ಯ, ಅಧ್ಯಯನಗಳನ್ನು [illegible] ಮತ್ತು [illegible] ಬಳಸಿಕೊಳ್ಳುವ ಪ್ರವೃತ್ತಿ [illegible] ಬೇಕಾದರೆ [illegible] ಬೆಳೆಯುವುದು ಪ್ರಚಾರಗೊಳ್ಳಬೇಕಾಗಿದೆ. ನಮ್ಮ ಸಾಹಿತಿಗಳು ಇತ್ತ ಲಕ್ಷ್ಯಕೊಡುವರೇ?

[illegible] ದೇಶದ ಒಬ್ಬ ಪ್ರಸಿದ್ಧ [illegible] ರನು, ಜಗತ್ತಿನ ಪ್ರಸಿದ್ಧ ವಿಡಂಬನಕಾರರನ್ನು ಒಂದು ಕಡೆ [illegible] ಸಮಸ್ಯೆಗಳನ್ನು [illegible] ಕಾಲದಲ್ಲಿ ಅತ್ಯಂತ [illegible] ಬಗೆಯುವರು ಎನ್ನುತ್ತಾನೆ. [illegible] ವಿಡಂಬನಕಾರರು [illegible] ಕವನ ಲೆಕ್ಕಣಿಕೆ [illegible] ದೋಷಗಳನ್ನು [illegible] ತೋರಿಸುತ್ತಾರೆ- ಈ ಮಾದರಿಯ ವಿಡಂಬನ ಕಾರದಲ್ಲಿ ಗುಪ್ತಗಾಮಿಯಾಗಿ [illegible] ಅಲ್ಲಲ್ಲಿ ತಮ್ಮ [illegible] ಪ್ರದರ್ಶಿಸುತ್ತ ಬಂದವರಲ್ಲಿ ಒಬ್ಬರೆಂದರೆ ಮೈಸೂರಿನ ಮಹಾರಾಜಾ ಕಾಲೇಜಿನ ಹಿಂದಿನ ಸಂಸ್ಕೃತ ಪ್ರಾಧ್ಯಾಪಕರಾದ ಶ್ರೀಮಾನ್ ಎ. ಆರ್. ಕೃಷ್ಣಶಾಸ್ತ್ರಿಗಳು. ಇವರು [illegible] ಈ ವಿಶೇಷ ಲಕ್ಷಣವನ್ನು [illegible] ಭಾಷಣಮಾಡುವಾಗ [illegible] ಕೊಂಡದ್ದುಂಟು. [illegible] ಉತ್ತಮ [illegible] ಕಾಣಬರದು- ಅದರಂತೆ ಅವರು [illegible] ಎಂಬುದು [illegible] ಕ್ರಮಮಿಸಿದರು. ಇಂತಹ [illegible] ಚಾತುರ್ಯ ಸಂಪನ್ನರೂ [illegible] ಗಳೂ ಆದ ವಿಡಂಬನಕಾರರನ್ನು ಕನ್ನಡ ನಾಡು ಕಾರ್ಯೋನ್ಮುಖರನ್ನಾಗಿ ಮಾಡಬೇಕಾಗಿದೆ. ಕನ್ನಡನಾಡಿಗರ ಸುಪ್ತ ಶಕ್ತಿಗಳನ್ನು ಎಚ್ಚರಿಸಿ ಅವರನ್ನು ಜೀವನದ ನಾನಾ ರಂಗಗಳಲ್ಲಿ ಮುನ್ನಡೆಸು ಹಚ್ಚಲು ಅಂಥವರಿಂದು ನಮಗೆ ಬೇಕು. ನಮ್ಮ ಸಾಹಿತಿಗಳ ಸಾಧನೆಯು ಗುರಿಗೆ ಹತ್ತಿದುದ್ದೆಂದು ಇದು ಪ್ರಧಾನ ಸ್ಥಾನಪಡೆದರೆ ನಾಡಿಗರ ಜೀವನದ ಪ್ರಗತಿಗೆ ಬಹಳ ಸಹಕಾರಿಯಾಗಬಲ್ಲದು. ನಮ್ಮಲ್ಲಿ ಅಭಿನವ ಅಂಟೋನಿ, ಬರ್ನಾರ್ಡ್ ಷಾ ಮುಂತಾದವರು ಉದಯಿಸಬೇಕು; ಎರವನೆಯು [illegible] ಬರಬೇಕು; [illegible] ಬೇಕು. ಹಾಗೆ ಹಾರೈಸೋಣವೆ?

ಸಾದರ ಸ್ವೀಕಾರ

ತಿರುಮಾಲೈ

ಲೇಖಕರು— ಅ. ನ. ಶ್ರೀನಿವಾಸಮೂರ್ತಿ ಪ್ರಕಾಶಕರು- ಮೈಸೂರ ಪ್ರಿಂಟಿಂಗ ಮತ್ತು ಪಬ್ಲಿಶಿಂಗ ಹೌಸ ಮೈಸೂರ. ಪುಟಗಳು ೪೦ ಸಾದಾ ಪ್ರತಿ ಬೆಲೆ [illegible] ಕ್ಯಾಲಿಕೊ ಪ್ರತಿ [illegible]

ರಾಮರಾಜ್ಯ (ಕನ್ನಡ ಮಾಸಿಕ)

ಸಂಪಾದಕರು-ಪ್ರಕಾಶಕರು ಎಸ್. ವ್ಹಿ. ವರದರಾಜನ್ ಜಯರ್ [illegible] ಬಸವನಗುಡಿ ಬೆಂಗಳೂರ [illegible] ಬಿಡಿಸಂಚಿಕೆ ೧ ಆಣೆ

ಅಶೋಕ ಚಕ್ರ

ಲೇಖಕ- [illegible] ಪ್ರಕಾಶಕರು- ಎಂ. [illegible] ಪುಟಗಳು [illegible] ಬೆಲೆ [illegible]

ಔದಾರ್ಯದ ಉರುಳಲ್ಲಿ

ಲೇಖಕರು— [illegible]

Mr. Jinnha : A Political study.

By. V. N. Naik M.A.

Sadbhakti Publications.

Homaji street fort Bombay.

Pages 90 Price 4-8-0

Reg. No. B. 3148 | LICENCE No. 3 Licenced to Post without Prepayment | KARMVEER 29-12-47

ಯೋಗಿವರ ಶ್ರೀ ೧೦೮ ರಾಮಲಕ್ಷ್ಮಣ ಸ್ವಾಮಿಗಳ ಸಮಾಧಿಯೋಗದ ಅದ್ಭುತ ಪ್ರಯೋಗ




ಗುರ್ವಾಜ್ಞೆಯ ಮೇರೆಗೆ ಸ್ವಾಮಿಗಳು ಹೃಷೀಕೇಶದಿಂದ ಯೋಗಾಭ್ಯಾಸದ ಪ್ರಚಾರಕ್ಕಾಗಿ ಹೊರಟಿದ್ದಾರೆ. ಹುಬ್ಬಳ್ಳಿಗೆ ಬಂದು ಅಲ್ಲಲ್ಲಿ ಪ್ರವಚನ ಮಾಡಿ ಯೋಗಾಭ್ಯಾಸದ ಮಹತ್ವವನ್ನು ಪ್ರತ್ಯಕ್ಷ ಪ್ರಯೋಗದಿಂದ ಜನರಿಗೆ ತಿಳಿಸಿದರು. ಇವರು ಹಿಮಾಲಯದಲ್ಲಿ ೩೬ ವರ್ಷ ಇದ್ದು ಸಾಧನ ಮಾಡಿದ್ದಾರೆ. ಇವರಿಗೆ ಈಗ ೬೦ ವರ್ಷಗಳಾಗಿದ್ದರೂ ನೋಡಲು ೩೦—೩೫ ರಂತೆ ಕಾಣುತ್ತಾರೆ. ಇವರ ಗುರುಗಳಿಗೆ ೨೫೦ ವರ್ಷಗಳಾಗಿವೆಯಂತೆ ಇದೆಲ್ಲ ಯೋಗಾಭ್ಯಾಸದ ಪ್ರಭಾವವೆಂದು ಸ್ವಾಮಿಗಳು ಹೇಳಿದರು. ಪಾಟನಾದಲ್ಲಿ ಇವರೊಮ್ಮೆ ೪೫ ದಿನ ಸಮಾಧಿಯಲ್ಲಿ ಕುಳಿತಿದ್ದರಂತೆ

ಹುಬ್ಬಳ್ಳಿಯ ಭಾರತಮಿಲ್ಲಿನ ಕ್ರೀಡಾಂಗಣದಲ್ಲಿ ತಾ. ೨೦ ರಂದು ಶ್ರೀ ೧೦೮ ರಾಮಲಕ್ಷ್ಮಣ ಸ್ವಾಮಿಗಳು ಸರಿಯಾಗಿ ರಾತ್ರಿ ೮ ಕ್ಕೆ ಸಮಾಧಿಯನ್ನು ಹಚ್ಚಿ ಕುಳಿತರು. ಪಟಾಂಗಣವು ತಳಿರು ತೋರಣ, ಹಂದರ, ವಿಪುಲ ವಿದ್ಯುದ್ದೀಪಗಳಿಂದ ಅಲಂಕೃತವಾಗಿತ್ತು. ಸ್ತ್ರೀ ಪುರುಷರ ಸ್ತೋಮ ಕಿಕ್ಕಿರಿದಿತ್ತು. ಸ್ವಾಮಿಗಳ ಸಮಾಧಿಗಾಗಿ ೫ ಅಡಿ ಆಳದ ಹಾಗು ೫ ಅಡಿ ಚದುರು ತಗ್ಗೊಂದು ಸಿಮೆಂಟಿನಿಂದ ರಚಿತವಾಗಿ ಸಿದ್ಧವಾಗಿತ್ತು. ಸಮಾಧಿ ತೆಗೆದುಕೊಳ್ಳುವ ಪೂರ್ವದಲ್ಲಿ ಬ್ರಾಹ್ಮಣರು ವೇದೋಕ್ತ ಹೋಮಾದಿಗಳನ್ನು ಮಾಡಿದರು. ಹೋಮಾನಂತರ ಸ್ವಾಮಿಗಳು ಉಪದೇಶಪರ ಮಾತು ಹೇಳಿ ಯೋಗ ಬಲವನ್ನೂ ನಾಮ ಮಹಾತ್ಮ್ಯವನ್ನೂ ವಿವರಿಸಿ ನೆರೆದ ಸ್ತೋಮವನ್ನು ಆಶೀರ್ವದಿಸಿ ಸಮಾಧಿ ಪ್ರವೇಶ ಮಾಡಿದರು. ತಾ. ೨೧ ರವಿವಾರ ಮುಂಜಾನೆ ೯ ಗಂಟೆಗೆ ಅಂದರೆ ೧೩ ತಾಸುಗಳ ನಂತರ ಸಮಾಧಿಯಿಂದ ಎದ್ದು ಬಂದರು. ಸಮಾಧಿಯನ್ನು ಸಿಮೆಂಟು ಹಾಳೆಗಳಿಂದ ಮುಚ್ಚಿ ಮೇಲೆ ೨ ಬಂಡಿಯಷ್ಟು ಮಣ್ಣು ಹಾಕಲಾಗಿತ್ತು.

ಮೊದಲೇ ಗೊತ್ತಾದ ಮೇರೆಗೆ ರವಿವಾರ ಬೆಳಿಗ್ಗೆ ಸರಿಯಾಗಿ ೯ ಘಂಟೆಗೆ ಹಿಂದಿನ ದಿನ ಸಾಯಂಕಾಲ ಸಮಾಧಿ ಯೋಗವನ್ನು ಪ್ರಾರಂಭಿಸಿದ ಶ್ರೀ ರಾಮಲಕ್ಷ್ಮಣ ಸ್ವಾಮೀಜಿಯವರನ್ನು ೧೩ ತಾಸುಗಳ ನಂತರ ತಗ್ಗಿನಿಂದ ಮೇಲೆ ಎತ್ತಿ ತಂದು ಕುಳ್ಳಿರಿಸಲಾಯಿತು. ಮುಂದೆ ಒಂದೆರಡು ನಿಮಿಷಗಳಲ್ಲಿ ಸ್ವಾಮೀಜಿಯವರು ಸಮಾಧಿಯನ್ನು ಇಳಿಸಿ ಕಣ್ಣು ತೆರೆದರು.

ಸ್ವಾಮೀಜಿಯವರ ಮುಖ ತೇಜಃಪುಂಜವಾಗಿತ್ತು. ಈ ಅಪೂರ್ವ ದೃಶ್ಯವನ್ನು ನೋಡಲು ಬಂದ ಜನರ ಪ್ರಚಂಡ ಜಯಜಯಕಾರದ ಮಧ್ಯದಲ್ಲಿ ಅವರಿಗೆ ಪುಷ್ಪಮಾಲೆ ಹಾಕಲಾಯಿತು. ಸ್ವಾಮೀಜಿಯವರು ಧ್ವನಿವಾಹಕ ಯಂತ್ರದ ಮೂಲಕ ಕೂಡಿದ ಜನರನ್ನುದ್ದೇಶಿಸಿ ಭಕ್ತಿ ಹಾಗು ಧರ್ಮ ಇವೇ ಜಾಗತಿಕ ಶಾಂತಿ ತರಬಲ್ಲವು. ದೇವರಲ್ಲಿ ಭಕ್ತಿಯನ್ನಿಟ್ಟು ಸದ್ಧರ್ಮ ಆಚರಣೆಯಿಂದ ನೀವು ಸಾಗಿದ್ದಾದರೆ ಈಗ ದೊರೆತ ಸ್ವರಾಜ್ಯವು ಚಿರಕಾಲ ಉಳಿಯಬಹುದು. ಯೋಗದಿಂದ ದೊರೆಯುವ ಆನಂದ ಇನ್ನಿತರ ಯಾವುದರಿಂದಲೂ ದೊರೆಯಲಾರದು ಎಂದು ಮಂತಾಗಿ ಭಾಷಣ ಮಾಡಿದರು.

ಸ್ವಾಮೀಜಿಯವರಿಗೆ ಅನೇಕ ಭಕ್ತರು ಕಾಣಿಕೆಗಳನ್ನರ್ಪಿಸಿದರು. ಸುಮಾರು ೧೦೦೦ ರೂ. ಕೂಡಿರುವದಾಗಿ ತಿಳಿಯುತ್ತದೆ. ಸ್ವಾಮಿಗಳು ಅಲಹಾಬಾದದಲ್ಲಿ ಒಂದು ಆಶ್ರಮ ತೆಗೆದಿದ್ದು ಅಲ್ಲಿ ಯೋಗಾಭ್ಯಾಸದ ಬಗ್ಗೆ ಎಲ್ಲ ಬಗೆಯ ಏರ್ಪಾಟು ಮಾಡಲಾಗಿದೆಯಂತೆ. ಹೀಗೆ ಸಂಗ್ರಹವಾದ ಹಣದ ಪ್ರತಿಯೊಂದು ಪೈ ಯೋಗ ಪ್ರಸಾರಕ್ಕಾಗಿ ವಿನಿಯೋಗವಾಗುವ ಕಾರಣ ದಾನಕೊಟ್ಟವರಿಗೆ ಕೋಟ್ಯನುಕೋಟಿ ಗೋದಾನ ಮಾಡಿದ ಪುಣ್ಯ ಲಭಿಸಬಹುದೆಂದು ಸ್ವಾಮಿಗಳು ಉದ್ಗಾರತೆಗೆದರು. ದೇಹವನ್ನು ಬಾಗೊಳಿಸಿ ದೀರ್ಘಾಯುಗಳಾಗಿ ಬಾಳಬೇಕೆಂಬ ಗೃಹಸ್ಥರಿಗೂ ಅವರ ಯೋಗಾಶ್ರಮದಲ್ಲಿ ತಕ್ಕ ಶಿಕ್ಷಣದ ಏರ್ಪಾಡು ಇರುವದಂತೆ. ಇದು ಈ ಸಂಸ್ಥೆಯ ವೈಶಿಷ್ಟ್ಯವೆಂದು ಹೇಳಬಹುದು. ಅಧ್ಯಾತ್ಮಿಕ ಉನ್ನತಿಗಾಗಿ ಯೋಗಸಾಧನ ಮಾಡಿ ಸಮಾಧಿ ಸುಖವನ್ನು ಹೊಂದಬೇಕೆನ್ನುವವರಿಗಂತೂ ಸಾಧನ ಮೂಲಕ ಸಾಧನಗಳ ಎಲ್ಲ ...



ಸಂಸ್ಥಾನಗಳ ವಿಲೀನೀಕರಣ

ದಕ್ಷಿಣ ಸಂಸ್ಥಾನ ರಾಜಮಂಡಳದ ಸಿದ್ಧತೆ

ಜಮುಖಂಡಿ ರಾಜೇಸಾಹೇಬರ ಮಾರ್ಗದರ್ಶನ

ಸದ್ಯದ ಪರಿಸ್ಥಿತಿಯಲ್ಲಿ ಸಂಸ್ಥಾನಗಳ ಆಡಳಿತವನ್ನು ಪ್ರಜೆಗಳ ಸುಖಸೌಕರ್ಯಗಳಿಗೆ ಅನುಕೂಲವಾಗುವ ರೀತಿಯಲ್ಲಿ ಸಾಗಿಸಿಕೊಂಡು ಹೋಗುವದು ಶಕ್ಯವಿಲ್ಲ ಎಂದು ಜಮುಖಂಡೀ ರಾಜೇಸಾಹೇಬರು ತಮ್ಮ ಸಂಸ್ಥಾನವನ್ನು ಮುಂಬಯಿ ಪ್ರಾಂತದಲ್ಲಿ ವಿಲೀನ ಮಾಡಿಬಿಡಲು ನಿರ್ಧರಿಸಿದರಷ್ಟೇ. ಈ ಸಂಬಂಧದಲ್ಲಿ ಅವರು ಕಳೆದ ತಿಂಗಳು ೨೩ನೇ ತಾರೀಖಿಗೆ ಸರದಾರ ವಲ್ಲಭಭಾಯಿಯವರನ್ನು ಭೆಟ್ಟಿಯಾಗಿ ವಿಚಾರ ವಿನಿಮಯ ಮಾಡಿದರು. ರಾಜಪ್ರಜೆಗಳಿಬ್ಬರೂ ಒಪ್ಪಿದಲ್ಲಿ ವಿಲೀನೀಕರಣಕ್ಕೆ ತಮ್ಮದೇನೂ ಆಕ್ಷೇಪವಿಲ್ಲೆಂದು ಅವರು ಆಶ್ವಾಸಿಸಿದರು. ತತ್ಪರಿಣಾಮವಾಗಿ ರಾಜೇಸಾಹೇಬರು ತಮ್ಮ ಸಂಸ್ಥಾನ ಪ್ರಜೆಗಳ ಅಭಿಪ್ರಾಯವನ್ನು ತಿಳಿದುಕೊಳ್ಳುವುದಕ್ಕಾಗಿ ಕಳೆದ ವಾರ ಕುಂದಗೋಳ ಸಂವಶಿ ಭಾಗಗಳಲ್ಲಿ ಸಂಚರಿಸಿ ತಮ್ಮ ಯೋಜನೆಯನ್ನು ಪ್ರಜೆಗಳಿಗೆ ತಿಳಿಸಿ ಹೇಳಿದರು. ಸಂವಶಿ ಕುಂದಗೋಳ ಮುನಸಿಪಾಲಿಟಿ ಪರವಾಗಿ ರಾಜೇಸಾಹೇಬರಿಗೆ ಕೊಡಲ್ಪಟ್ಟ ಮಾನಪತ್ರಗಳಲ್ಲಿ ವಿಲೀನೀಕರಣಕ್ಕೆ ಬೆಂಬಲ ಕೊಡಲಾಯಿತು. ಕಮಡೊಳ್ಳಿಯಲ್ಲಿ ಕೂಡಿದ ರೈತ ಪರಿಷತ್ತಿನಲ್ಲಿಯೂ ಈ ಯೋಜನೆಗೆ ಬೆಂಬಲ ಕೊಡುವ ಗೊತ್ತುವಳಿ ಸ್ವೀಕೃತವಾಯಿತು. ಕುಂದಗೋಳ ತಾಲೂಕಿನ ಪರವಾಗಿ ಕೊಡಲ್ಪಟ್ಟ ಮಾನಪತ್ರದಲ್ಲಿಯೂ ವಿಲೀನೀಕರಣಕ್ಕೆ ಅನುಕೂಲ ಅಭಿಪ್ರಾಯವನ್ನು ವ್ಯಕ್ತಮಾಡಲಾಯಿತು. ಈ ರೀತಿ ಕುಂದಗೋಳ ಸಂವಶಿ ಭಾಗದ ಪ್ರಜೆಗಳ ಒಪ್ಪಿಗೆಯನ್ನು ಪಡೆದು ರಾಜೇಸಾಹೇಬರು ಜಮುಖಂಡಿ ಭಾಗದ ಪ್ರಜೆಗಳ ಅಭಿಪ್ರಾಯವನ್ನು ತಿಳಿದುಕೊಳ್ಳುವ ಮನೀಷೆಯನ್ನು ವ್ಯಕ್ತಮಾಡಿದರು.

ಜಮುಖಂಡಿ ರೈತ ಪರಿಷತ್ತು

ಜಮುಖಂಡಿ ರೈತ ಪರಿಷತ್ತಿನ ೧೨ನೇ ಅಧಿವೇಶನ ಬನಹಟ್ಟಿಯಲ್ಲಿ ೨೧ನೇ ತಾರೀಖು ಶ್ರೀ. ದೊಡ್ಡಮೇಟಿ ಅಂದಾನೆಪ್ಪನವರ ಅಧ್ಯಕ್ಷತೆಯಲ್ಲಿ ಸಾಂಗವಾಯಿತು. ಜಮುಖಂಡಿ ರಾಜೇಸಾಹೇಬರೆ ಈ ಪರಿಷತ್ತನ್ನು ಪ್ರಾರಂಭಿಸಿ ವಿಲೀನೀಕರಣದ ತಮ್ಮ ನಿರ್ಧಾರವನ್ನು ತಿಳಿಸಿದರಲ್ಲದೆ ಪ್ರಜೆಗಳು ಅದಕ್ಕೆ ಬೆಂಬಲ ಕೊಡುವ ಗೊತ್ತುವಳಿಯನ್ನು ಮಾಡಬೇಕೆಂದೂ ಬಿನ್ನವಿಸಿದರು. ಅಧ್ಯಕ್ಷರಾದ ಶ್ರೀ ಅಂದಾನೆಪ್ಪನವರೂ ರಾಜೇಸಾಹೇಬರ ಈ ಯೋಜನೆಗಾಗಿ ಅವರನ್ನು ಅಭಿನಂದಿಸಿ ಪ್ರಜೆಗಳು ಈ ಸಂಬಂಧದಲ್ಲಿ ಯೋಗ್ಯ ನಿರ್ಧಾರವನ್ನು ಕೈಕೊಳ್ಳಬೇಕೆಂದು ಸೂಚಿಸಿದರು. ವಿಲೀನೀಕರಣಕ್ಕೆ ಬೆಂಬಲ ಕೊಡುವ ಗೊತ್ತುವಳಿಯು ಸರ್ವಾನುಮತದಿಂದ ಸ್ವೀಕೃತವಾಯಿತು. ಜಮುಖಂಡಿ ಸಂಸ್ಥಾನದ ರಾಜರು ಮತ್ತು ಪ್ರಜೆಗಳು ಈ ರೀತಿ ವಿಲೀನೀಕರಣಕ್ಕೆ ತಮ್ಮ ಬೆಂಬಲ ಕೊಟ್ಟು ಸರದಾರ ಪಟೇಲರ ಕರಾರನ್ನು ಪೂರಯಿಸಿದ್ದರಿಂದ ಜಮುಖಂಡಿ ಸಂಸ್ಥಾನವು ಬೇಗ ಮುಂಬಯಿ ಪ್ರಾಂತದಲ್ಲಿ ಸೇರಬಹುದೆಂದು ನಿರೀಕ್ಷಿಸಲಾಗಿದೆ.

ದಕ್ಷಿಣ ಸಂಸ್ಥಾನ ಒಕ್ಕೂಟ ಸಭೆ

ದಕ್ಷಿಣ ಸಂಸ್ಥಾನಗಳಲ್ಲಿ ಜಮುಖಂಡಿ ಒಂದನ್ನು ಬಿಟ್ಟು ಉಳಿದವೆಲ್ಲ ಒಕ್ಕೂಟವನ್ನು ಮಾಡಿಕೊಂಡು ಮುನ್ನಡೆಯಬೇಕೆಂದು ಗೊತ್ತುಪಡಿಸಿ ೨೦ನೇ ತಾರೀಕಿಗೆ ಒಕ್ಕೂಟ ಘಟನಾ ಸಮಿತಿಯ ಪ್ರಾರಂಭವನ್ನು ಔಂಧದ ರಾಜೇಸಾಹೇಬರ ನೇತೃತ್ವದಲ್ಲಿ ಮಾಡಿದವು ಔಂಧದ ರಾಜೇಸಾಹೇಬರು ಪ್ರಾರಂಭ ಭಾಷಣ ಮಾಡುತ್ತ ಈ ಸಂಯುಕ್ತ ದಕ್ಷಿಣ ಸಂಸ್ಥಾನವು ಸಂಪೂರ್ಣ ಪ್ರಜಾ ಪ್ರಭುತ್ವದ ರಾಷ್ಟ್ರವಾಗುವಂತೆ ನೋಡಿಕೊಳ್ಳಬೇಕೆಂದು ಬಿನ್ನವಿಸಿದರು. ಸದಸ್ಯರ ಪ್ರತಿಜ್ಞಾವಿಧಿಯಾದ ನಂತರ ಕಮಲ ನಯನ ಬಜಾಜರು ಅಧ್ಯಕ್ಷ ಭಾಷಣವನ್ನು ಮಾಡುತ್ತ ಪ್ರಜೆಗಳ ಅಂತಿಮ ಗುರಿ ವಿಲೀನೀಕರಣವೆ ಆಗಿರಬೇಕೆಂದೂ ಈ ಸಂಯುಕ್ತ ದಕ್ಷಿಣ ಸಂಸ್ಥಾನ ಸ್ಥಾಪನೆಯು ವಿಲೀನೀಕರಣದ ಗುರಿ ಮುಟ್ಟಲು ಒಂದು ಹೆಜ್ಜೆ ಮಾತ್ರವೆಂದೂ ಹೇಳಿದರು. ಅನಂತರ ಘಟನಾ ಸಮಿತಿಯು ಸಭೆ ಸೇರಿ ಔಂಧದ ಅಪ್ಪಾಸಾಹೇಬ ಪಂತರನ್ನು ಘಟನಾ ಸಮಿತಿಯ ಅಧ್ಯಕ್ಷರನ್ನಾಗಿ ಆರಿಸಲಾಯಿತು. ಶ್ರೀ ಕೋರೆಯವರನ್ನು ಮುಖ್ಯ ಮಂತ್ರಿಗಳಾಗಿ ಆರಿಸಲಾಯಿತು.

ರಾಜಮಂಡಲದ ನಿರ್ಧಾರ

ದಕ್ಷಿಣ ಸಂಸ್ಥಾನದ ರಾಜಮಂಡಳದವರು ಈ ರೀತಿ ಒಕ್ಕೂಟ ಘಟನಾ ಸಮಿತಿಯ ಪ್ರಾರಂಭ ಮಾಡಿದರೂ ಅದರ ಯಶಸ್ಸಿನ ಬಗ್ಗೆ ಸಂಶಯ ಬಂದಿತೋ ಏನೋ ವಿಲೀನೀಕರಣಕ್ಕೂ ತಮ್ಮ ಒಪ್ಪಿಗೆ ಕೊಟ್ಟರು. ಜಮುಖಂಡಿ ರಾಜೇಸಾಹೇಬರೂ ಪ್ರಜೆಗಳೂ ಈ ವಿಲೀನೀಕರಣಕ್ಕೆ ಒಪ್ಪಿಕೊಂಡು ಮುನ್ನಡೆಯಿಡುವಾಗ ತಾವು ಒಕ್ಕೂಟದ ಬಗ್ಗೆ ಪ್ರಯತ್ನಿಸುವದು ಸರಿಯಲ್ಲೆಂದೂ ಅವರಿಗೆನಿಸಿರಬಹುದು. ಏನೇ ಕಾರಣವಿರಲಿ ವಿಲೀನೀಕರಣಕ್ಕೆ ಒಪ್ಪುವ ನಿರ್ಧಾರವನ್ನು ಅವರು ಮಾಡಿದರು. ಅವರು ಸ್ವೀಕರಿಸಿದ ಗೊತ್ತುವಳಿ ಇಂತಿದೆ. 'ಸಂಯುಕ್ತ ದಕ್ಷಿಣ ಸಂಸ್ಥಾನದ ಪ್ರಜೆಗಳೂ ಘಟನಾ ಸಮಿತಿಯು ಸಂಯುಕ್ತ ದಕ್ಷಿಣ ಸಂಸ್ಥಾನದ ಘಟನೆಯನ್ನು ರಚಿಸುವ ಮುನ್ನ ಮುಂಬಯಿ ಪ್ರಾಂತದಲ್ಲಿ ದಕ್ಷಿಣ ಸಂಸ್ಥಾನಗಳು ವಿಲೀನವಾಗಬೇಕೆಂಬ ಇಚ್ಛೆಯನ್ನು ಪ್ರದರ್ಶಿಸಿದ್ದಾದರೆ ರಾಜಮಂಡಳವು ಇದರ ವಿರುದ್ಧ ಹೋಗುವದಿಲ್ಲ, ಈ ರೀತಿ ಗೊತ್ತುವಳಿಯನ್ನು ಸ್ವೀಕರಿಸಿ ದಕ್ಷಿಣ ಸಂಸ್ಥಾನಗಳು ವಿಲೀನೀಕರಣಕ್ಕೆ ಒಪ್ಪಿಗೆಯನ್ನು ಕೊಟ್ಟಿರುವವು. ಈ ಸಂಸ್ಥಾನಗಳ ಪ್ರಜೆಗಳೂ ಒಪ್ಪಿದಲ್ಲಿ ಈ ಎಲ್ಲ ಸಂಸ್ಥಾನಗಳ ವಿಲೀನೀಕರಣವೂ ಬೇಗ ಕಾರ್ಯರೂಪದಲ್ಲಿ ಬರುವದೆಂಬಲ್ಲಿ ಸಂದೇಹವಿಲ್ಲ. ಒಕ್ಕೂಟ ಆಡಳಿತಕ್ಕಿಂತ ವಿಲೀನೀಕರಣವು ಹೆಚ್ಚು ಶ್ರೇಯಸ್ಕರವೆಂಬುದನ್ನು ಜಮುಖಂಡಿ ರಾಜೇಸಾಹೇಬರು ಮೊದಲು ತೋರಿಸಿಕೊಟ್ಟು ಉಳಿದ ರಾಜೇಸಾಹೇಬರಿಗೆ ಮಾರ್ಗದರ್ಶನ ಮಾಡಿ ಕೊಟ್ಟದ್ದು ಅಭಿನಂದನೀಯವಾಗಿದೆ.